19 April 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮವರಿಂದಲೇ ನಮಗೆ ನೋವು ಉಂಟಾದರೆ ಅದು ನಮ್ಮ ಹಿಂದಿನ ಜನ್ಮದ ಕರ್ಮ ಫಲ, ಈ ಜನ್ಮದಲ್ಲಿ ಕಾಡುತ್ತಿದೆ ಎಂದರ್ಥ!

-ಸ್ನೇಹಾ ಆನಂದ್

info.varthaman@gmail.com


ಅಭಿವೃದ್ಧಿಗೆ ವೇಗ ನೀಡಿದ ಶಾಸಕ ಅನಿಲ್ ಚಿಕ್ಕಮಾದು ಪುಟ ಸಂ. 2


ನೂತನ ಜನಗಣತಿಯ ಆಧಾರದಲ್ಲಿ ಮಹಿಳಾ ಮೀಸಲಾತಿ ಜಾರಿಗೊಳಿಸಿ ಪುಟ ಸಂ. 3


ಬಾಡಿಗೆ ವಾಹನ ದರ ಪರಿಷ್ಕರಣೆ: ಉಪ ಸಮಿತಿ ರಚನೆಗೆ ನಿರ್ಧಾರ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 150 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಬಿಲ್ ಸೋಲು: ದೇಶದ ತಾಯಂದಿರ ಕ್ಷಮೆಯಾಚಿಸಿದ ಪ್ರಧಾನಿ ಮೋದಿ



ನವದೆಹಲಿ: ವಿರೋಧ ಪಕ್ಷಗಳ ಸಂಕುಚಿತ ಮತ್ತು ಸ್ವಾರ್ಥ ರಾಜಕಾರಣದಿಂದಾಗಿ ನಮ್ಮ ದೇಶದ ಮಹಿಳೆಯರು ಇದರ ಪರಿಣಾಮವನ್ನು ಅನುಭವಿಸಬೇಕಾಯಿತು. ಮಸೂದೆ ಸೋತಾಗ ಈ ವಂಶಾಡಳಿತ ಪಕ್ಷಗಳು ಸಂಸತ್ತಿನಲ್ಲಿ ಚಪ್ಪಾಳೆ ತಟ್ಟುತ್ತಿದ್ದವು ಎಂದು ಮೋದಿ ಕಿಡಿಕಾರಿದರು.

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಳ್ಳದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ದೇಶದ ಮಹಿಳೆಯರ ಕ್ಷಮೆಯಾಚಿಸಿದ್ದಾರೆ. ನಾನು ಇಂದು ನಮ್ಮ ದೇಶದ ತಾಯಂದಿರು, ಸಹೋದರಿಯರು ಮತ್ತು ಹೆಣ್ಣುಮಕ್ಕಳೊಂದಿಗೆ ಮಾತನಾಡಲು ಬಂದಿದ್ದೇನೆ. ನಮಗೆ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಲು ಸಾಧ್ಯವಾಗಲಿಲ್ಲ. ಇದಕ್ಕಾಗಿ ನಾನು ದೇಶದ ಮಹಿಳೆಯರಲ್ಲಿ ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇನೆ" ಎಂದು ಪ್ರಧಾನಿ ಮರುಕ ವ್ಯಕ್ತಪಡಿಸಿದರು. ಮಹಿಳಾ ಸಬಲೀಕರಣದ ಈ ಮಹತ್ವದ ಹೆಜ್ಜೆ ವಿಫಲವಾಗಿರುವುದು ದೇಶಕ್ಕೆ ಹಿನ್ನಡೆ ಎಂದು ಅವರು ಬಣ್ಣಿಸಿದರು.

ಮಸೂದೆ ವಿಫಲವಾದ ಬೆನ್ನಲ್ಲೇ ವಿರೋಧ ಪಕ್ಷಗಳ ವಿರುದ್ಧ ತೀವ್ರವಾಗಿ ವಾಗ್ದಾಳಿ ನಡೆಸಿದ ಮೋದಿ, ವಿಪಕ್ಷಗಳು ಸಾರ್ವಜನಿಕ ಹಿತಾಸಕ್ತಿಗಿಂತ ರಾಜಕೀಯಕ್ಕೇ ಹೆಚ್ಚಿನ ಆದ್ಯತೆ ನೀಡಿವೆ ಎಂದು ಆರೋಪಿಸಿದರು. "ವಿರೋಧ ಪಕ್ಷಗಳ ಸಂಕುಚಿತ ಮತ್ತು ಸ್ವಾರ್ಥ ರಾಜಕಾರಣದಿಂದಾಗಿ ನಮ್ಮ ದೇಶದ ಮಹಿಳೆಯರು ಇದರ ಪರಿಣಾಮವನ್ನು ಅನುಭವಿಸಬೇಕಾಯಿತು. ಮಸೂದೆ ಸೋತಾಗ ಈ ವಂಶಾಡಳಿತ ಪಕ್ಷಗಳು ಸಂಸತ್ತಿನಲ್ಲಿ ಚಪ್ಪಾಳೆ ತಟ್ಟುತ್ತಿದ್ದವು" ಎಂದು ಅವರು ಕಿಡಿಕಾರಿದರು. ಕಾಂಗ್ರೆಸ್, ಟಿಎಂಸಿ, ಡಿಎಂಕೆ ಮತ್ತು ಸಮಾಜವಾದಿ ಪಕ್ಷಗಳು

## ಟಿಟಿ ವಾಹನ ಉರುಳಿಬಿದ್ದು ಶಿಕ್ಷಕರು ಸೇರಿ 9 ಮಂದಿ ಸಾವು

**ಚೆನ್ನೈ:** ಘಾಟ್‌ನಲ್ಲಿ ಟಿಟಿ ವಾಹನ ಪಲ್ಟಿಯಾಗಿ ಪ್ರವಾಸಕ್ಕೆ ಹೋಗಿದ್ದ ಒಂದೇ ಶಾಲೆಯ ಸಿಬ್ಬಂದಿ, ಶಿಕ್ಷಕರು ಸೇರಿದಂತೆ 9 ಮಂದಿ ಸಾವನ್ನಪ್ಪಿರುವ ಘಟನೆ ತಮಿಳುನಾಡಿನ ವಾಲ್ಪರೈ ಬೆಟ್ಟದಲ್ಲಿ ನಡೆದಿದೆ.

ಮೃತರನ್ನು ಅಜಿತಾ (54), ರಾಮ್ಲಾ (52). ಸುಹ್ರಾ (43), ಆಶಾ (41), ಮಜೀರ್ (43), ಸಜಿತಾ (45), ಶಕೀಲಾ (37), ರುಕಿಯಾ (39) ಮತ್ತು ಹಿಶಾಮ್ (12) ಎಂದು ಗುರುತಿಸಲಾಗಿದೆ. ಮೃತರೆಲ್ಲರು ಕೇರಳದ ಮಲಪ್ಪುರಂ ಜಿಲ್ಲೆಯ ಪಾಂಗ್‌ನ ಪಲ್ಲಿಪರಂಬುವಿನ ಸರ್ಕಾರಿ ಎಲ್‌ಪಿ ಶಾಲೆ ಐವರು ಶಿಕ್ಷಕರು ಹಾಗೂ ಸಿಬ್ಬಂದಿ. ಬೇಸಿಗೆ ರಜೆ ಹಿನ್ನೆಲೆ ಎಲ್ಲರೂ ತಮಿಳುನಾಡಿನ ವಾಲ್ಪರೈ ಬೆಟ್ಟವನ್ನು ವೀಕ್ಷಿಸಲು ಹೋಗಿದ್ದರು. ಬೆಟ್ಟದಿಂದ ವಾಪಸ್ಸಾಗುವಾಗ ಘಾಟ್‌ನಲ್ಲಿ ಈ ಅವಘಡ ಸಂಭವಿಸಿದೆ. ಹೇರ್

ಪುಟ 2ಕ್ಕೆ



## ತೃತೀಯ ಭಾಷೆಗೆ ಅಂಕ: ಆದೇಶ ಮರುಪರಿಶೀಲನೆಗೆ ಸರ್ಕಾರದ ಅರ್ಜಿ

**ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿ ತೃತೀಯ ಭಾಷೆಗೆ ಗ್ರೇಡ್ ಬದಲಿಗೆ ಅಂಕ ನೀಡುವ ಆದೇಶವನ್ನು ಮರು ಪರಿಶೀಲಿಸುವಂತೆ ರಾಜ್ಯ ಸರ್ಕಾರ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿದೆ.

ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಮಾಡಬೇಕೆಂದು ರಾಜ್ಯ ಸರ್ಕಾರ ಮನವಿ ಮಾಡಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಮತ್ತು ಎನ್ ಎಸ್ ಕ್ಯೂ ಎಫ್ ವಿಷಯಗಳಿಗೆ ಅಂಕದ ಬದಲು ಗ್ರೇಡ್ ನೀಡುವುದಾಗಿ ಸಚಿವ ಮಧು ಬಂಗಾರಪ್ಪ ಪ್ರಕಟಿಸಿದ್ದರು. ಈ ಕ್ರಮ ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ನಾಯ್ಕ್, ಉಡುಪಿಯ ಅನುಷಾ ಮತ್ತು ಸುದೀಕ್ಷಾ ಅವರು ಹೈಕೋರ್ಟ್ ಗೆ ತಕರಾರು ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರ ಪೀಠ, 2025–26ರ ಎಸ್ ಎಸ್‌ಎಲ್‌ಸಿ ಪರೀಕ್ಷೆಯ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ನಿಯಮದಂತೆ ಮೌಲ್ಯಮಾಪನ ನಡೆಸಬೇಕು. ಹಿಂದಿ ಸೇರಿ ತೃತೀಯ

ಪುಟ 2ಕ್ಕೆ




### ಉತ್ತರ ಪತ್ರಿಕೆ ಮೌಲ್ಯಮಾಪನ

2025–26ನೇ ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನವನ್ನು ಪರೀಕ್ಷಾ ಅಧಿಸೂಚನೆ ಹೊರಡಿಸಿದ ದಿನಾಂಕದ ವೇಳೆ ಪ್ರಚಲಿತದಲ್ಲಿದ್ದ ನಿಯಮಗಳ ಪ್ರಕಾರವೇ ನಡೆಸಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿದೆ. ಮೂರನೇ ಭಾಷೆಯ ಉತ್ತರ

ಪುಟ 2ಕ್ಕೆ

## ನರಹಂತಕ ಕಾಡಾನೆ ಸೆರೆ



**ಹಾಸನ:** ಬೇಲೂರು ತಾಲೂಕಿನ ಕಾನಳ್ಳಿ ಅರಣ್ಯ ಪ್ರದೇಶದಲ್ಲಿ ನರಹಂತಕ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಶನಿವಾರ ಸೆರೆಹಿಡಿದಿದ್ದಾರೆ. ಮೂರನೇ ದಿನದ ಕಾರ್ಯಾಚರಣೆ ಆರಂಭಿಸಿದ್ದ ಇಟಿಎಫ್ ಸಿಬ್ಬಂದಿ ಮುಂಜಾನೆಯೇ ಕಾಡಾನೆ ಇರುವ ಸ್ಥಳವನ್ನು ಪತ್ತೆ ಮಾಡಿದ್ದರು. ದೈತ್ಯಾಕಾರದ ಕಾಡಾನೆ ಜೊತೆ ಕ್ಯಾಪ್ಟನ್ ಕಾಡಾನೆ ಸಹ ಇತ್ತು. ಈ ವೇಳೆ ಕುಮ್ಕಿ ಆನೆಗಳೊಂದಿಗೆ ತೆರಳಿ ನರಹಂತಕ ಕಾಡಾನೆಗೆ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆಹಿಡಿಯಲಾಯಿತು.

ಚುಚ್ಚುಮದ್ದು ನೀಡುತ್ತಿದ್ದಂತೆ ನರಹಂತಕ ಒಂಟಿಕೋರೆ ಕಾಡಾನೆ ಹಾಗೂ ಕ್ಯಾಪ್ಟನ್ ಕಾಡಾನೆ ಜೊತೆಯಲ್ಲಿಯೇ ಓಡಲಾರಂಭಿಸಿದ್ದವು. ಬೆನ್ನಟ್ಟಿದ ಕಾರ್ಯಾಚರಣೆ ತಂಡ ಎರಡು ಕಾಡಾನೆಗಳನ್ನು ಬೇರ್ಪಡಿಸಿತು. ಸ್ವಲ್ಪ ದೂರು ಓಡಿ ಪ್ರಜ್ಞೆತಪ್ಪಿ ಬಿದ್ದ ಕಾಡಾನೆಯನ್ನು ಕುಮ್ಕಿ ಆನೆಗಳು ಸುತ್ತುವರಿದವು. ಬಳಿಕ ಕಾಡಾನೆಗೆ ನೀರು ಹಾಕಿ ಆರೈಕೆ ಮಾಡಿ ಹಗ್ಗದಲ್ಲಿ ಕಟ್ಟಲಾಯಿತು. ನರಹಂತಕ ಕಾಡಾನೆ ಸೆರೆಯಿಂದ ಬೇಲೂರು ಭಾಗದ ಜನರು ನಿಟ್ಟುಸಿರು ಬಿಟ್ಟಿದ್ದಾರೆ.

## ದಕ್ಷಿಣದಲ್ಲೂ 'ಸುಪ್ರೀಂ' ಪೀಠ ಸ್ಥಾಪಿಸಿ: ಸಿಎಂ

### ಮುಖ್ಯ ನ್ಯಾಯಮೂರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ

**ಬೆಂಗಳೂರು:** ದಕ್ಷಿಣ ಭಾರತದಲ್ಲಿಯೂ ಸುಪ್ರೀಂ ಕೋರ್ಟ್ ಪೀಠ ಸ್ಥಾಪನೆ ಅಗತ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದರು.

ಜಿಕೆವಿಕೆಯಲ್ಲಿ ನಡೆದ ರಾಜ್ಯ ಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ದಕ್ಷಿಣ ಭಾರತದಲ್ಲಿ ಸುಪ್ರೀಂ ಕೋರ್ಟ್ ಪೀಠ ಸ್ಥಾಪನೆಯ ಅವಶ್ಯಕತೆ ಇದೆ ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯ ಮೂರ್ತಿಗಳ ಮುಂದೆ ಪ್ರತಿಪಾದಿಸಿದರು.



ಜಗತ್ತಿನ ಕೃತಕ ಬುದ್ಧಿಮತ್ತೆಯ ಯುಗದಲ್ಲಿ, ನ್ಯಾಯಾಂಗದ ಮರುಕಲ್ಪನೆ ಎಂಬ ಈ ಸಮ್ಮೇಳನ ಅತ್ಯಂತ ಮಹತ್ವದ್ದಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಕಾನೂನು ಮತ್ತು ತಂತ್ರಜ್ಞಾನ ಬೇರೆ ಬೇರೆ ಕ್ಷೇತ್ರಗಳಲ್ಲ. ಪರಸ್ಪರ ಸಂಬಂಧ ಹೊಂದಿರುವ ಶಕ್ತಿಗಳಾಗಿವೆ. ಕೃತಕ ಬುದ್ಧಿಮತ್ತೆ ಸಾಕ್ಷ್ಯಗಳ ವಿಶ್ಲೇಷಣೆ, ವಾಸ್ತವಾಂಶಗಳ ಅರ್ಥೈಸುವಿಕೆ ಮತ್ತು ತೀರ್ಪು ನೀಡುವ ವಿಧಾನಗಳನ್ನು ಬದಲಾಯಿಸುವ ಶಕ್ತಿಯಾಗಿದೆ. ಇದು ಉತ್ತಮ ಪ್ರಕರಣ ನಿರ್ವಹಣೆ ಮತ್ತು ಬಾಕಿ ಇರುವ ಪ್ರಕರಣಗಳ




ಕಡಿತಕ್ಕೆ ಸಹಾಯ ಮಾಡುತ್ತದೆ. ಆದರೆ ಇದರಿಂದ ಕೆಲವು ಸಮಸ್ಯೆಗಳೂ ಉಂಟಾಗುತ್ತವೆ. ಆಲ್ಗಾರಿಥಮ್‌ಗಳ ಪಕ್ಷಪಾತವು ಕಾನೂನಿನ ಮುಂದೆ ಸಮಾನತೆಯನ್ನು ಹಾನಿಗೊಳಿಸಬಹುದು. ಸ್ಪಷ್ಟತೆ ಇಲ್ಲದ ವ್ಯವಸ್ಥೆಗಳು ನ್ಯಾಯಾಂಗದ ತೀರ್ಪುಗಳ ಮೂಲತತ್ವವನ್ನು ದುರ್ಬಲಗೊಳಿಸಬಹುದು ಎಂದು ಅಭಿಪ್ರಾಯಪಟ್ಟರು.

ಭವಿಷ್ಯದ ನ್ಯಾಯಾಧೀಶರು ಕಾನೂನು ಜ್ಞಾನದ ಜೊತೆಗೆ ತಾಂತ್ರಿಕ ಅರಿವನ್ನೂ ಹೊಂದಿರಬೇಕು. ಎಐ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಮೇಲೆ ಪರಿಣಾಮ ಬೀರುವ ಪ್ರಮುಖ ಪ್ರಶ್ನೆಯಾಗಿದೆ. ಸರಿಯಾದ ನಿಯಂತ್ರಣ ಇಲ್ಲದೆ ಎಐ ಬಳಕೆ ಸಮಾಜದ ಅಸಮಾನತೆಗಳನ್ನು ಹೆಚ್ಚಿಸಬಹುದು. ಇನ್ನೂ ಪ್ರಕರಣಗಳ ಬಾಕಿ ಇರುವ ಸಮಸ್ಯೆ ಗಂಭೀರವಾಗಿದೆ. ಇದನ್ನು ತಂತ್ರಜ್ಞಾನ ಹಾಗೂ ವ್ಯವಸ್ಥಾತ್ಮಕ

ಪುಟ 2ಕ್ಕೆ

## ಸಿದ್ದು ಆಪ್ತರಿಗೆ ಡಿಕೆಶಿ 'ಗೇಟ್‌ಪಾಸ್'

### ಸಿದ್ದರಾಮಯ್ಯ ಜನರ ಪಾಲಿಗೆ ಕುತಂತ್ರಿ: ಆರ್.ಅಶೋಕ್ ಟೀಕೆ

**ಬೆಂಗಳೂರು:** ಸಿದ್ದರಾಮಯ್ಯ ಆಪ್ತರನ್ನು ಡಿ.ಕೆ.ಶಿವಕುಮಾರ್ ಹುಡುಕಿ, ಹುಡುಕಿ ಹೊಡೆದು ಹಾಕುತ್ತಿದ್ದಾರೆ. ಅವರಿಗೆ ಗೇಟ್ ಪಾಸ್ ಕೊಡೋದ್ರಲ್ಲಿ ಸಕ್ಸಸ್ ಕೂಡ ಆಗುತ್ತಿದ್ದಾರೆಂದು ವಿಪಕ್ಷ ನಾಯಕ ಆರ್. ಅಶೋಕ್ ವ್ಯಂಗ್ಯವಾಡಿದರು.

ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ ಶಿವಕುಮಾರ್ ಬಣಗಳ ನಡುವೆ ಆಂತರಿಕ ಸಂಘರ್ಷ ತೀವ್ರಗೊಂಡಿದೆ. ಸಿದ್ದರಾಮಯ್ಯ ಸಣ್ಣ ಸಣ್ಣ ಇಲಿಗಳನ್ನು ಹೊಡೆಯುತ್ತಿದ್ದರೆ, ಡಿ.ಕೆ.ಶಿವಕುಮಾರ್ ದೊಡ್ಡ ದೊಡ್ಡ ಹುಲಿಗಳನ್ನು ಹೊಡೆಯುತ್ತಿದ್ದಾರೆಂದು ಲೇವಡಿ ಮಾಡಿದರು.

ಸಂಪುಟದಿಂದ ಹೊರಹಾಕಲ್ಪಟ್ಟ ರಾಜಣ್ಣ, ನಾಗೇಂದ್ರ ಮತ್ತು ಹೊರಹೋಗಲಿರುವ ಜಮೀರ್ ಅವರಂತಹ ಸಿದ್ದರಾಮಯ್ಯ ಬೆಂಬಲಿಗರನ್ನು ವ್ಯವಸ್ಥಿತವಾಗಿ ಪಕ್ಷದಿಂದ ದೂರ ಮಾಡಲಾಗುತ್ತಿದೆ. ಸಿದ್ದರಾಮಯ್ಯ ಬೆಂಬಲಿಗರಿಗೆ ಕಾಂಗ್ರೆಸ್‌ನಲ್ಲಿ ಉಳಿಗಾಲವಿಲ್ಲ. ಒಟ್ಟಾರೆ ಕಾಂಗ್ರೆಸ್ ಪಕ್ಷವು ನಾಯಕತ್ವವಿಲ್ಲದೆ ಬೀದಿ ಭಿಕಾರಿಯಾಗಿದೆ ಎಂದು ಅವರು ಟೀಕಿಸಿದರು.



ಸಿಎಂ ಸಿದ್ದರಾಮಯ್ಯ ರಾಜ್ಯದ ಪಾಲಿಗೆ ಕುತಂತ್ರಿಯಾಗಿದ್ದಾರೆ. ಸದ್ದಿಲ್ಲದೆ ವಿದ್ಯುತ್ ದರ ಏರಿಕೆ ಮಾಡಿದ್ದಾರೆ. ಜಿಬಿಎ ಚುನಾವಣೆ ಬರುವುದರೊಳಗೆ ಇನ್ನಷ್ಟು ತೆರಿಗೆ ಏರಿಕೆಗೆ ಸಿದ್ಧತೆ ನಡೆದಿದೆ. ಜನರ ಪಾಲಿಗೆ ಮಾರಿ ಹಬ್ಬ ಕಾದಿದೆ ಎಂದು ಆರೋಪಿಸಿದರು.

## ದಕ್ಷಿಣ ಆಫ್ರಿಕಾದ 4 ಚೀತಾಗಳು ಆಗಮನ

**ಬೆಂಗಳೂರು:** ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ದಕ್ಷಿಣ ಆಫ್ರಿಕಾದ ನಾಲ್ಕು ಚೀತಾಗಳು ಬಂದಿವೆ ಎಂದು ಶನಿವಾರ ಅಧಿಕಾರಿಗಳು ತಿಳಿಸಿದ್ದಾರೆ.

ಎರಡು ಹೆಣ್ಣು ಸೇರಿದಂತೆ ಒಟ್ಟು ನಾಲ್ಕು ಚೀತಾಗಳನ್ನು ಆಫ್ರಿಕಾದ ಪ್ಯಾರಟ್ ಪಾರ್ಕ್‌ನಿಂದ ತರಲಾಗಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಚಿವ ಈಶ್ವರ್ ಖಂಡ್ರೆ ಬರಮಾಡಿಕೊಂಡರು. ನಂತರ ಅವುಗಳನ್ನು ಬನ್ನೇರುಘಟ್ಟ

ಪುಟ 2ಕ್ಕೆ




## ಕೇಂದ್ರ ಸರ್ಕಾರಿ ನೌಕರರಿಗೆ ಶೇ.2 ತುಟ್ಟಿಭತ್ಯೆ ಹೆಚ್ಚಳ

**ನವದೆಹಲಿ:** ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಸರ್ಕಾರ ಶನಿವಾರ ಗುಡ್ ನ್ಯೂಸ್ ನೀಡಿದೆ. ತುಟ್ಟಿಭತ್ಯೆಯನ್ನು (ಡಿಎ) ಶೇ.2ರಷ್ಟು ಹೆಚ್ಚಳ ಮಾಡಿದೆ.

ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆಯನ್ನು ಶೇ.2ರಷ್ಟು ಹೆಚ್ಚಳ ಮಾಡಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ತುಟ್ಟಿಭತ್ಯೆ ಶೇ.58ರಿಂದ ಶೇ.60ಕ್ಕೆ ಏರಿಕೆಯಾಗಲಿದೆ. ಡಿಎ ಹೆಚ್ಚಳವು ಜನವರಿ 1, 2026 ರಿಂದಲೇ ಪೂರ್ವಾನ್ವಯ ಆಗಲಿದೆ. ಇದರಿಂದ 1.15 ಕೋಟಿಗೂ ಹೆಚ್ಚು ಕೇಂದ್ರ ಸರ್ಕಾರಿ ನೌಕರರು ಹಾಗೂ ಪಿಂಚಣಿದಾರರಿಗೆ ಅನುಕೂಲವಾಗಲಿದೆ.

## ಅಲ್ಪಸಂಖ್ಯಾತರನ್ನು ನಿರ್ಲಕ್ಷ್ಯ ಮಾಡಿಲ್ಲ: ಪರಂ



**ಬೆಂಗಳೂರು:** ಮುಸ್ಲಿಮರು ಕಾಂಗ್ರೆಸ್ ಪಕ್ಷದ ಬೆನ್ನಿಗೆ ನಿಂತಿದ್ದಾರೆ. ಕಾಂಗ್ರೆಸ್ ಅಲ್ಪಸಂಖ್ಯಾತರನ್ನ ನಿರ್ಲಕ್ಷ್ಯ ಮಾಡಿಲ್ಲ. ಅವರನ್ನು ಗುರಿಯಾಗಿಸುವ ಪ್ರಶ್ನೆಯೇ ಇಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು, ಮುಸ್ಲಿಮರು ಯಾವತ್ತೂ ಸಹೋದರರಿದ್ದಂತೆ. ಕಾಂಗ್ರೆಸ್ ಅಲ್ಪಸಂಖ್ಯಾತರನ್ನ ನಿರ್ಲಕ್ಷ್ಯ ಮಾಡಿಲ್ಲ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಆಪ್ತರನ್ನ ರಕ್ಷಿಸು ವಲ್ಲಿ ಅಸಹಾಯಕರಾಗಿದ್ದಾರೆ ಎಂಬ

ಪುಟ 2ಕ್ಕೆ

## ಹಳೆಯ ಮಸೂದೆ ಜಾರಿಗೆ ಪ್ರಿಯಾಂಕ ಗಾಂಧಿ ಸವಾಲು

**ನವದೆಹಲಿ:** ಈ ಹಿಂದಿನ ಮೂಲ ಮಹಿಳಾ ಮೀಸಲಾತಿ ಮಸೂದೆಯನ್ನು ಮತ್ತೆ ಮಂಡಿಸುವಂತೆ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಶನಿವಾರ ಕೇಂದ್ರ ಸರ್ಕಾರಕ್ಕೆ ಸವಾಲು ಹಾಕಿದರು.

ಸುದ್ದಿಸಂಸ್ಥೆ ಜೊತೆ ಶನಿವಾರ ಮಾತನಾಡಿದ ಪ್ರಿಯಾಂಕಾ ಗಾಂಧಿ, ಹಿಂದೆ ಎಲ್ಲಾ ರಾಜಕೀಯ ಪಕ್ಷಗಳಿಂದ ಒಮ್ಮತದಿಂದ ಸ್ವೀಕರಿಸಿದ್ದ ಮಸೂದೆಯನ್ನು ಮರಳಿ ತರುವಂತೆ ಸರ್ಕಾರಕ್ಕೆ ಸವಾಲು ಹಾಕಿದರು. ಎಲ್ಲಾ ಪಕ್ಷಗಳಿಂದ ಅಂಗೀಕರಿಸಲ್ಪಟ್ಟ ಹಳೆಯ ಮಹಿಳಾ ಮಸೂದೆಯನ್ನು ಸೋಮವಾರವೇ ಕೇಂದ್ರ ಸರ್ಕಾರ ಮಂಡಿಸಬೇಕು.



ಸೋಮವಾರ ಸಂಸತ್ ಅಧಿವೇಶನ ನಡೆಸಿ ಹಳೆಯ ಮಸೂ ದೆಯನ್ನು ತನ್ನಿ ಯಾರು ಮಹಿಳಾ ವಿರೋಧಿ ಎಂಬುದನ್ನು ಆಗ ನೋಡೋಣ.

ಪುಟ 2ಕ್ಕೆ

## ಮತ್ತೆ ಹಾರ್ಮುಜ್ ಬಂದ್

**ಟೆಹ್ರಾನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಬಂದರುಗಳ ಮೇಲೆ ನೌಕಾ ದಿಗ್ಬಂಧನವನ್ನು ಮುಂದುವರಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ ಸ್ವಲ್ಪ ಸಮಯಲ್ಲೇ ಮತ್ತೆ ಹಾರ್ಮುಜ್ ಜಲಸಂಧಿಗೆ ಕಟ್ಟುನಿಟ್ಟಿನ ನಿರ್ಬಂಧ ವಿಧಿಸುವುದಾಗಿ ಇರಾನ್ ಶನಿವಾರ ಘೋಷಿಸಿದೆ.

ಇರಾನ್ ಬಂದರುಗಳಿಗೆ ಮತ್ತು ಅಲ್ಲಿಂದ ಪ್ರಯಾಣಿಸುವ ಹಡಗುಗಳ ಮೇಲೆ ನೌಕಾ ದಿಗ್ಬಂಧನವನ್ನು ಮುಂದುವರಿಸುವ ಮೂಲಕ ಅಮೆರಿಕ ತಾನು ನೀಡಿದ ಭರವಸೆ ಹುಸಿ ಮಾಡಿದೆ ಎಂದು ಇರಾನ್ ಕೇಂದ್ರ ಮಿಲಿಟರಿ ಕಮಾಂಡ್ ಹೇಳಿದೆ.

ಪುಟ 2ಕ್ಕೆ



## ಮಸೂದೆ ಸೋಲಿಗೆ ಬಿಜೆಪಿ ಹೊಣೆ

### ಮಹಿಳಾ ಮೀಸಲಿಗೆ ಕಾಂಗ್ರೆಸ್ ವಿರೋಧವಿಲ್ಲ: ಸಿದ್ದರಾಮಯ್ಯ

**ಬೆಂಗಳೂರು:** ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿ ಅಲ್ಲ. ಬಿಜೆಪಿ ರಾಜಕೀಯ ಮಾಡಲು ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯನ್ನು ಒಟ್ಟಾಗಿ ಸಂವಿಧಾನದ ತಿದ್ದುಪಡಿ ಮಾಡಲು ಮುಂದಾದ ಹಿನ್ನೆಲೆಯಲ್ಲಿ ಸೋಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯೆ ನೀಡಿದರು. ಬಿಜೆಪಿಯವರು ರಾಜಕೀಯ ಮಾಡುವುದಕ್ಕಾಗಿ ಮಹಿಳಾ ಮೀಸಲಾತಿ ಮತ್ತು ಡಿಲಿಮಿಟೇಷನ್ ಎರಡು ಒಟ್ಟಿಗೆ ತಂದರು. ಕಾಂಗ್ರೆಸ್ ಡಿಲಿಮಿಟೇಷನ್‌ಗೆ ಮಾತ್ರ ವಿರೋಧ ಮಾಡಿತ್ತು. ನಾವು ಮಹಿಳಾ ಮೀಸಲಾತಿಗೆ ವಿರೋಧ ಇಲ್ಲ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಮಹಿಳಾ ಮೀಸಲಾತಿ ಪರವಿದೆ. ನಾವು ಮಹಿಳಾ ಮೀಸಲಾತಿಗೆ ವಿರೋಧ ಇಲ್ಲ. 2023ರಲ್ಲಿ ಸಂಸತ್‌ನಲ್ಲಿ ಬಿಲ್ ಪಾಸ್ ಆಗಿದೆ. ಅದನ್ನು ಅವರು ಜಾರಿ ಮಾಡಬೇಕು. ಮುಂದಿನ ಚುನಾವಣೆಗೆ ಮೀಸ



ಲಾತಿ ಜಾರಿ ಮಾಡಲಿ ಎಂದು ಒತ್ತಾಯಿಸಿದರು.


ಬಿಜೆಪಿ ನಾಯಕರು ಸಂವಿಧಾನಕ್ಕೆ ತಿದ್ದುಪಡಿ ತರಲು ಹೋಗಿದ್ದಕ್ಕೆ ಬಿಲ್ ಬಿದ್ದು ಹೋಗಿದೆ. ಮಹಿಳಾ ಮೀಸಲಾತಿಗೆ ಮಾತ್ರ ಸಂವಿಧಾನದ ತಿದ್ದುಪಡಿ ಮಾಡಿದ್ದರೆ ಅದೊಂದೆ ಪಾಸ್ ಆಗ್ತಿತ್ತು. ರಾಜಕೀಯ ಉದ್ದೇಶಕ್ಕಾಗಿ ಅದನ್ನ ಮಿಕ್ಸ್ ಮಾಡಿ ಮಾಡಿದರು. ಅದಕ್ಕೆ ಮಸೂದೆ ಬಿದ್ದು ಹೋಯ್ತು ಎಂದು ತಿಳಿಸಿದರು.

## ರಾಜ್ಯದಲ್ಲಿ ಬಿಸಲಿನ ತಾಪ ಇನ್ನೂ ಏರಲಿದೆ ಹುಷಾರ್

**ಬೆಂಗಳೂರು:** ಕರ್ನಾಟಕ ತೀವ್ರ ಶಾಖದ ಅಲೆಯ ಹೊಡೆತಕ್ಕೆ ಸಿಲುಕಿದೆ. ಹಲವು ಜಿಲ್ಲೆಗಳಲ್ಲಿ ತಾಪಮಾನವು ಏರುತ್ತಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ 44 ಡಿಗ್ರಿಗೆ ತಲುಪಿದೆ. ಅಲ್ಲದೆ, ಬೆಂಗಳೂರಿನಲ್ಲಿ ಸಹ ಶಾಖದ ಮಟ್ಟದಲ್ಲಿ ತೀವ್ರ ಏರಿಕೆ ಕಂಡು ಬರುತ್ತದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಸಿದೆ.

ಕಲಬುರಗಿ ಜಿಲ್ಲೆಯಲ್ಲಿ 44–45 ಡಿಗ್ರಿಯಷ್ಟು ತಾಪಮಾನವಿದೆ. ಬಾಗಲಕೋಟೆ, ಕೊಪ್ಪಳ ಮತ್ತು ಬೀದರ್ ನಂತಹ ಜಿಲ್ಲೆಗಳು ನಿರಂತರವಾಗಿ 40 ಡಿಗ್ರಿಗಿಂತ ಹೆಚ್ಚಿನ ಗರಿಷ್ಠ ತಾಪಮಾನ ದಾಖಲಿಸುತ್ತಿವೆ.

ಬೆಂಗಳೂರಿನಲ್ಲಿ ಸಹ ತಾಪಮಾನವು ಗಮನಾರ್ಹವಾಗಿ ಏರುತ್ತಿದೆ. ನಗರದಲ್ಲಿ ಸುಮಾರು 36.6 ಡಿಗ್ರಿ ದಾಖಲಾಗಿದೆ. ತಾಪಮಾನವು 38 ಡಿಗ್ರಿಗೆ ತಲುಪಬಹುದು



ಎಂದು ಮುನ್ಸೂಚನೆ ನೀಡಿದೆ.

ರಾಜ್ಯದ ದಕ್ಷಿಣ ಪ್ರದೇಶಗಳು ಈಗಾಗಲೇ 38 ಡಿಗ್ರಿಗಿಂತ ಹೆಚ್ಚಿನ ಗರಿಷ್ಠ ತಾಪಮಾನವನ್ನು ಕಾಣುತ್ತಿವೆ. ಇದು ಋತುಮಾನದ ಸರಾಸರಿಗಿಂತ

ಪುಟ 2ಕ್ಕೆ


## ಕಾಂಗ್ರೆಸ್ ಮಹಿಳಾ ವಿರೋಧಿ ಮನಸ್ಥಿತಿ ಬದಲಾಗಿಲ್ಲ: ಎಚ್‌ಡಿಕೆ

**ಬೆಂಗಳೂರು:** ಲೋಕಸಭೆಯಲ್ಲಿ ಮಹಿಳಾ ಮೀಸಲಿಗೆ ಸೋಲುಂಟಾಗಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ವಿರುದ್ಧ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು. ಕಾಂಗ್ರೆಸ್‌ನ ಮಹಿಳಾ ವಿರೋಧಿ ಮನಸ್ಥಿತಿ ಬದಲಾಗಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

1996 ಮತ್ತು 2026ರ ಕರಾಳ ಇತಿಹಾಸ ಮರುಕಳಿಸಿದೆ. ಮೂರು ದಶಕಗಳ ನಂತರವೂ ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ಮನಸ್ಥಿತಿ ಕೊಂಚವೂ ಬದಲಾಗಿಲ್ಲ ಎನ್ನುವುದಕ್ಕೆ ಲೋಕಸಭೆ ಮತ್ತೊಮ್ಮೆ ಸಾಕ್ಷಿಯಾಯಿತು ಎಂದು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಎಚ್‌ಡಿಕೆ ಅಸಮಾಧಾನ ಹೊರಹಾಕಿದ್ದಾರೆ.

ಮಹಿಳಾ ಮೀಸಲು ಮಸೂದೆಯನ್ನು ಸೋಲಿಸಿದ ಕೂಟದ ಶಕ್ತಿಗಳನ್ನು ರಾಷ್ಟ್ರದ ನಾರಿಶಕ್ತಿ ಎಂದಿಗೂ ಕ್ಷಮಿಸುವುದಿಲ್ಲ. ಇದು ಮಾತೃಶಕ್ತಿಗೆ ಆಗಿರುವ ಅಪಮಾನ. ಇದಕ್ಕೆ ಕಾರಣರಾದ ಎಲ್ಲರೂ ತಕ್ಕ ಶಾಸ್ತಿ ಅನುಭವಿಸಬೇಕಾಗುತ್ತದೆ ಎಂದು ಕಿಡಿಕಾರಿದ್ದಾರೆ.





# ಅಭಿವೃದ್ಧಿಗೆ ವೇಗ ನೀಡಿದ ಶಾಸಕ ಅನಿಲ್ ಚಿಕ್ಕಮಾದು

## ಜನರೊಂದಿಗೆ ಜನತಾದಳ ಕಾರ್ಯಕ್ರಮದ ಪರಿಣಾಮ | ಸೋತರೂ ಬೀಗುತ್ತಿರುವ ಕೆ.ಎಂ.ಕೃಷ್ಣನಾಯಕ

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ/ಸರಗೂರು: ಶಾಸಕ ಅನಿಲ್ ಚಿಕ್ಕಮಾದು ಇತ್ತೀಚೆಗೆ ಕ್ಷೇತ್ರದಾದ್ಯಂತ ಮಿಂಚಿನ ಸಂಚಾರ ಕೈಗೊಂಡಿದ್ದಾರೆ. ಅಲ್ಲಲ್ಲಿ ಕೆಲ ಕಾಮಗಾರಿಗಳಿಗೆ ಭೂಮಿ ಪೂಜೆ ಮಾಡುತ್ತಿದ್ದಾರೆ. ಈ ಎಲ್ಲ ಬೆಳವಣಿಗೆಗಳು ಮಾ.27 ರಂದು ಪಟ್ಟಣದ ಸಂತೆ ಮೈದಾನದಲ್ಲಿ ನಡೆದ ಜನರೊಂದಿಗೆ ಜನತಾದಳ ಕಾರ್ಯಕ್ರಮದ ಪರಿಣಾಮವಿರಬಹುದು ಎಂಬ ಮಾತುಗಳು ಟೀ-ಅಂಗಡಿ, ಬಸ್ ನಿಲ್ದಾಣ, ಅರಳಿ ಕಟ್ಟೆ, ವಾಯುವಿಹಾರಿಗಳು ಹಾಗೂ ಜನರು ಗುಂಪಾಗಿ ಸೇರಿರುವ ಸ್ಥಳಗಳಲ್ಲಿ ಕೇಳಿ ಬರುತ್ತಿರುವ ಮಾತುಗಳು.

ಇತ್ತೀಚಿನ ನಾಲ್ಕೈದು ದಿನಗಳಲ್ಲಿ ನೂತನ ಕಾಮಗಾರಿಗಳಿಗೆ ಶರವೇಗದಲ್ಲಿ ಭೂಮಿ ಪೂಜೆ ನೆರವೇರಿಸುತ್ತಿರುವ ಶಾಸಕ ಅನಿಲ್ ಚಿಕ್ಕಮಾದು, ಕಳೆದ ವರ್ಷದ ಕೆಲವು ಕಾಮಗಾರಿಗಳ ಬಗ್ಗೆ ನಿರಾಸಕ್ತಿ ತೋರಿದ್ದಾರೆ. ವರ್ತಮಾನ ದಿನಪತ್ರಿಕೆ ವರದಿಯ ಪರಿಣಾಮ ಬೆಳತ್ತೂರು ಬಿ ಕಾಲೋನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಮಂಜೂರಾಗಿದ್ದ ಒಂದು ಕೊಠಡಿ, ಶಿರಮಹಳ್ಳಿ ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕೊಲ್ಲೇಗೌಡನಹಳ್ಳಿ ವೃತ್ತದಿಂದ, ಶಾಲೆ ವರೆಗೆ ಸಿಸಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿಗೆ ಪಂಚಾಯತ್ ರಾಜ್ ಇಲಾಖೆಯವರು 1 ಕೋ.ರೂ. ವೆಚ್ಚದ ಅಂದಾಜು ತಯಾರಿಸಿ ಹಣ ಬಿಡುಗಡೆಗೆ ಕೋರಿದ್ದಾರೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯವರು ಶಾಲೆಯ ಒಳಾಂಗಣದಲ್ಲಿ ಸಿಸಿ ರಸ್ತೆ, ಚರಂಡಿ, ಆಟದ ಮೈದಾನ ಮತ್ತು ಆಡಿಟೋರಿಯಂ ನಿರ್ಮಾಣಕ್ಕೆ 3 ಕೋ.ರೂ. ಅಂದಾಜು ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಎಲ್ಲ ಪ್ರಕ್ರಿಯೆಗಳು ನಡೆದು ವರ್ಷ ಸಮೀಪಿಸುತ್ತಿದೆ. ಆದರೆ, ಈ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಮಾಡುವಲ್ಲಿ ಶಾಸಕರು ಮರೆತಂತಿದೆ.

ಆಡಳಿತ ಪಕ್ಷ ಹಳಿ ತಪ್ಪಿದಾಗ ಸರಿದಾರಿಗೆ ತರುವ, ಶಾಸಕರ ತಪ್ಪುಗಳನ್ನು ತಿದ್ದುವ ಕೆಲಸ ಮಾಡಲು ವಿರೋಧ ಪಕ್ಷಗಳು ಈವರೆಗೂ ತಾಲೂಕಿನಲ್ಲಿ ಸಕ್ರಿಯವಾಗಿಲ್ಲ.



### ಸಮರಕ್ಕೆ ವೇದಿಕೆಯಾದ ಸಾಮಾಜಿಕ ಜಾಲತಾಣ

ಹಲವು ಅಂಶಗಳನ್ನು ಉಲ್ಲೇಖಿಸಿದ್ದ ವಿಷಯಗಳಿಗೆ ಪ್ರತಿಯಾಗಿ ತಾಲೂಕಿನಲ್ಲಿ ನಡೆದಿರುವ ಅಭಿವೃದ್ಧಿ ಪರ್ವದ ಬಗ್ಗೆ ಬಹಿರಂಗ ಚರ್ಚೆಗೆ ಬರುವಂತೆ ಕಾಂಗ್ರೆಸ್ ಮುಖಂಡರಾದ ಎಚ್.ಸಿ.ನರ ಸಿಂಹ ಮೂರ್ತಿ, ಅಜರ್, ಸೌಮ್ಯ ಮಂಜುನಾಥ್, ವಕ್ತಾರ ಅಶೋಕ್ ಅವರು ಅನಿಲ್ ಚಿಕ್ಕಮಾದು ಪರ ಬ್ಯಾಟ್ ಬೀಸಿ, ಬಹಿರಂಗ ಚರ್ಚೆಗೆ ಬರುವಂತೆ ಜೆಡಿಎಸ್ ನವರಿಗೆ ಪಂಥಾಹ್ವಾನ ನೀಡಿದ್ದರು. ಸವಾಲು ಸ್ವೀಕರಿಸಿದ್ದ ಜೆಡಿಎಸ್ ಕಾರ್ಯಕರ್ತರು ವೇದಿಕೆ ಸಿದ್ಧಪಡಿಸುವಂತೆ ಪತ್ರಿಕೆ, ದೃಶ್ಯ ಮಾಧ್ಯಮಗಳ ಮೂಲಕ ತಿಳಿಸಿದ್ದರು. ನಂತರ, ಉಭಯ ಕಾರ್ಯಕರ್ತರ ನಡುವಿನ ಸಮರ ಸಾಮಾಜಿಕ ಜಾಲತಾಣಗಳಲ್ಲಿ ತಾರಕಕ್ಕೇರಿತ್ತು.

### ಕೆಲಸಗಳ ಮೂಲಕ ಉತ್ತರ: ಅನಿಲ್ ಚಿಕ್ಕಮಾದು

ವಿಧಾನ ಸಭೆ ವಿಶೇಷ ಅಧಿವೇಶನ ಹಾಗೂ ವೈಯಕ್ತಿಕ ಕಾರಣದ ನಿಮಿತ್ತ ಈ ಎಲ್ಲ ಬೆಳವಣಿಗೆಗಳಿಂದ ದೂರವೇ ಉಳಿದಿದ್ದ ಶಾಸಕ ಅನಿಲ್ ಚಿಕ್ಕಮಾದು, ಹ್ಯಾಂಡ್ ಪೋಸ್ಟ್ ವೃತ್ತವನ್ನು ಹೈಟೆಕ್ ಸ್ಪರ್ಶದಲ್ಲಿ ನಿರ್ಮಾಣ, ಯರಹಳ್ಳಿಯಿಂದ ಕೃಷ್ಣಾಪುರದವರೆಗೆ ಜೋಡಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆಗೆ ನೆರವೇರಿಸಿ ಏ.15ರಂದು ಮಾತನಾಡಿ, ಅಭಿವೃದ್ಧಿ ಬಗ್ಗೆ ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ನನ್ನ ಕೆಲಸವನ್ನು ಮೆಚ್ಚಿಯೇ ಕ್ಷೇತ್ರದ ಜನತೆ ಪುನರಾಯ್ಕೆ ಮಾಡಿದ್ದಾರೆ. ಮತದಾರರ ನಂಬಿಕೆ ಉಳಿಸುವ ಕೆಲಸ ಮಾಡಿದ್ದೇನೆ. ಮುಂದೆಯೂ ಮಾಡುತ್ತೇನೆ ಎಂದು ತಿರುಗೇಟು ನೀಡಿದ್ದಾರೆ. ಇದೇ ವೇದಿಕೆಯಲ್ಲಿ ಮೈಮುಲ್ ಅಧ್ಯಕ್ಷ ಕೆ.ಈರೇಗೌಡ, ಕೆ.ಎಂ.ಕೃಷ್ಣನಾಯಕ ವಿರುದ್ಧ ಏಕವಚನ ಬಳಸಿ ಮಾತನಾಡಿದ ವಿಡಿಯೋವೊಂದು ವೈರಲ್ ಆಗಿದ್ದು, ವೈಯಕ್ತಿಕ ತೇಜೋವಧೆಯ ಚರ್ಚೆಗೆ ಕಾರಣವಾಗಿದೆ.

ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಪರಾಭವಗೊಂಡು ಎರಡನೇ ಸ್ಥಾನದಲ್ಲಿ (ವಿರೋಧ ಪಕ್ಷ) ಸ್ಥಾನದಲ್ಲಿದ್ದ ಬಿಜೆಪಿಯಲ್ಲಿದ್ದ ಕೆ.ಎಂ.ಕೃಷ್ಣನಾಯಕ ಕಮಲ ಬಿಟ್ಟು, ಜಾತ್ಯಾತೀತ ಜನತಾದಳ ಸೇರಿದ್ದಾರೆ. ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಈವರೆಗೂ ನಾಲ್ಕೈದು ಬಾರಿ ತಾಲೂಕಿಗೆ ಬಂದರೂ ಇಲ್ಲಿನ ರಾಜಕಾರಣದ ಬಗ್ಗೆ ತುಟಿಬಿಚ್ಚಿಲ್ಲ. ತಾಲೂಕು ಅಧ್ಯಕ್ಷ ಶಂಭೇಗೌಡ ವೈಯಕ್ತಿಕ ಕಾರಣ ನೀಡಿ ರಾಜೀನಾಮೆ ನೀಡಿ ಎರಡು ತಿಂಗಳು ಕಳೆದಿವೆ. ಅಧ್ಯಕ್ಷನಿಲ್ಲದ ಬಿಜೆಪಿ ಈಗ ನಾವಿಕನಿಲ್ಲದ ದೋಣಿಯಂತಾಗಿದೆ. ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ ಬಿಜೆಪಿ ವರಿಷ್ಠರೊಟ್ಟಿಗೆ ನಿಖಟ ಸಂಪರ್ಕ ಹೊಂದಿದ್ದಾರೆ. ಆದರೆ, ಪಕ್ಷ ಸೇರ್ಪಡೆ ಬಗ್ಗೆ ಅಧಿಕೃತಗೊಳಿಸ ದಿರುವುದು ಬಿಜೆಪಿಗರಲ್ಲಿ ಕೊಂಚ ನಿರಾಸೆ ಮೂಡಿಸಿದೆ.

ಅನಿಲ್ ಚಿಕ್ಕಮಾದು 34 ಸಾವಿರ ಮತಗಳ ಅಂತರಗಳೊಂದಿಗೆ ಎರಡನೆ ಅವಧಿಗೆ ಆಯ್ಕೆಯಾದ ನಂತರ, ಪೂರ್ಣಾವಧಿ ಮುಗಿಯುವಷ್ಟರಲ್ಲೇ ಕಾರ್ಯವೈಖರಿ ಬಗ್ಗೆ ಟೀಕೆಗಳು ತೆರೆಮರೆಯಲ್ಲಿ ನಡೆಯುತ್ತಿದ್ದವು. ಸಾರ್ವಜನಿಕ ಆಸ್ಪತ್ರೆಯ ಮುಂಭಾಗವಿದ್ದ ದೊಡ್ಡ ಆಲದ ಮರವನ್ನು ಅನಿಲ್ ಚಿಕ್ಕಮಾದು ಆಪ್ತರೊಬ್ಬರಿಗೆ ಅನುಕೂಲ ಮಾಡಲು ಕತ್ತರಿಸಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು.

ಇದನ್ನು ಖಂಡಿಸಿ ತಾಲೂಕಿನ ಹಿರಿಯ ರಾಜಕಾರಣಿ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಸ್ಥಳದಲ್ಲಿ ಮೊಕ್ಕಾಂ ಹೂಡಿ ಅಧಿಕಾರಿಗಳನ್ನು ತೀವ್ರ ತರಾಟೆಗೆ ತಗೆದುಕೊಳ್ಳುವುದರ ಜೊತೆ ಹಾಲಿ ಶಾಸಕರ ವಿರುದ್ಧ ಗರಂ ಆಗಿದ್ದರು. ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಆಗೊಮ್ಮೆ, ಈಗೊಮ್ಮೆ ಸಾಮಾಜಿಕ ಜಾಲತಾಣಗಳು, ಮಾಧ್ಯಮದ ಮೂಲಕ ಕಾಲೆಳೆಯುತ್ತಿದ್ದರೂ ಅಷ್ಟೇನು ಗಮನಸೆಳೆದಿರಲಿಲ್ಲ. ಸದಸ್ಯರ ಸೇರ್ಪಡೆ ಕಾರ್ಯಕ್ರಮ ಹಾಗೂ ಮೈಸೂರು ಭಾಗದಲ್ಲಿ ಪಕ್ಷ ಸಂಘಟಿಸಲು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜನರೊಂದಿಗೆ ಜನತಾದಳ ಕಾರ್ಯಕ್ರಮ ಮಾಡಿದ್ದರು. ಪಟ್ಟಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯ ಸಂಭಾವ್ಯ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ತಾಲೂಕಿನ ಅಭಿವೃದ್ಧಿ ಬಗ್ಗೆ ಆಡಿದ ಮಾತುಗಳು ಕಾಂಗ್ರೆಸ್ ಕಾರ್ಯಕರ್ತರನ್ನು ಕೆರಳಿಸಿತ್ತು.



### 3 ದಿನಗಳಲ್ಲಿ 20ಕ್ಕೂ ಹೆಚ್ಚು ಭೂಮಿ ಪೂಜೆ, ಒಂದೇ ದಿನ ಎಂಟು ಜನಸಂಪರ್ಕ ಸಭೆ

ಮೊದಲ ದಿನ ಯರಹಳ್ಳಿ ಹ್ಯಾಂಡ್ ಪೋಸ್ಟ್ ಅಲ್ಲಿ ಭೂಮಿ ಪೂಜೆ ನೆರವೇರಿಸಿದರೆ, ಮರು ದಿನ ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಾದ ಚಿಕ್ಕಬರಗಿ, ಬರಗಿಯಲ್ಲಿ ಜನಸಂಪರ್ಕ ಸಭೆ ನಡೆಸಿದ್ದಾರೆ. ಕಾಡಗೆರೆಯಲ್ಲಿ ರಸ್ತೆ ನಿರ್ಮಾಣಕ್ಕೆ ಅಡಿಗಲ್ಲು, ವಡೇರಹಳ್ಳಿ ಹಾಡಿಗೆ ಸಂಪರ್ಕ ರಸ್ತೆ ಪೂಜೆ, ಕಾನಹಳ್ಳಿ, ಹುಣಸೂರು ವೃತ್ತಕ್ಕೂ ಕಾಮಗಾರಿ ತಂದಿದ್ದಾರೆ. ಕಾಳನಹುಂಡಿ, ಶಿವಪುರ, ಮುಗುತನ ಮೂಲೆ, ಜಯಲಕ್ಷ್ಮೀಪುರ, ಎಂ.ಸಿ.ತಳಲು, ಚಿಕ್ಕಗುಂಡಿ ಗ್ರಾಮಗಳಲ್ಲಿ ಜನಸಂಪರ್ಕ ಸಭೆ ನಡೆಸಿ ಹಲವು ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದ್ದಾರೆ.ಏ.17ರ ಶುಕ್ರವಾರ ಕೋಟೆ ಪಟ್ಟಣದ ವಾರ್ಡ್‌ಗಳಾದ ಹನುಮಂತ ನಗರದ ಪರಿಶಿಷ್ಟ ಪಂಗಡ ಕಾಲೋನಿ, ಮೇಟಿಕುಪ್ಪೆ-ನಾಗನಹಳ್ಳಿ ಬೈಪಾಸ್ ರಸ್ತೆ, ಸರ್ವೀಸ್ ಸ್ಟೇಷನ್ ರಸ್ತೆ, ಶಿವಾಜಿ ರಸ್ತೆ, ಆಶ್ರಯ ಲೇಔಟ್, ಕೆ.ಎಚ್.ಬಿ. ಕಾಲೋನಿ, ಸಂತೇಮಾಳ, ಯರಹಳ್ಳಿ ಪ.ಜಾತಿ ಕಾಲೋನಿ, ಯರಹಳ್ಳಿ ಕಾವಲ್ ಕಾಲೋನಿ, ಕರೀಗೌಡರ ಕಾಲೋನಿ, ಸುದರ್ಶನ ಕಾಲೋನಿಗಳಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಅಡಿಗಲ್ಲಿಟ್ಟಿದ್ದಾರೆ. ಬೊಮ್ಮಲಾಪುರ ಸೇತುವೆಯಿಂದ ಬಸವರಾಜನಕಟ್ಟೆವರೆಗೆ ರೈಲ್ವೆ ಹಳಿ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಗೆ ಶನಿವಾರ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದ್ದಾರೆ.


ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಯವರ ಕಾರ್ಯಾಲಯ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಕೊಠಡಿ ಸಂಖ್ಯೆ: 127(ಎ), ಜಿಲ್ಲಾಡಳಿತ ಭವನ, ಚಾಮರಾಜನಗರ-571313
ದೂರವಾಣಿ ಸಂಖ್ಯೆ : 08226-222831, e-mail: ka.chamarajanagara.dudc@gmail.com
website: www.chamarajanagaradudc.mrc.gov.in
ಸಂಖ್ಯೆ : ಚಾಜಿನಕೋ/3ನೇ ವ್ಯಕ್ತಿ ತಪಾಸಣೆ/ಸಿಆರ್/195/2009-10 ದಿನಾಂಕ:17.04.2026

**ಟೆಂಡರ್ ಪ್ರಕಟಣೆ (2ನೇ ಕರೆ) – (ಕೆ.ಪಿ.ಪಿ ಪೋರ್ಟಲ್ ಮುಖಾಂತರ)**

ಚಾಮರಾಜನಗರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಳ್ಳುವ ವಿವಿಧ ಕಾಮಗಾರಿಗಳನ್ನು 3ನೇ ವ್ಯಕ್ತಿ ತಪಾಸಣೆಗೆ ಒಳಪಡಿಸುವ ಸಂಬಂಧ ಅರ್ಹ ಗುತ್ತಿಗೆದಾರರುಗಳಿಂದ/ಏಜೆನ್ಸಿ/ಸಂಸ್ಥೆಗಳಿಂದ ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ವಿವರ | ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ) | ಗುತ್ತಿಗೆ ಅವಧಿ |
|---|---|---|---|
| 1 | Providing Consultancy Services as 3rd party inspection for development works in all ULBs of Chamarajanagar District. (Improvement & Construction of road and drain, UGD, Drinking water supply system, parks development works, Building works, Indoor & outdoor works, Electrical work with maintenance work and procurement of all kinds of machines/materials and goods taken up under various schemes of ULBs and any other works assigned by Deputy Commissioner, Chamarajanagar District & Project Director from time to time) | 3.00 | 12 ತಿಂಗಳು |

ಅರ್ಹ ಗುತ್ತಿಗೆದಾರರಿಂದ/ ಸಂಸ್ಥೆ/ಏಜೆನ್ಸಿಯವರು www.kppp.karnataka.gov.in ನಲ್ಲಿ ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ವೇಳೆ : 27.04.2026 ಸಂಜೆ 5.00. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ : 28.04.2026 ಸಂಜೆ 5.00. ಹೆಚ್ಚಿನ ಮಾಹಿತಿ ಹಾಗೂ ವಿಧಿಸಿರುವ ಷರತ್ತುಗಳ ಸಂಬಂಧ ವಿವರಗಳನ್ನು ಕಛೇರಿ ವೇಳೆಯಲ್ಲಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ ಜಿಲ್ಲೆ ರವರನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/-ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ವಾಸಾಸಂಇ/ಚಾನಗರ/46/2026-27


## ಕಾಂಗ್ರೆಸ್ ವಿರುದ್ಧ ನಿರೀಕ್ಷಿತ ಅಪಪ್ರಚಾರ: ಮಹೇಶ್ ಕಿಡಿ

ಮೈಸೂರು: ಪಂಚರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿರುವಾಗಲೇ ವಿಶೇಷ ಅಧಿವೇಶನ ಕರೆದು ತರಾತುರಿಯಲ್ಲಿ ಮಹಿಳಾ ಮೀಸಲು ಮಸೂದೆಯೊಂದಿಗೆ ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ಅಂಗೀಕಾರಕ್ಕೆ ಯತ್ನಿಸಿದ್ದು ಕಾಂಗ್ರೆಸ್ ವಿರುದ್ಧ ನಿರೀಕ್ಷಿತ ಅಪಪ್ರಚಾರದ ವಿಫಲ ಪ್ರಯತ್ನ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ವಕ್ತಾರ ಕೆ. ಮಹೇಶ್ ತಿಳಿಸಿದರು.



ಮಹಿಳಾ ಮೀಸಲು ಮಸೂದೆಗೆ ಕಾಂಗ್ರೆಸ್ ಎಂದೂ ವಿರೋಧಿಸಿಲ್ಲ. ಈ ಮಸೂದೆಯೊಂದಿಗೆ ಕ್ಷೇತ್ರ ಪುನರ್ ವಿಂಗಡಣೆಗೆ ವಿರೋಧ ವ್ಯಕ್ತಪಡಿಸಿದೆ. ಆದರೆ ಎನ್ ಡಿಎ ಮೈತ್ರಿಕೂಟದ ಪಕ್ಷಗಳು ಕಾಂಗ್ರೆಸ್ ಮಹಿಳಾ ಮೀಸಲು ಮಸೂದೆ ವಿರೋಧಿಸಿದೆ ಎಂದು ಅಪಪ್ರಚಾರದಲ್ಲಿ ನಿರತವಾಗಿರುವುದು ಅಕ್ಷಮ್ಯ ಎಂದು ಹೇಳಿದ್ದಾರೆ.

ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲು ಕೊಡಬೇಕೆಂದು ಮೊದಲು ಪ್ರಯತ್ನಿಸಿದ್ದು ಕಾಂಗ್ರೆಸ್ ಎಂಬುದು ದೇಶದ ರಾಜಕಾರಣ ಬಲ್ಲವರಿಗೆ ತಿಳಿದಿದೆ. ತಮ್ಮ ರಾಜಕೀಯ ಲಾಭಕ್ಕಾಗಿ ಕುತಂತ್ರದ ರಾಜಕಾರಣ ಮಾಡುವ ಬಿಜೆಪಿಯವರಿಗೆ ದೇಶದ ಜನತೆ ಬುದ್ಧಿಕಲಿಸಬೇಕು ಎಂದು ತಿಳಿಸಿದ್ದಾರೆ. ಕ್ಷೇತ್ರ ಪುನರ್ ವಿಂಗಡಣೆಯೂ ದಕ್ಷಿಣದ ರಾಜ್ಯಗಳ ಪಾಲಿನ ಕರಾಳಶಾಸನವಾದ್ದರಿಂದ ಭಾರೀ ವಿರೋಧ ಬಂದಿತು. ಬಿಜೆಪಿಯ ಕುಟಿಲವಾದ ರಾಜಕಾರಣಕ್ಕೆ ಸೋಲಾಗಿದೆ. ಸೋಲನ್ನೂ ತಮ್ಮ ಲಾಭಕ್ಕೆ ಬಳಸಿಕೊಳ್ಳಲು ನಿಸ್ಸಿಮರಾದ ಬಿಜೆಪಿ ನಾಯಕರು, ಕಾಂಗ್ರೆಸ್ ವಿರುದ್ಧದ ತಮ್ಮ ಅಪಪ್ರಚಾರವನ್ನು ಮುಂದುವರಿಸಿರುವುದು ಖಂಡನೀಯ ಎಂದು ಹೇಳಿದರು.

## ಕೊಳವೆಬಾವಿ ಕಾರ್ಯ ಪರಿಶೀಲನೆ

ಚಾಮರಾಜನಗರ, ನಗರಸಭೆ 26 ನೇವಾರ್ಡಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾದ ಹಿನ್ನೆಲೆ ಶನಿವಾರ ವಾರ್ಡಿನಲ್ಲಿ ಕೊಳವೆಬಾವಿ ಕೊರೆಯುವ ಕಾರ್ಯ ಆರಂಭವಾಗಿದ್ದು, ಕ್ಷೇತ್ರದ ಶಾಸಕ ಸಿ.ಪುಟ್ಟರಂಗಶೆಟ್ಟಿ ಖುದ್ದು ವಾರ್ಡಿಗೆ ನಗರಸಭೆ ಅಧಿಕಾರಿಗಳ ಜತೆ ವೀಕ್ಷಿಸಿದರು.

ಈಚೆಗೆ ನಗರಸಭೆ ಕಚೇರಿಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ನಗರದಲ್ಲಿ ಕುಡಿಯುವ ನೀರು ಸಮಸ್ಯೆ ಹಿನ್ನೆಲೆ ತುರ್ತು ಸಭೆ ನಡೆಸಿ, ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವವಿದೆ ಅಲ್ಲಿ ಪಾಯಿಂಟ್ ಮಾಡುವ ಮೂಲಕ ಕೊಳವೆಬಾವಿ ಕೊರೆಸಿ, ಜನತೆಗೆ ನೀರುಕೊಡಬೇಕು ಎಂದು ಸೂಚನೆ ನೀಡಿದ್ದರು. ಆ ಸಂದರ್ಭದಲ್ಲಿ 26 ನೇವಾರ್ಡಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಶೀಘ್ರವೇ ಪರಿಹರಿಸುವಂತೆ ಶಾಸಕರು ಹಾಗೂ ನಗರಸಭೆಗೆ ಮನವಿ ಮಾಡಿದ್ದರು. ಶಾಸಕರ ಸೂಚನೆ ಮೇರೆಗೆ ನಗರಸಭೆ ಆಡಳಿತವರ್ಗ ನಗರಸಭೆ 26 ನೇವಾರ್ಡಿನಲ್ಲಿ ಕೊಳವೆಬಾವಿ ಕೊರೆಸುವ ಕಾರ್ಯ ನಡೆದಿದೆ. ಇದೇವೇಳೆ ಎಲ್ಲೆಲ್ಲಿ ಕುಡಿಯುವ ನೀರು ಸಮಸ್ಯೆ ಇದೆ ಎಂಬುದರ ಬಗ್ಗೆ ಎಂಜಿನಿಯರ್ಗಳು ಪರಿಶೀಲಿಸಿ, ಪಾಯಿಂಟ್ ಮಾಡಿಸುವ ಮೂಲಕ ಕೊಳವೆಬಾವಿಕೊರೆಸುವುದಕ್ಕೆ ಆದೇಶ ನೀಡಿದರು.



**ಸ್ವಾತಂತ್ರ್ಯ ನಂತರ ಬೆಳಕು ಕಂಡ ಜನರು**

## ಪೌರ ಕಾರ್ಮಿಕರ ಸನ್ಮಾನಿಸಿ ಸ್ತ್ರೀಶಕ್ತಿ ಸಂಭ್ರಮ

ಮೈಸೂರು: ನಗರದಲ್ಲಿ ಮಹಿಳಾ ಪೌರ ಕಾರ್ಮಿಕರನ್ನು ಸನ್ಮಾನಿಸಿ ಹಾಗೂ ಮಹಿಳೆಯರು ಬೈಕ್ ರ್ಯಾಲಿ ನಡೆಸುವ ಮೂಲಕ ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿರುವ ಕೇಂದ್ರ ಬಿಜೆಪಿ ನಡೆಯನ್ನು ಸ್ವಾಗತಿಸಿ ಸಂಭ್ರಮಿಸಿದರು.



ಮಹಿಳಾ ಶಕ್ತಿ ವೇದಿಕೆಯಿಂದ ನಗರದ ರಾಮಸ್ವಾಮಿ ವೃತ್ತದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಬಳಿಕ ನೂರಾರು ಮಂದಿ ಮಹಿಳೆಯರು ಜೆಎಲ್ ಬಿ ರಸ್ತೆ ಮೂಲಕ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದವರೆಗೆ ಬೈಕ ರ್ಯಾಲಿ ನಡೆಸಿದರು. ಇದೇ ವೇಳೆ 8ಕ್ಕೂ ಹೆಚ್ಚು ಪೌರ ಮಹಿಳಾ ಕಾರ್ಮಿಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಬಳಿಕ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನಮ್ಮ ಬಿಜೆಪಿ ಸರ್ಕಾರ ಮಹಿಳಾ ಮೀಸಲಾತಿ ನೀಡುವ ಮೂಲಕ ಮಹಿಳೆಯರ ಆತ್ಮಗೌರವ ಹೆಚ್ಚಿಸುವ ಕೆಲಸವನ್ನು ಮಾಡಿದ್ದಾರೆ. ರಾಜ್ಯದಲ್ಲಿಯೂ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಸರ್ಕಾರ ಮಹಿಳಾ ಮೀಸಲು ನೀಡಬೇಕು. ಅದನ್ನು ಬಿಟ್ಟು ಕೇಂದ್ರದಲ್ಲಿ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಮಹಿಳಾ ಮೀಸಲು ವಿರೋಧಿಸಿ ಮಹಿಳೆ ವಿರೋಧಿ ನಡೆ ತೋರಿದ್ದಾರೆ. ರಾಜ್ಯದಲ್ಲಿ ಗ್ಯಾರಂಟಿಯನ್ನು ಕೊಟ್ಟು ಅವರ ಗೌರವ, ಘನತೆಯನ್ನು ಹಾಳು ಮಾಡುತ್ತಿದೆ. ಆದರೆ, ಬಿಜೆಪಿ ಮಹಿಳಾ ಸಬಲೀಕರಣಕ್ಕಾಗಿ ಐತಿಹಾಸಿಕ ನಿರ್ಧಾರ ಕೈಗೊಂಡಿದೆ ಎಂದು ಹೇಳಿದರು.

ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಎಂ.ಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ, ಮಹಿಳಾಮೋರ್ಚಾ ಜಿಲ್ಲಾಧ್ಯಕ್ಷೆ ರೇಣುಕಾರಾಜು, ಗ್ರಾಮಾಂತರ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನಳಿನಾ, ಮಹಿಳಾಮೋರ್ಚಾ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ ಇನ್ನಿತರರು ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ಬಿಲ್ ಸೋಲು: ದೇಶದ ತಾಯಂದಿರ ಕ್ಷಮೆಯಾಚಿಸಿದ ಪ್ರಧಾನಿ ಮೋದಿ

ಮಸೂದೆಯನ್ನು ತಡೆಹಿಡಿದಿವೆ ಎಂದು ಅವರು ನೇರವಾಗಿ ದೂರಿದರು.

ಲೋಕಸಭೆಯಲ್ಲಿ ಶುಕ್ರವಾರ ನಡೆದ ಮತದಾನದ ವೇಳೆ ಸಂವಿಧಾನದ (131ನೇ ತಿದ್ದುಪಡಿ) ಮಸೂದೆಗೆ ಅಗತ್ಯವಿದ್ದ ಮೂರನೇ ಎರಡರಷ್ಟು ಬಹುಮತ ಸಿಗಲಿಲ್ಲ. ಮತದಾನದಲ್ಲಿ ಭಾಗವಹಿಸಿದ್ದ ಒಟ್ಟು 528 ಸಂಸದರಲ್ಲಿ 298 ಮಂದಿ ಮಸೂದೆಯ ಪರವಾಗಿ ಮತ ಚಲಾಯಿಸಿದರೆ, 230 ಮಂದಿ ವಿರುದ್ಧವಾಗಿ ಮತ ಹಾಕಿದರು. ಮಸೂದೆ ಅಂಗೀಕಾರಗೊಳ್ಳಲು ಕನಿಷ್ಠ 352 ಮತಗಳ ಅಗತ್ಯವಿತ್ತು. ಈ ಮಸೂದೆಯು 2029ರ ಸಾರ್ವತ್ರಿಕ ಚುನಾವಣೆಗೂ ಮುನ್ನ ಮಹಿಳಾ ಮೀಸಲಾತಿ ಜಾರಿಗೊಳಿಸಲು ಲೋಕಸಭಾ ಸೀಟುಗಳ ಸಂಖ್ಯೆಯನ್ನು 543 ರಿಂದ 816 ಕ್ಕೆ ಏರಿಸುವ ಪ್ರಸ್ತಾವನೆಯನ್ನು ಹೊಂದಿತ್ತು. ಮಹಿಳೆಯರ ಕನಸುಗಳನ್ನು ಹೇಗೆ ಹೊಸಕಿ ಹಾಕಲಾಗಿದೆ ಎಂಬುದಕ್ಕೆ ಇಡೀ ದೇಶ ಸಾಕ್ಷಿಯಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು. 2011ರ ಜನಗಣತಿಯ ಆಧಾರದ ಮೇಲೆ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಗೆ ಅನುಗುಣವಾಗಿ ಈ ಸೀಟುಗಳ ಏರಿಕೆಯನ್ನು ಯೋಜಿಸಲಾಗಿತ್ತು. ಆದರೆ ವಿರೋಧ ಪಕ್ಷಗಳ ಅಸಹಕಾರದಿಂದಾಗಿ ಮಹಿಳೆಯರ ದಶಕಗಳ ಕಾಲದ ಕನಸು ನನಸಾಗಲು ಮತ್ತೆ ವಿಳಂಬವಾಗಿದೆ. ವಿರೋಧ ಪಕ್ಷಗಳು ಈ ಮಸೂದೆಯನ್ನು ತಡೆಹಿಡಿಯುವ ಮೂಲಕ ಮಹಿಳಾ ಸಬಲೀಕರಣಕ್ಕೆ ಅಡ್ಡಿಯಾಗಿವೆ ಎಂದು ಪ್ರಧಾನಿ ಆಕ್ರೋಶ ವ್ಯಕ್ತಪಡಿಸಿದರು. ಇನ್ನೊಂದೆಡೆ, ಮಸೂದೆಯ ಸೋಲನ್ನು ಖಂಡಿಸಿ ಬಿಜೆಪಿ ಮಹಿಳಾ ಸಂಸದರು ಸಂಸತ್ತಿನ ಆವರಣದಲ್ಲಿ ಭಾರಿ ಪ್ರತಿಭಟನೆ ನಡೆಸಿದರು. "ಮಹಿಳೆಯರಿಗೆ ಮಾಡಿದ ಈ ಅವಮಾನವನ್ನು ಭಾರತ ಸಹಿಸುವುದಿಲ್ಲ" ಎಂಬ ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗಿದ ಅವರು, ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದ ಪಕ್ಷಗಳು ಉದ್ದೇಶಪೂರ್ವಕವಾಗಿ ಮಹಿಳಾ ಮೀಸಲಾತಿಯನ್ನು ತಡೆಹಿಡಿದಿವೆ ಎಂದು ಆರೋಪಿಸಿದರು. ವಿರೋಧ ಪಕ್ಷಗಳ ಈ ನಡೆಯು ಮಹಿಳಾ ವಿರೋಧಿ ಧೋರಣೆಯನ್ನು ಎತ್ತಿ ತೋರಿಸುತ್ತದೆ ಎಂದು ಬಿಜೆಪಿ ಸಂಸದರು ಆಕ್ರೋಶ ಹೊರಹಾಕಿದ್ದಾರೆ.

### ದಕ್ಷಿಣದಲ್ಲೂ 'ಸುಪ್ರೀಂ' ಪೀಠ ಸ್ಥಾಪಿಸಿ

ಸುಧಾರಣೆಗಳಿಂದ ಪರಿಹರಿಸಬೇಕು ಎಂದು ಹೇಳಿದರು.

ಕರ್ನಾಟಕದಲ್ಲಿ ನ್ಯಾಯ ವ್ಯವಸ್ಥೆಯನ್ನು ವೇಗವಾಗಿ ಮತ್ತು ಜನಸ್ನೇಹಿಯಾಗಿ ಮಾಡಲು ಹಲವು ಸುಧಾರಣೆಗಳನ್ನು ಕೈಗೊಂಡಿದ್ದೇವೆ. ನ್ಯಾಯಾಂಗ ಮೂಲಸೌಕರ್ಯ, ಖಾಲಿ ಹುದ್ದೆಗಳ ಭರ್ತಿ, ಸ್ಥಳೀಯ ಭಾಷೆಯಲ್ಲಿ ನ್ಯಾಯ ಇವುಗಳ ಮೇಲೆ ಗಮನ ನೀಡಲಾಗುತ್ತದೆ ಎಂದು ಭರವಸೆ ನೀಡಿದರು. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ಸುಪ್ರೀಂಕೋರ್ಟ್ ನ್ಯಾಯಾಧೀಶೆ ಬಿ.ವಿ. ನಾಗರತ್ನ ಭಾಗವಹಿಸಿದ್ದರು.

### ಮತ್ತೆ ಹಾರ್ಮುಜ್ ಬಂದ್

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಡೊನಾಲ್ಡ್ ಟ್ರಂಪ್, ಏಪ್ರಿಲ್ 22ರಂದು ಮುಕ್ತಾಯಗೊಳ್ಳಲಿರುವ ಇರಾನ್‌ನೊಂದಿಗಿನ ತಾತ್ಕಾಲಿಕ ಕದನ ವಿರಾಮ ಒಪ್ಪಂದವನ್ನು ವಿಸ್ತರಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ, ದಿಗ್ಬಂಧನವನ್ನು ಕಾಯ್ದುಕೊಳ್ಳಲು ಯೋಜಿಸಿರುವುದಾಗಿ ತಿಳಿಸಿದರು.

ಮೊದಲ ಪುಟದಿಂದ

### ಉತ್ತರ ಪತ್ರಿಕೆ ಮೌಲ್ಯಮಾಪನ

ಪತ್ರಿಕೆಗಳನ್ನು ಗ್ರೇಡಿಂಗ್ ಪದ್ಧತಿ ತರದೇ, ಅದೇ ನಿಯಮಗಳಂತೆ ಮೌಲ್ಯಮಾಪನ ಮಾಡಬೇಕು ಎಂದು ಕರ್ನಾಟಕ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪನವನ್ನು ಪರೀಕ್ಷೆ ನಡೆದ ದಿನಾಂಕದ ವೇಳೆ ಪ್ರಚಲಿತದಲ್ಲಿದ್ದ ವೃತ್ತಪತ್ರಿಕೆಯ ಪ್ರಕಾರವೇ ನಡೆಸಲಾಗುತ್ತದೆ ಎಂದು ತಿಳಿಸಿದರು. ಇದನ್ನು ದಾಖಲಿಸಿದ ನ್ಯಾಯಾಲಯ, 2025-26ರ ಶೈಕ್ಷಣಿಕ ವರ್ಷದ ಪರೀಕ್ಷಾ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ಅನ್ವಯವಾಗಿದ್ದ ನಿಯಮಗಳ ಪ್ರಕಾರವೇ ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮೌಲ್ಯಮಾಪನ ನಡೆಸಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು.

### ಮರುಪರಿಶೀಲನೆಗೆ ಸರ್ಕಾರದ ಅರ್ಜಿ

ಭಾಷೆಗಳ ವಿಷಯಗಳಿಗೆ ಗ್ರೇಡ್ ಬದಲಾಗಿ ಅಂಕ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿತ್ತು.

### ಪ್ರಿಯಾಂಕ ಗಾಂಧಿ ಸವಾಲು

ನಾವೆಲ್ಲರೂ ಮತ ಚಲಾಯಿಸುತ್ತೇವೆ ಮತ್ತು ನಿಮ್ಮನ್ನು ಬೆಂಬಲಿಸುತ್ತೇವೆ ಎಂದು ಪ್ರಿಯಾಂಕಾ ಗಾಂಧಿ ಹೇಳಿದರು.

ಮಹಿಳಾ ಮೀಸಲಾತಿಯ ಅನುಷ್ಠಾನಕ್ಕೆ ಸಂಬಂಧಿಸಿದ ಮಸೂದೆಗೆ ಲೋಕಸಭೆಯಲ್ಲಿ ಸೋಲಾದ ಬಳಿಕ ಆಡಳಿತಾರೂಢ ಬಿಜೆಪಿ ನೇತೃತ್ವದ ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವೆ ವಾಕ್ಸಮರ ನಡೆಯುತ್ತಿರುವಂತೆಯೇ ಪ್ರಿಯಾಂಕಾ ಗಾಂಧಿ ಈ ಹೇಳಿಕೆ ನೀಡಿದ್ದಾರೆ.

### ದಕ್ಷಿಣ ಆಫ್ರಿಕಾದ 4 ಚೀತಾಗಳ ಆಗಮನ

ಮೃಗಾಲಯಕ್ಕೆ ಸ್ಥಳಾಂತರಿಸಲಾಯಿತು. ಹೊಸ ಪರಿಸರಕ್ಕೆ ಹೊಂದಿಕೊಳ್ಳಲು ಅನುಕೂಲವಾಗುವಂತೆ ಚೀತಾಗಳನ್ನು 30 ದಿನಗಳ ಕಾಲ ಕಟ್ಟುನಿಟ್ಟಿನ ಕ್ವಾರಂಟೈನ್‌ನಲ್ಲಿ ಇರಿಸಲಾಗುತ್ತದೆ. ಈ ಅವಧಿಯಲ್ಲಿ ನಿಗದಿತ ಆಹಾರ, ಆರೋಗ್ಯ ಮೇಲ್ವಿಚಾರಣೆ ಸೇರಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳು ಹಾಗೂ ಪಶುವೈದ್ಯಕೀಯ ತಂಡಗಳಿಗೆ ಸಚಿವರು ಸೂಚನೆ ನೀಡಿದ್ದಾರೆ.

### ತಾಪ ಇನ್ನೂ ಏರಲಿದೆ ಹುಷಾರ್

ಹೆಚ್ಚಾಗಿದೆ. ಮುಂದಿನ ಕೆಲವು ದಿನಗಳಲ್ಲಿ ಶುಷ್ಕ ಮತ್ತು ಬಿಸಿಲಿನ ವಾತಾವರಣ ಮುಂದುವರಿಯುವ ಸಾಧ್ಯತೆಯಿದೆ. ಬಿಸಿಗಾಳಿ ಮುಂದುವರಿ ಯುವ ನಿರೀಕ್ಷೆಯಿದೆ ಎಂದು ಐಎಂಡಿ ಸೂಚಿಸಿದೆ.

### ಅಲ್ಪಸಂಖ್ಯಾತರನ್ನು ನಿರ್ಲಕ್ಷ್ಯ ಮಾಡಿಲ್ಲ

ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿದ ಪರಮೇಶ್ವರ ಅವರು, ರಾಜಣ್ಣ ಅವರ ಹೇಳಿಕೆ ವೈಯಕ್ತಿಕ. ಆ ಬಗ್ಗೆ ನಾನು ಮಾತನಾಡಲ್ಲ ಎಂದರು.

ಒಂದು ಕ್ಷೇತ್ರದಿಂದ ಎಲ್ಲಾ ಬದಲಾವಣೆ ಆಗಲಿದೆ ಎಂದು ತಿಳಿದುಕೊಳ್ಳುವುದು ಬೇಡ. ಒಂದು ಕ್ಷೇತ್ರದಲ್ಲಿ ಟಿಕೆಟ್ ಸಿಕ್ಕಿಲ್ಲ ಅಂತ ಬೇಸರ ಮಾಡಿಕೊಳ್ಳೋದು ಬೇಡ. ಸಿಎಂ, ಡಿಸಿಎಂ ನಾವೆಲ್ಲರೂ ಸೇರಿ ಸರಿಪಡಿಸುತ್ತೇವೆ ಎಂದರು.

### ಟಿಟಿ ವಾಹನ ಉರುಳಿಬಿದ್ದು ಶಿಕ್ಷಕರು ಸೇರಿ 9 ಮಂದಿ ಸಾವು

ಪಿನ್ ತಿರುವಿನಿಂದ ಉರುಳಿ ಬಿದ್ದಿದ್ದು, ಪೀಸ್ ಪೀಸ್ ಆಗಿದೆ. ವಾಹನ ಬಿದ್ದ ರಭಸಕ್ಕೆ 9 ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಾಹನ ಚಾಲಕ ಸೇರಿದಂತೆ ನಾಲ್ವರನ್ನು ಪೊಲ್ಲಾಚಿಯ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

# ಪುಸ್ತಕಗಳನ್ನು ಮೀರಿ; ನೈಜ ಪ್ರಪಂಚಕ್ಕಾಗಿ ಕೌಶಲ್ಯ ಕಾರ್ಯಾಗಾರ




ಮಡಿಕೇರಿ:-ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಇಂಗ್ಲಿಷ್ ವಿಭಾಗದ ಜಾಯ್ಸ್ ಲಿಟರರಿ ಕ್ಲಬ್ ವತಿಯಿಂದ, ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಪುಸ್ತಕಗಳನ್ನು ಮೀರಿ; ನೈಜ ಪ್ರಪಂಚಕ್ಕಾಗಿ ಕೌಶಲ್ಯಗಳು ಎಂಬ ಎರಡು ದಿನಗಳ ಕೌಶಲ್ಯ ಕಾರ್ಯಾಗಾರವು ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ನಡೆಯಿತು.

ದ್ವಿತೀಯ ವರ್ಷದ ಬಿಕಾಂ ವಿದ್ಯಾರ್ಥಿಗಳಾದ ಚೋಂದಮ್ಮ, ಸಪ್ನ ಹಾಗೂ ಲಿಖಿತ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಬಳಿಕ ಇಂಗ್ಲಿಷ್ ವಿಭಾಗದ ಸಹ ಪ್ರಾಧ್ಯಾಪಕರಾದ ಪೂಣಚ್ಚ ಕೆ.ಎಂ. ಅವರು ಸ್ವಾಗತ ಭಾಷಣ ಮಾಡಿದರು. ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಹಾಗೂ ಜಾಯ್ಸ್ ಲಿಟರರಿ ಕ್ಲಬ್ ಅಧ್ಯಕ್ಷೆ ಪ್ರೊ. ನಯನ ಕಶ್ಯಪ್ ಅವರು ಪ್ರಾಸ್ತಾವಿಕ ನುಡಿಯಲ್ಲಿ "ವಿದ್ಯಾರ್ಥಿಗಳು ಪಾಠದ ಜೊತೆಗೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಬಹಳ ಮುಖ್ಯ ಎಂದು ತಿಳಿಸಿದರು.

ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಜೀವನ ಕೌಶಲ್ಯಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಹೇಳಿದರು."

ಅತಿಥಿಯಾಗಿ ಭಾಗವಹಿಸಿದ್ದ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ ಅವರು ಮಾತನಾಡಿ, 'ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದ್ದು, ಅವರ ವ್ಯಕ್ತಿತ್ವ ವಿಕಾಸಕ್ಕೆ ಸಹಾಯ ಮಾಡುತ್ತವೆ ಎಂದು ಹೇಳಿದರು.'

ಸಂಪನ್ಮೂಲ ವ್ಯಕ್ತಿಯಾಗಿದ್ದ ಪ್ರೊ.ಜೋಸೆಲಿನ್ ಟಿ.ಲೋಬೋ ಅವರು 'ಎರಡು ದಿನಗಳ ಕಾರ್ಯಾಗಾರವು ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಹೊರತೆಗೆದು, ಅವರ ಸಾಮರ್ಥ್ಯವನ್ನು ಅರಿಯಲು ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟರು'. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ತಿಪ್ಪೇಸ್ವಾಮಿ ಅವರು ಪ್ರಭಾರ ಪ್ರಾಂಶುಪಾಲರಾಗಿ ಮಾತನಾಡಿ, "ಸಮಾಜದಲ್ಲಿ ಉದ್ಯೋಗಾವಕಾಶಗಳು ಇದ್ದರೂ ವಿದ್ಯಾರ್ಥಿಗಳಲ್ಲಿ ಅಗತ್ಯ ಕೌಶಲ್ಯಗಳ ಕೊರತೆ ಇರುವುದನ್ನು ಉಲ್ಲೇಖಿಸಿದರು".

ಚಿಯಕಪೂವಂಡ ಸಚಿನ್ ಪೂವಯ್ಯ ಅವರಿಗೆ ಸನ್ಮಾನ ಮಾಡಲಾಯಿತು. ಎರಡು ದಿನದ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳಿಗೆ ಹಲವಾರು ಕೌಶಲ್ಯದಾರಿತ ಮತ್ತು ಸೃಜನಾತ್ಮಕ ಚಟುವಟಿಕೆಗಳನ್ನು ಮಾಡಲಾಯಿತು .ಶನಿವಾರದಂದು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಡಾ. ವಿಜಯಲತಾ, ಡಾ. ಸೌಮ್ಯ ಕೆ., ವಿನೀತಾ ದೇವಮ್ಮ, ಮೋನಿಕಾ,ಡಾ. ಭೈರವಿ, ರಮಾಲಕ್ಷ್ಮಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ತೃತೀಯ ವರ್ಷದ ಬಿಎ ಇಂಗ್ಲಿಷ್ ವಿದ್ಯಾರ್ಥಿನಿಯರಾದ ವರ್ಷಾ ಟಿ. ವಿ. ಮತ್ತು ಅಮೃತಾ.ಆರ್ ನಿರ್ವಹಿಸಿದರು. ಕಾರ್ಯಕ್ರಮದ ಅಂತಿಮದಲ್ಲಿ ಜಾಯ್ಸ್ ಸಾಹಿತ್ಯ ಸಂಘದ ಕಾರ್ಯದರ್ಶಿ ಅಲೋಕ್ ಬಿಜ್ಜೈ ಅವರು ವಂದನಾರ್ಪಣೆ ಮಾಡಿದರು.

# ಅರಸುಭವನ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಚಾಮರಾಜನಗರ, ತಾಲೂಕಿನ ಅಮಚವಾಡಿ ಸಮೀಪದ ಚನ್ನಪ್ಪನಪುರಗುಡ್ಡ ವೀರಭದ್ರೇಶ್ವರಸ್ವಾಮಿ ದೇವಾಲಯ ಅಭಿವೃದ್ಧಿಗೆ ಸಿಎಂ ವಿಶೇಷ ಅಭಿವೃದ್ಧಿ ಯೋಜನೆಯಡಿ 40ಲಕ್ಷ, ಚನ್ನಪ್ಪನಪುರ ಗ್ರಾಮದಲ್ಲಿ 20 ಲಕ್ಷ ರೂ. ಅನುದಾನ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಅರಸುಭವನ ಅಭಿವೃದ್ಧಿ ಕಾಮಗಾರಿಗೆ ಎಂಎಸ್‌ಐಎಲ್ ಅಧ್ಯಕ್ಷ, ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಇದೇ ವೇಳೆ ಅವರು ಮಾತನಾಡಿ, ತಾಲೂಕಿನ ಚನ್ನಪ್ಪನಪುರಗುಡ್ಡ ವೀರಭದ್ರೇಶ್ವರಸ್ವಾಮಿ ಪುರಾತನ ದೇವಾಲಯವಾಗಿದೆ, ಸುತ್ತಮುತ್ತಲ ಗ್ರಾಮದ ಭಕ್ತಾದಿಗಳು ವಿಶೇಷದಿನಗಳಲ್ಲಿ ಹೆಚ್ಚಿನಸಂಖ್ಯೆಯಲ್ಲಿ ಆಗಮಿಸಿ, ಪೂಜೆಸಲ್ಲಿಸುತ್ತಾರೆ. ದೇವಾಲಯ ಶಿಥಿಲಾವಸ್ಥೆಗೊಳಗಾಗಿದ್ದು, ಅಭಿವೃದ್ಧಿ ಮಾಡಲೇಂದೇ 40ಲಕ್ಷ ರೂ.ಮಂಜೂರಾಗಿದೆ. ಹಲವಾರು ದೇವಾಲಯಗಳ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಮಂಜೂರಾಗಿದ್ದು, ದೇವಾಲಯಗಳು ಪ್ರಗತಿಯಾಗಿವೆ, ಚನ್ನಪ್ಪನಪುರ ಗ್ರಾಮಸ್ಥರು ಮುಂದೆನಿಂತು ತಮ್ಮ ಗ್ರಾಮದ ದೇವಾಲಯ ಅಭಿವೃದ್ಧಿ ಕಾರ್ಯಕ್ಕೆ ಸಹಕರಿಸಬೇಕು, ಹಾಗೆಯೇ ಗ್ರಾಮದಲ್ಲಿ ಅರಸು ಭವನವನ್ನು ನಿರ್ಮಿಸಲು ಗುದ್ದಲಿಪೂಜೆ ನೆರವೇರಿಸಲಾಗಿದ್ದು, ನಿಗಧಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ. ಸಾರ್ವಜನಿಕರಿಗೆ ಲೋಕಾರ್ಪಣೆ ಮಾಡಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಎ.ಎಸ್. ಗುರುಸ್ವಾಮಿ, ಪ್ರಸಾದ್, , ಶೇಖರ್, ಎಪಿಎಂಸಿ ನಿರ್ದೇಶಕ ಸೋಮೇಶ್, ತಾ.ಪಂ ಮಾಜಿ ಸದಸ್ಯ ಎಚ್,ಎಂ, ಮಹದೇವಶೆಟ್ಟಿ, ಸಿದ್ದಪ್ಪಾಜಿ, ಶಿವಣ್ಣ, ಶ್ರೇಯಸ್, ಸಿದ್ದರಾಜುಶಿವಣ್ಣ ಅಮಚವಾಡಿ, ಚಿಕ್ಕರಾಜು, ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ್, ವೀರಭದ್ರ, ನಿರ್ಮಿತಿಕೇಂದ್ರದ ಭೀಮ್ ಸಾಗರ್, ಸೋಮಶೇಖರ್ ಮುಖಂಡರು ಗ್ರಾಮಸ್ಥರು ಹಾಜರಿದ್ದರು.

# ನೂತನ ಜನಗಣತಿಯ ಆಧಾರದಲ್ಲಿ ಮಹಿಳಾ ಮೀಸಲಾತಿ ಜಾರಿಗೊಳಿಸಿ: ಎಂಎಲ್ಸಿ ಕೆ.ಶಿವಕುಮಾರ್



ಮೈಸೂರು: ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ. 33 ರಷ್ಟು ಮೀಸಲಾತಿ ಹಾಗೂ ಕ್ಷೇತ್ರ ಮರುವಿಂಗಡಣೆ ಕುರಿತ ಸಂವಿಧಾನ ತಿದ್ದುಪಡಿ ಮಸೂದೆಗೆ ಸೋಲಾಗಿರುವುದು ದೇಶದ ಸಾರ್ವಭೌಮದ ಹಿತದೃಷ್ಟಿಯಿಂದ ಒಳ್ಳೆಯದು. ನೂತನ ಜನಗಣತಿಯ ಆಧಾರದಲ್ಲಿ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು ಎಂದು ವಿಧಾನ ಪರಿಷತ್ ಸದಸ್ಯರಾದ ಕೆ.ಶಿವಕುಮಾರ್ ಅವರು ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಿಳೆಯರಿಗೆ ರಾಜಕೀಯವಾಗಿ ಮೀಸಲಾತಿ ನೀಡುವುದಕ್ಕೆ ನಮ್ಮ ವಿರೋಧವಿಲ್ಲ. ಮಹಿಳೆಯರ ಸಮರ್ಥವಾದ ನಾಯಕತ್ವಕ್ಕೆ ಮೀಸಲಾತಿ ಅಗತ್ಯವಿದೆ. ಆದರೆ ಕೇಂದ್ರ ಸರ್ಕಾರವು ಸರ್ವಪಕ್ಷ ಸಭೆ ಕರೆಯದೆ ನೇರವಾಗಿ ವಿಶೇಷ ಅಧಿವೇಶನ ನಡೆಸಿ ಮಸೂದೆ ಮಂಡಿಸಿದೆ. ಈ ರೀತಿಯ ತರಾತುರಿಯಲ್ಲಿ ಮಹಿಳಾ ಮೀಸಲಾತಿ ಜಾರಿ ಮಾಡುವುದು ಸರಿಯಲ್ಲ ಎಂದು ಪ್ರತಿಪಾದಿಸಿದರು.

ಈ ಮಸೂದೆ ಪ್ರಕಾರ 2011 ರ ಜನಗಣತಿಯ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆ ಮಾಡಿ, ಮಹಿಳಾ ಮೀಸಲಾತಿ ಕಾನೂನು ಜಾರಿ ಮಾಡುವುದಾಗಿದೆ. ಕ್ಷೇತ್ರ ಮರುವಿಂಗಡಣೆಯ ಹಿಂದೆ ಬಹುದೊಡ್ಡ ಹುನ್ನಾರ ಅಡಗಿದೆ. ಈಗಾಗಲೇ ಅಸ್ಸಾಂ ಹಾಗೂ ಜಮ್ಮು ಕಾಶ್ಮೀರದಲ್ಲಿ ನಡೆದಂತಹ ಕ್ಷೇತ್ರ ಮರುವಿಂಗಡಣೆ ಬೇಡವಾಗಿದೆ. ತಮಿಳುನಾಡು ಮತ್ತು ಪಶ್ಚಿಮಬಂಗಾಳ ರಾಜ್ಯಗಳ ಚುನಾವಣೆಯ ಹೊಸ್ತಿಲಲ್ಲಿ ಕೇಂದ್ರ ಸರ್ಕಾರವು ಈ ರಾಜಕೀಯ ಮಾಡುತ್ತಿದೆ ಎಂದು ಹೇಳಿದರು.

ಸರ್ವಪಕ್ಷಗಳ ಸಲಹೆ ಪಡೆದುಕೊಂಡು ನೂತನ ಜಾತಿ ಜನಗಣತಿ ಆಧಾರದಂತೆ ಮಹಿಳಾ ಮೀಸಲಾತಿಯ ಪ್ರತ್ಯೇಕ ಮಸೂದೆಯನ್ನು ಮಂಡಿಸಿ ಮಹಿಳೆಯರಿಗೆ ಶಾಸನಬದ್ಧವಾದ ಅಧಿಕಾರವನ್ನು ನೀಡಬೇಕು. ಅದರಲ್ಲಿಯೂ ಮುಖ್ಯವಾಗಿ ಎಸ್.ಸಿ, ಎಸ್ಟಿ, ಒಬಿಸಿ ಮಹಿಳೆಯರಿಗೆ ಈ ಮಹಿಳಾ ಮೀಸಲಾತಿಯಲ್ಲಿ ಒಳಮೀಸಲು ಕಲ್ಪಿಸಬೇಕು. ಇಲ್ಲವಾದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ನಾಯಕರ ಕುಟುಂಬದವರ ಪಾಲಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ತರಾತುರಿಯಲ್ಲಿ ಜಾರಿ ಮಾಡಲು ಹೊರಟಿದ್ದ ಈ ಮಸೂದೆಗೆ ಸೋಲಾಗಿರುವುದನ್ನು ಸ್ವಾಗತಿಸುತ್ತೇನೆ. ಈ ಸಂಬಂಧ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳ ನಡೆ ಉತ್ತಮವಾಗಿದೆ. ಮುಂದಿನ ದಿನಗಳಲ್ಲಿ ಯಾವುದೇ ಪೂರ್ವಗ್ರಹವಿಲ್ಲದೆ ಈ ಮಸೂದೆ ಜಾರಿ ಮಾಡಿದರೆ ಬೆಂಬಲಿಸಲಾಗುವುದು ಎಂದು ಹೇಳಿದರು. 1993ರ ಮಂಡಲ್ ಕಮಿಷನ್ ಆಧಾರದ ಮೀಸಲಾತಿಯಡಿ ಹಿಂದುಳಿದ ವರ್ಗಗಳಿಗೆ ರಾಜಕೀಯವಾಗಿ ಆಯಕಟ್ಟಿನ ಸ್ಥಾನಗಳಲ್ಲಿ ಸಂಪೂರ್ಣವಾಗಿ ಅವಕಾಶ ದೊರಕಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ದೊರಕಲು ಅಂಬೇಡ್ಕರ್ ಅವರು ನೀಡಿದ ರಾಜಕೀಯ ಮೀಸಲಾತಿ ಕಾರಣವಾಗಿದೆ. ಇಲ್ಲವಾದಲ್ಲಿ ಈ ಸಮುದಾಯಗಳು ತೊಂದರೆಗೆ ಸಿಲುಕುತ್ತಿದ್ದವು ಎಂದು ಹೇಳಿದರು.

# ವಿದ್ಯಾರ್ಥಿಗಳಿಗೆ ಸಿಇಟಿ ಕೋಚಿಂಗ್

## 150ಕ್ಕೂ ಹೆಚ್ಚು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಅವಕಾಶ



ಚಾಮರಾಜನಗರ,ಗಡಿ ಜಿಲ್ಲೆಯ ಹೆಚ್ಚು ವಿದ್ಯಾರ್ಥಿಗಳು ಸಿಇಟಿಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆದು ಇಂಜಿನಿಯರಿಂಗ್ ಸೇರಿದಂತೆ ವೃತ್ತಿ ಪರ ಶಿಕ್ಷಣದ ಕೋರ್ಸ್‌ಗಳಿಗೆ ಸೇರ್ಪಡೆಯಾಗಬೇಕೆಂಬ ಉದ್ದೇಶದಿಂದ ಬೆಂಗಳೂರಿನ ಸೂಪರ್ ನೀಟ್ ಆಕಾಡೆಮಿ ಹಾಗೂ ಎಂಎಸ್‌ಐಎಲ್‌ನ ಸಹಭಾಗಿತ್ವದಲ್ಲಿ ಕಳೆದ ಒಂದು ತಿಂಗಳಿಂದ ಸಿಇಟಿ ಕೋಚಿಂಗ್ ತರಬೇತಿ ನೀಡುತ್ತಿದೆ.

ಕ್ಷೇತ್ರದ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಎಂಎಸ್‌ಐಎಲ್‌ನ ಅಧ್ಯಕ್ಷರಾಗಿರುವ ಕಾರಣದಿಂದ ನಮ್ಮ ತಾಲೂಕಿನ ಹೆಚ್ಚು ಮಂದಿ ವಿದ್ಯಾರ್ಥಿಗಳಿಗೆ ಸಿಇಟಿ ನೀಟ್ ಕೋಚಿಂಗ್ ಪಡೆದು ವೃತ್ತಿ ಶಿಕ್ಷಣ ಕೋರ್ಸುಗಳನ್ನು ವ್ಯಾಸಂಗ ಮಾಡಬೇಕೆಂಬ ಆಶಯೊಂದಿಗೆ ಪ್ರಥಮವಾಗಿ ತಾಲೂಕಿನ ಏಳು ಕ್ಕೂ ಹೆಚ್ಚು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಒಂದು ತಿಂಗಳ ಹಿಂದೆ ಎಲ್ಲಾ ವಿದ್ಯಾರ್ಥಿಗಳಿಗೆ ಎಂಎಸ್‌ಐಎಲ್, ಹಾಗೂ ಸೂಪರ್ ನೀಟ್ ಆಕಾಡೆಮಿ ವತಿಯಿಂದ ವಿದ್ಯಾರ್ಥಿಗಳಿಗೆ ಕೋಚಿಂಗ್ ಪುಸ್ತಕಗಳು, ಎಂಎಸ್‌ಐಎಲ್ ಬ್ಯಾಗ್ ಮತ್ತು ಸೂಪರ್ ನಿಟ್ ಆಕಾಡೆಮಿ ಅನ್‌ಲೈನ್ ಅಪ್ ಅನ್ನು ಮೊಬೈಲ್‌ಗೆ ಅಪ್‌ಲೋಡ್ ಮಾಡಿಕೊಡಲಾಗಿದೆ.

ಚಾಮರಾಜನಗರ ತಾಲೂಕಿನ ಅಲೂರು, ಚಂದಕವಾಡಿ, ವೆಂಕಟಯ್ಯನಛತ್ರ, ಸಂತೇಮರಹಳ್ಳಿ, ಕುದೇರು, ನಗರದ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜು, ಪುರುಷರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಕೋಚಿಂಗ್ ನೀಡಲಾಗುತ್ತಿದೆ.

ಬೆಂಗಳೂರಿನ ಸೂಪರ್ ನೀಟ್ ಆಕಾಡೆಮಿ ಅಧ್ಯಕ್ಷರಾದ ಡಾ.ಸಂಗಮೇಶ್, ನಿರ್ದೇಶಕರಾದ ಡಾ. ಮಾದೇಶ್, ಸಂಯೋಜಕರಾದ ದೀಪಕ್ ಮತ್ತು ಮಲ್ಲಿಕಾರ್ಜುನ ನೇತೃತ್ವದಲ್ಲಿ ಎಂಎಸ್‌ಎಲ್‌ನ ಪ್ರಾಯೋಜಕತ್ವದಡಿಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಈಗಾಗಲೇ ಕೋರ್ಚಿಂಗ್ ನೀಡಲಾಗುತ್ತಿದೆ.

ಪ್ರಥಮವಾಗಿ ನಮ್ಮ ತಾಲೂಕಿನ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಸೀಟ್‌ಗಳನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಕ್ಷೇತ್ರದ ಜನಪ್ರಿಯ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಬಹಳ ಮುತುರ್ವಜಿ ವಹಿಸಿ, ತಾಲೂಕಿನ ವಿದ್ಯಾರ್ಥಿಗಳಿಗೆ ಸಿಇಟಿ ತರಬೇತಿಯನ್ನು ಕೊಡಸಲಾಗುತ್ತಿದೆ. ಮುಂದಿನ ವರ್ಷ ಜಿಲ್ಲೆಯ ವಿದ್ಯಾರ್ಥಿಗಳಿಗೆ ವಿಸ್ತರಣೆ ಮಾಡಲಾಗುತ್ತದೆ ಎಂದು ಮುಖಂಡ ಎ.ಎಸ್.ಗುರುಸ್ವಾಮಿ ತಿಳಿಸಿದ್ದಾರೆ.

ಸಿಇಟಿ ಕೋಚಿಂಗ್ ತರಬೇತುದಾರರಾದ ದೀಪಕ್ ಮಾತನಾಡಿ, ತಾಲೂಕಿನ ಪ್ರತಿಭಾವಂತ ಹಾಗೂ ಆನ್‌ಲೈನ್ ಕೋಚಿಂಗ್ ಹಾಗೂ ಸಿಇಟಿ ಪುಸ್ತಕಗಳನ್ನು ನೀಡಲಾಗಿದೆ. ಏಪ್ರಿಲ್ 23, 24 ರಂದು ನಡೆಯಲಿರುವ ಪರೀಕ್ಷೆಗೆ ಪೂರ್ವ ತಯಾರಿ ಮಾಡಲಾಗುತ್ತದೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಪ್ರಶ್ನೆಗಳಿಗೆ ಲಿಖಿತವಾಗಿ ಉತ್ತರಿಸುತ್ತಾರೆ. ಆದರೆ, ಸಿಇಟಿ ಪ್ರಶ್ನೆ ಪತ್ರಿಕೆ ಹೊಸತನದಾಗಿರುತ್ತದೆ. ಇಲ್ಲಿ ಚುಕ್ಕೆ ಹಾಕುವುದಷ್ಟೇ, ಅಲ್ಲಿದೇ ಪ್ಲಸ್ ಮತ್ತು ಮೈನಸ್ ಅಂಕಗಳು ಇರುತ್ತಿವೆ. ಹೀಗಾಗಿ ಇದರ ಬಗ್ಗೆ ಪೂರ್ವ ತರಬೆತಿ ನೀಡಿ. ಮಾದರಿ ಪ್ರಶ್ನೆ ಪತ್ರಿಕೆಗಳನ್ನು ನೀಡಿ. ಅವರನ್ನು ಪರೀಕ್ಷೆಗೆ ಸಿದ್ದಗೊಳಿಸಲಾಗುತ್ತಿದೆ ಎಂದು ದೀಪಕ್ ತಿಳಿಸಿದರು.

# ಜಯಪ್ರಕಾಶ್ ಚಿಕ್ಕಣ್ಣ ಹುಟ್ಟುಹಬ್ಬ ಪ್ರಯುಕ್ತ ಅನ್ನಸಂತರ್ಪಣೆ



ಸರಗೂರು : ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರ ಪುತ್ರ, ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ ಅವರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು, ಕಾರ್ಯಕರ್ತರು ಅತ್ಯಂತ ಸರಳವಾಗಿ ಅರ್ಥಪೂರ್ಣವಾಗಿ ಆಚರಿಸಿದರು.

ಸರಗೂರು ತಾಲೂಕಿನ ಅಧಿದೇವತೆ ಚಿಕ್ಕದೇವಮ್ಮ ಬೆಟ್ಟಕ್ಕೆ ತೆರಳಿ ಜಯಪ್ರಕಾಶ್ ಚಿಕ್ಕಣ್ಣ ಅವರ ಹೆಸರಿನಲ್ಲಿ ಅರ್ಚನೆ ಮಾಡಿಸಿ ವಿಶೇಷ ಪೂಜೆ ಸಲ್ಲಿಸಿದರು. ಜನಸೇವೆ ಮಾಡಲು ಅವರಿಗೆ ಆಯಸ್ಸು, ಆರೋಗ್ಯ ಭಾಗ್ಯ ಕೊಟ್ಟು ಕಾಪಾಡಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಚಿಕ್ಕದೇವಮ್ಮ ಬೆಟ್ಟದ ಪಾರುಪತ್ತೇದಾರ್ ಶಾಂತಿಪುರ ಮಹದೇವಸ್ವಾಮಿ ನೇತೃತ್ವದಲ್ಲಿ ವಿಶೇಷ ಪೂಜೆ ಕೈಂಕರ್ಯ ನೆರವೇರಿಸಲಾಯಿತು.

ಬಳಿಕ ಜಯಪ್ರಕಾಶ್ ಚಿಕ್ಕಣ್ಣ ಅವರ ಹುಟ್ಟುಹಬ್ಬ ಪ್ರಯುಕ್ತ ದೇವಸ್ಥಾನದ ಆವರಣದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಜಯಪ್ರಕಾಶ್ ಚಿಕ್ಕಣ್ಣ ಅವರ ಅಭಿಮಾನಿಗಳು, ಭಕ್ತಾದಿಗಳಿಗೆ ಪ್ರಸಾದ ವಿತರಣೆ ಮಾಡಿದರು. ಈ ವೇಳೆ ಭಕ್ತರು, ಜಯಪ್ರಕಾಶ್ ಚಿಕ್ಕಣ್ಣ ಅವರಿಗೆ ಒಳ್ಳೆಯದು ಆಗಲಿ, ಆ ತಾಯಿ ಚಿಕ್ಕದೇವಮ್ಮ ಅವರ ಆಸೆ ಈಡೇರಿಸಲಿ ಎಂದು ಆಶಿಸಿದರು.

ಮಾದಾಪುರ ಜಗದೀಶ್ ಮಾತನಾಡಿ, ಜಯಪ್ರಕಾಶ್ ಚಿಕ್ಕಣ್ಣ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ, ಪ್ರಸಾದ ವಿತರಣೆ ಮಾಡಿದ್ದೇವೆ. ಜಯಪ್ರಕಾಶ್ ಚಿಕ್ಕಣ್ಣ ಅವರು ಶಾಸಕರಾಗಬೇಕು ಎಂಬುದು ಬಹುತೇಕ ಕ್ಷೇತ್ರದ ಜನರ ಕನಸು. ಹೀಗಾಗಿ 2028 ವಿಧಾನಸಭೆ ಚುನಾವಣೆಯಲ್ಲಿ ಜಯಪ್ರಕಾಶ್ ಚಿಕ್ಕಣ್ಣ ಅವರು ಎನ್ ಡಿ ಎ ಅಭ್ಯರ್ಥಿಯಾಗಿ ಕಣಕ್ಕಿಳಿಯೋದು ಪಕ್ಕಾ, ಶಾಸಕರಾಗೋದು ಕೂಡ ಪಕ್ಕಾ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮಾದಾಪುರ ಜಗದೀಶ್, ಶಿರಮಹಳ್ಳಿ ಮಹೇಶ್, ಚಂದ್ರು, ಶಿವಮಲ್ಲನಾಯಕ, ತುಂಬಸೋಗೆ ರವಿ ಸೇರಿದಂತೆ ಜಯಪ್ರಕಾಶ್ ಅಭಿಮಾನಿಗಳು ಇದ್ದರು.

# ರಮ್ಮನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಭೂಮಿ ಮಾರಾಟದ ಅಕ್ರಮ: ಸ್ನೇಹಮಯಿ ಕೃಷ್ಣ



ಮೈಸೂರು: ಮೈಸೂರು ತಾಲ್ಲೂಕು ಕಸಬಾ ಹೋಬಳಿಯ ರಮ್ಮನಹಳ್ಳಿ ಗ್ರಾಮದಲ್ಲಿ ಆಶ್ರಯ ನಿವೇಶನ ಹಂಚಲು ಖರೀದಿ ಮಾಡಿದ ಜಮೀನಿಗೆ ಸಂಬಂಧಿಸಿದ ವ್ಯಾಜ್ಯದ ಆದೇಶ ಬಳಿಕ ನ್ಯಾಯಾಲಯ ತಿಳಿಸಿದ 10 ಗುಂಟೆ ಜೊತೆಗೆ, ಇನ್ನಿತರ 20 ಗುಂಟೆ ಜಾಗವನ್ನೂ ಅಕ್ರಮವಾಗಿ ಇತರರಿಗೆ ಪಾಲಿಕೆ ಅಧಿಕಾರಿಗಳು ಬರೆದುಕೊಡುವ ಮೂಲಕ ಅಕ್ರಮ ಎಸಗಿದ್ದಾರೆ ಎಂದು ಸಾಮಾಜಿಕ ಹೋರಾಟಗಾರರಾದ ಸ್ನೇಹಮಯಿ ಕೃಷ್ಣ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 2003 ರಿಂದ 5 ರವರೆಗೆ ಬಡವರಿಗೆ ನಿವೇಶನ ಹಂಚಿಕೆ ಮಾಡಲು ಸಾಕಷ್ಟು ನಿವೇಶನ ಖರೀದಿಸಲಾಗಿತ್ತು. ಅವುಗಳಲ್ಲಿ ರಮ್ಮನಹಳ್ಳಿ ಗ್ರಾಮದ ಸರ್ವೆ ನಂ. 259/3 ಸಹಾ ಸೇರಿದೆ. 2005 ರ ಮಾ. 19 ರಮದು ಕ್ರಯಪತ್ರ ಸಹಾ ನೋಂದಣಿ ಆಗಿದೆ. ಈ ನಂತರ ಜಮೀನು ಮಾರಾಟ ಮಾಡಿದ್ದ ಕೆಂಚಯ್ಯ ಎಂಬುವವರ ಪುತ್ರಿ ಸುಂದ್ರಮ್ಮ ತಮಗೂ ಭಾಗ ಬರಬೇಕಾಗಿತ್ತೆಂದು ನ್ಯಾಯಾಲಯದಲ್ಲಿ ದಾವೆ ಹೂಡಿದಾಗ, ಅವರಿಗೆ 10 ಗುಂಟೆ ಜಮೀನು ನೀಡುವಂತೆ ಸೂಚಿಸಲಾಗಿತ್ತು. ಇದರಿಂದಾಗಿ ಸರ್ಕಾರಕ್ಕೆ ಬಾಕಿ 20 ಗುಂಟೆ ವಾಪಸಾಗಿದೆ ಎಂದು ವಿವರಿಸಿದರು. ಆದರೆ ಈ ವಿಷಯ ಮುಚ್ಚಿಟ್ಟು, ಉಳಿಕೆ 20 ಗುಂಟೆ ಜಮೀನು ಕೆಂಚಯ್ಯನವರಿಗೆ ಸೇರಿದೆ ಎಂದು ಸುಳ್ಳು ನಕ್ಷೆ ಮಾಡಲಾಗಿದ್ದು, ಆ ಜಮೀನನ್ನು ಸಹಾ ಚೌಡಮ್ಮ ಹಾಗೂ ಅವರ ಮಕ್ಕಳು ಸೈಯ್ಯದ್ ಫೈಸಲರ್ ಎಮಬುವವರಿಗೆ ಸಾಮಾನ್ಯ ಅಧಿಕಾರ ಪತ್ರ ನೀಡಿದ್ದಾರೆ. ಇವರು ಇನ್ನಿಬ್ಬರಿಗೆ ಮಾರಾಟ ಮಾಡಿದ್ದಾರೆ. ಈ ರೀತಿ ಪಾಲಿಕೆ ಖರೀದಿಸಿ ಜಾಗವನ್ನು ರಕ್ಷಿಸಲುವಲ್ಲಿ ಪಾಲಿಕೆ ಹಾಗೂ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಅಧಿಕಾರಿಗಳು ವಿಫಲರಾಗಿದ್ದಾರೆ. ಈ ಕುರಿತು ಕ್ರಮ ಕೈಗೊಳ್ಳುವಂತೆ ತಾವು ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದಿರುವುದಾಗಿ ವಿವರಿಸಿದರು. ಸಾಮಾಜಿಕ ಹೋರಾಟಗಾರರಾದ ಅರವಿಂದ್ ಶರ್ಮಾ, ಸಾಮಾಜಿಕ ಹೋರಾಟಗಾರರು ಹಾಗೂ ಆಡಿಟರ್ ಆದ ಸುರೇಶ್ ರಮ್ಮನಹಳ್ಳಿ ಹಾಜರಿದ್ದರು.

# ಸಹಕಾರ ಸಂಘದ ಅಧ್ಯಕ್ಷ ಉಪಾಧ್ಯಕ್ಷರ ಅವಿರೋಧ ಆಯ್ಕೆ



ಚಾಮರಾಜನಗರ, ತಾಲ್ಲೂಕಿನ ಹೆಬ್ಬಸೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ದ ನೂತನ ಅಧ್ಯಕ್ಷರಾಗಿ ಕಮಲೇಶ್, ಉಪಾಧ್ಯಕ್ಷರಾಗಿ ಗೋವಿಂದರಾಜು ಇಂದು ಅವಿರೋಧವಾಗಿ ಆಯ್ಕೆಯಾದರು.

ಗ್ರಾಮದ ಸಹಕಾರ ಸಂಘದ ಅಧ್ಯಕ್ಷ- ಉಪಾಧ್ಯಕ್ಷರಾಗಿದ್ದ ಮಹಮ್ಮದ್ ಮೊಕ್ದಮ್ ಹಾಗೂ ವಿನೋದ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಗಳಿಗೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಕಮಲೇಶ್, ಉಪಾಧ್ಯಕ್ಷ ಸ್ಥಾನಕ್ಕೆ ದಡದಹಳ್ಳಿ ಗೋವಿಂದರಾಜು ಇವರಿಬ್ಬರೇ ನಾಮಪತ್ರಸಲ್ಲಿಸಿದ್ದ ಹಿನ್ನೆಲೆಯಲ್ಲಿ ಚುನಾಣಾಧಿಕಾರಿಯಾಗಿದ್ದ ಪದ್ಮನಾಭ್ ಅವರು ಅಧಿಕೃತವಾಗಿ ಅಧ್ಯಕ್ಷ- ಉಪಾಧ್ಯಕ್ಷರ ಆಯ್ಕೆಯನ್ನು ಘೋಷಣೆ ಮಾಡಿದರು.

**ಸಹಕಾರ ಸಂಘದ ಬಲವರ್ಧನೆಗೆ ಒತ್ತು**

ನೂತನ ಅಧ್ಯಕ್ಷ ಕಮಲೇಶ್, ಉಪಾಧ್ಯಕ್ಷ ಗೋವಿಂದರಾಜು ಮಾತನಾಡಿ, ಸಹಕಾರ ಸಂಘದ ಮೊದಲ ಅವಧಿಯ ಆಡಳಿತ ಮಂಡಲಿಯಾಗಿದ್ದು, ಈ ಹಿಂದ ಎರಡು ವರ್ಷದ ಮಹಮದ್ ಮೊಕ್ದಮ್ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಸಹಕಾರ ಸಂಘದ ರಚನೆ ಮತ್ತು ಸಂಘವನ್ನು ಪ್ರಾಮಾಣಕವಾಗಿ ಮುನ್ನಡೆಸಿದ್ದಾರೆ. ಅವರಂತೆ ನಾವು ಸಹ ಸಂಘವನ್ನು ಮುನ್ನಡೆಸುವ ಜೊತೆಗೆ ರೈತರಿಗೆ ಸರ್ಕಾರ ಮತ್ತು ಎಡಿಸಿಸಿ ಬ್ಯಾಂಕ್‌ನಿಂದ ದೊರೆಯುವ ಸಾಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಲು ಶ್ರಮಿಸುವುದಾಗಿ ತಿಳಿಸಿದರು.

ಹೆಬ್ಬಸೂರು ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು ಚಂದಕವಾಡಿ ಪಿಎಸಿಸಿ ಬ್ಯಾಂಕ್‌ಗೆ ಸೇರ್ಪಡೆಯಾಗಿದ್ದು, ಮುಂದಿನ ದಿನಗಳಲ್ಲಿ ನಮ್ಮ ಹೆಬ್ಬಸೂರು ಸೊಸೈಟಿಗೆ ಸೇರಿದ ರೈತರ ಷೇರು ಹಣವನ್ನು ವಾಪಸ್ ಪಡೆದು ಹೆಬ್ಬಸೂರು ಸಂಘಕ್ಕೆ ಕಟ್ಟಿಸಿಕೊಳ್ಳುವುದು ಹಾಗೂ ಸಂಘಕ್ಕೆ ಎಲ್ಲಾ ರೈತರ ಷೇರುಗಳನ್ನು ಕಟ್ಟಿಸಿ, ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಿವುದು ಹಾಗು ಪಡಿತರ ಪದಾರ್ಥಗಳನ್ನು ವಿತರಣೆ ಮಾಡಲು ಕ್ರಮ ವಹಿಸಲಾಗುತ್ತದೆ. ಎಂದರು. ಸಭೆಯಲ್ಲಿ ಸಂಘದ ಮಾಜಿ ಅಧ್ಯಕ್ಷ ಮಹಮ್ಮದ್ ಮೊಕ್ದಮ್, ಮಾಜಿ ಉಪಾಧ್ಯಕ್ಷ ವಿನೋದ, ನಿರ್ದೇಶಕರಾದ ನಯಿವುಲ್ಲಾ, ವೆಂಕಟಶೇಷಯ್ಯ, ವೀರಭದ್ರಸ್ವಾಮಿ, ಶೇಖರಪ್ಪ ಲಕ್ಷ್ಮಣ, ಸಾಕಮ್ಮ, ಸುಧಾಮಣ , ಸಿಇಓ ಸದ್ದಾಮ್ ಇತರರು ಇದ್ದರು.

**ಸನ್ಮಾನ:** ಸಂಘದ ನೂತನ ಅಧ್ಯಕ್ಷ-ಉಪಾಧ್ಯಕ್ಷರನ್ನು ಹೆಬ್ಬಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು ಮುಖಂಡರು,ಮಾಜಿ ಗ್ರಾ.ಪಂ.ಅಧ್ಯಕ್ಷರು, ಸದಸ್ಯರು ಸನ್ಮಾನಿಸಿದರು. ಮುಖಂಡರಾದ ಗೌಡಿಕೆ ಮಂದೇಶ್, ಉಮೇಶ್, ರಂಗಸ್ವಾಮಿ, ಜಬಿವುಲ್ಲಾ, ನಂಜುಂಡಸ್ವಾಮಿ, ಅರಳೀಪುರ ನಾಗರಾಜು, ಡ್ಯರಿ ಅಧ್ಯಕ್ಷ ಗೋವಿಂದೇಗೌಡ, ಸಾದಿಕ್ ವುಲ್ಲಾ, ಜಯಶಂಕರ್, ದಡದಹಳ್ಳಿ ಶಿವಣ್ಣ, ರಮೇಶ್, ಅರಳೀಪುರ ಗೋವಿಂದರಾಜು, ಹೆಬ್ಬಸೂರು ಮಧು, ಎಚ್.ಕೆ. ಮಹೇಶ್, ಸಾಕಯ್ಯ, ಎಚ್.ಸಿ. ಸೋಮಣ್ಣ, ಇದ್ದರು.

# ಡಿಕೆಶಿ ಕುರಿತ ಅಶೋಕ್ ಆರೋಪ ಸತ್ಯಕ್ಕೆ ದೂರವಾದುದು: ರಾಜೇಶ್



ಮೈಸೂರು: ಕಾಂಗ್ರೆಸ್ ಪಕ್ಷ ಕಟ್ಟುವಲ್ಲಿ, ಪಕ್ಷದ ಆದೇಶ ಧಿಕ್ಕರಿಸುವವರ ವಿರುದ್ಧ ಶಿಸ್ತುಕ್ರಮ ಕೈಗೊಂಡಿದೆ ವಿನಃ ಮುಖ್ಯಮಂತ್ರಿ ಆಪ್ತರ ವಿರುದ್ಧ ಡಿ.ಕೆ.ಶಿವಕುಮಾರ ಯಾವುದೇ ಟಾರ್ಗೆಟ್ ನಡೆಸಿಲ್ಲ ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಹೇಳಿದರು.

ದಾವಣಗೆರೆ ಉಪಚುನಾವಣೆಯಲ್ಲಿ ಪಕ್ಷವಿರೋಧಿ ಚಟುವಟಿಕೆಯಲ್ಲಿ ಹಾಗೂ ಪಕ್ಷದ ಅಭ್ಯರ್ಥಿಪರ ಚುನಾವಣೆ ಪ್ರಚಾರ ಮಾಡುವುದಕ್ಕೆ ಕೆಲವು ಕಾಂಗ್ರೆಸ್ ನಾಯಕರುಗಳು ಪಕ್ಷದ ಅಭ್ಯರ್ಥಿಪರ ಚುನಾವಣಾ ಪ್ರಚಾರ ಮಾಡದಂತೆ ಒತ್ತಡ ಏರುತ್ತಿದ್ದರು. ಕಾಂಗ್ರೆಸ್ ಪಕ್ಷದ ಟಿಕೆಟ್ ಕೇಳುತ್ತಿದ್ದವರನ್ನು ಮತ್ತು ಚುನಾವಣಾ ನಾಮಪತ್ರ ಸಲ್ಲಿಸ್ಸಿದವರನ್ನು ಸ್ಪರ್ಧೆಯಿಂದ ನಾಮಪತ್ರವನ್ನು ಹಿಂಪಡೆಯದಂತೆ ಒತ್ತಡಹೇರುತ್ತಿದ್ದರು ಎಂಬುದನ್ನು ದಾವಣಗೆರೆ ಕ್ಷೇತ್ರದ ಕಾಂಗ್ರೆಸ್ ಕಾರ್ಯಕತ್ರರು ಹಾಗೂ ಪದಾದಿಕಾರಿಗಳು ಕರ್ನಾಟಕ ಕಾಂಗ್ರೆಸ್ ಪಕ್ಷದ ಉಸ್ತುವಾರಿಯಾದ ಸುರ್ಜಿತ್ ಸುರ್ಜೆವಾಲಗೆ ನೇರವಾಗಿ ದೂರು ನೀಡಿದ್ದರು. ಈ ದೂರನ್ನು ಪರಿಗಣಿಸಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆದೇಶದ ಮೇರೆಗೆ ಶಿಸ್ತುಕ್ರಮ ಕೈಗೊಂಡಿದೆ ಹೊರತು ಡಿ.ಕೆ.ಶಿವಕುಮಾರ್ ಸಿ.ಎಂ ಆಪ್ತರನ್ನು ಟಾರ್ಗೆಟ್ ಮಾಡಿದ್ದಾರೆ ಆರೋಪ ಸತ್ಯಕ್ಕೆ ದೂರವಾದುದು ಎಂದರು.

**ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದಿಂದ ಆಗ್ರಹ**

# ಕಬ್ಬಿನ ಬಾಕಿ ಹಣ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ




ಮೈಸೂರು:ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದಿಂದ ಬಣ್ಣಾರಿ ಸಕ್ಕರೆ ಕಾರ್ಖಾನೆ ಕಬ್ಬಿನ ಲಾಭಾಂಶದ ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಕಳೆದ ವರ್ಷ ಕಬ್ಬಿನ ಉಪ ಉತ್ಪನ್ನಗಳ ಲಾಭವನ್ನು ರಾಜ್ಯ ಸರಕಾರ ರೈತರಿಗೆ ಕೊಡಲು ಸಕ್ಕರೆ ಕಾರ್ಖಾನೆಗಳಿಂದ ಪ್ರತಿ ಟನ್ ಕಬ್ಬಿಗೆ 50ರೂ., ರಾಜ್ಯ ಸರಕಾರದಿಂದ 50 ರೂ., ನೀಡುವ ಆದೇಶ ಮಾಡಿದೆ. ಮೈಸೂರು, ಚಾಮರಾಜನಗರ ಜಿಲ್ಲಾಧಿಕಾರಿಗಳು ಸಭೆ ಮಾಡಿ ಒಂದು ವಾರ ಕಾಲಾವಕಾಶ ನೀಡಿ ಅದೇಶ ಮಾಡಿದರು ಸಹ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಬಣ್ಣಾರಿ ಸಕ್ಕರೆ ಕಾರ್ಖಾನೆ ಹಣ ನೀಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಿದೆ. ಬಣ್ಣಾರಿ ಕಾರ್ಖಾನೆ ರೈತರಿಗೆ 18 ಕೋಟಿಗೂ ಹೆಚ್ಚು ಹಣ ನೀಡಬೇಕು. ಅದನ್ನು ತಕ್ಷಣ ರೈತರಿಗೆ ಅಕೌಂಟ್ ಜಮಾ ಮಾಡಬೇಕು. ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಜಿಲ್ಲಾಡಳಿತ ಸಜ್ಜಾಗಬೇಕು ಎಂದು ಒತ್ತಾಯಿಸಿದರು. ಕಾರ್ಖಾನೆಗಳ ಮುಂದೆ ತೂಕದ ಯಂತ್ರ ಹಾಕುವಲ್ಲಿ ವಿಳಂಬ ಮಾಡುತ್ತಿದ್ದು, ಸರಕಾರ ಆದೇಶ ಮಾಡಿ ಮೂರು ವರ್ಷ ಕಳೆದರೂ ಒಂದು ಸಕ್ಕರೆ ಕಾರ್ಖಾನೆ ಸಹ ತೂಕದ ಯಂತ್ರ ಹಾಕಿಲ್ಲ. ಕಬ್ಬು ದರ ನಿಗದಿಯಲ್ಲಿ ಉತ್ತರ, ದಕ್ಷಿಣ ಎಂಬ ವ್ಯತ್ಯಾಸವಿಲ್ಲದೆ ರಾಜ್ಯಕ್ಕೆ ಏಕ ರೀತಿಯ ದರ ನಿಗದಿ ಆಗಬೇಕು. ಉತ್ತರ ದಕ್ಷಿಣ ಎಂಬ ತಾರತಮ್ಯದಿಂದ ಪ್ರತಿ ಟನ್ ಕಬ್ಬಿಗೆ 800 ರೂ ವ್ಯತ್ಯಾಸ ಬರುತ್ತದೆ. ಇದನ್ನು ತಪ್ಪಿಸಲು ಮುಖ್ಯಮಂತ್ರಿಗಳು ಸ್ವಕ್ಷೇತ್ರದ ರೈತರ ಹಿತ ಕಾಯಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯ ಕೆರೆಕಟ್ಟೆಗಳಿಗೆ ನೀರು ತುಂಬಿಸಲು ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಕಳೆದ ತಿಂಗಳಿನಲ್ಲಿ ಬಿದ್ದಂತಹ ಅಕಾಲಿಕ ಆಲಿಕಲ್ಲು ಮಳೆಯಿಂದ ಆದ ಬೆಳೆ ನಷ್ಟ ಪರಿಹಾರವನ್ನು ತಕ್ಷಣ ರೈತರ ಅಕೌಂಟ್‌ಗೆ ಜಮಾ ಮಾಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಅಕ್ರಮ ಸಕ್ರಮ ಯೋಜನೆಯನ್ನು ಮರು ಜಾರಿ ಮಾಡಬೇಕು. ಕೃಷಿ ಸಾಲವನ್ನು ಜಿಲ್ಲಾ ಸಹಕಾರ ಬ್ಯಾಂಕುಗಳಲ್ಲಿ ಪ್ರತಿ ಎಕರೆಗೆ 1 ಲಕ್ಷ ರೂ.,ನಂತೆ 10 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ನೀಡಬೇಕು. ಇಲ್ಲವಾದರೆ ಮುಂದಿನ 10 ದಿನಗಳ ನಂತರ ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ ಮನೆ ಮುಂದೆ ನಿರಂತರ ಧರಣಿ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ರೈತರ ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಮಾತನಾಡಿ, ಸರಕಾರ ಸೂಕ್ತ ನಿರ್ದೇಶನ ನೀಡಿದರೆ, ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆಯಲ್ಲಿ , ಕೆರೆಹುಂಡಿ ರಾಜಣ್ಣ, ರಾಜು ಅಂಡುವಿನಹಳ್ಳಿ ಚಾಮರಾಜನಗರ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ವಳಗೆರೆ ಗಣೇಶ್, ಮಲಿಯೂರು ಮಹೇಂದ್ರ, ಪ್ರಕಾಶ್ ಗಾಂಧಿ ದೇವನೂರು ನಾಗೇಂದ್ರ, ಮಹದೇವಪ್ಪ, ಶ್ರೀಕಂತ, ಮುದ್ದಳ್ಳಿ ಮಧು ಸೇರಿ ಅನೇಕರು ಭಾಗವಹಿಸಿದ್ದರು.

# ಮಹದೇವಪ್ಪ ಒಬ್ಬ ವ್ಯಕ್ತಿಯಲ್ಲ ಒಂದು ದೊಡ್ಡ ಶಕ್ತಿ



ಚಾಮರಾಜನಗರ: ಡಾ.ಹೆಚ್.ಸಿ.ಮಹದೇವಪ್ಪ ಅಬಿಮಾನಿ ಬಳಗವು ಡಾ.ಹೆಚ್.ಸಿ.ಮಹದೇವಪ್ಪ ಅವರ ಜನ್ಮದಿನದ ಪ್ರಯುಕ್ತ ಬುದ್ದ, ಬಸವ, ಅಂಬೇಡ್ಕರ್ ಆದರ್ಶಗಳ ಅನುಷ್ಠಾನದಲ್ಲಿ ಕೊಡುಗೆ ಕುರಿತ ಕಾರ್ಯಕ್ರಮವನ್ನು ಏ.20 ರಂದು ಯಳಂದೂರಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಭಿಮಾನಿ ಬಳಗದ ಅಧ್ಯಕ್ಷ ಡಾ.ವಿ.ಎನ್.ಮಹದೇವಯ್ಯ ತಿಳಿಸಿದರು

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಯಳಂದೂರು ಡಾ.ಬಿ.ಆರ್.ಅಂಬೇಡ್ಕರ್ ಸಮು ದಾಯ ಭವನದಲ್ಲಿ ಬೆಳಿಗ್ಗೆ 11 ಗಂಟೆ ಗೆ ಆರಂಭವಾಗುವ ಕಾರ್ಯಕ್ರಮದ ಸಾನಿಧ್ಯವನ್ನು ಕೊಳ್ಳೇಗಾಲ ಜೇತವನ ಬುದ್ದವಿಹಾರದ ಬೌದ್ಧ ಬಿಕ್ಕು ಮನೋರಕ್ಕಿತ ಭಂತೆ ಹಾಗೂ ಟಿ.ನರಸೀಪುರ ನಳಂದ ಬುದ್ದ ವಿಹಾರದ ಬೌದ್ಧ ಬಿಕ್ಕುಬೋದಿರತ್ನ ಭಂತೆ ವಹಿಸಲಿದ್ದಾರೆ. ಕಾರಾಪುರ ವಿರಕ್ತ ಮಠದ ಬಸವರಾಜು ಸ್ವಾಮೀಜಿಗಳು ಒಡೆಯರ್ ಉದ್ಘಾಟಿಸಲಿದ್ದಾರೆ.ಕೊಳ್ಳೇಗಾಲದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸುವವರು. ಸಂಸದ ಸುನೀಲ್ ಬೋಸ್ ಉಪಸ್ಥಿತಿ ವಹಿಸುವವರು, ಮೈಸೂರಿನ ವಿಶ್ವವಿದ್ಯಾನಿಲಯ ಎಂ.ಬಿ.ಎ.ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಮುಖ್ಯಭಾಷಣ ಮಾಡುವವರು, ಮಾಜಿ ಶಾಸಕರಾದ ಆರ್.ನರೇಂದ್ರ, ಜಿ.ಎನ್.ನಂಜುಂಡಸ್ವಾಮಿ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚಾಮುಲ್ ಅಧ್ಯಕ್ಷ ಎಂ.ನಂಜುಂಡಸ್ವಾಮಿ, ಜಿ.ಪಂ.ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ತೋಟೇಶ್, ಸಾಹಿತಿ ಮಹದೇವ ಶಂಕನಪುರ, ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಕಾರ್ಯಕ್ರಮದ ವಿವರ ನೀಡಿದರು.

ಅಪ್ಪಟ ಬುದ್ದ,ಬಸವ, ಅಂಬೇಡ್ಕರ್ ಅನುಯಾಯಿಯಾದ ಡಾ.ಹೆಚ್.ಸಿ.ಮಹದೇವಪ್ಪ ಅವರ ಸಾಧನೆಗಳನ್ನು ಜನತೆ ತಿಳಿಸಿ ಅವರ ಕೈ ಬಲಪಡಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಮಹದೇವಪ್ಪ ಅನುಯಾಯಿಗಳು, ಹಿತೈಷಿಗಳು, ಸ್ನೇಹಿತರು, ಬುದ್ದ,ಬಸವ,ಅಂಬೇಡ್ಕರ್ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡುವಂತೆ ಮಹದೇವಯ್ಯ ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಸಾಹಿತಿ ದೊಡ್ಡರಾಯಪೇಟೆ ಸಿದ್ದರಾಜು, ಶಂಭುಲಿಂಗಸ್ವಾಮಿ, ಮರಿಸ್ವಾಮಿ, ಆರ್. ರಘು, ಸಿದ್ದರಾಜು ಹಾಜರಿದ್ದರು.

# ಕ್ರೀಡೆಯಿಂದ ಉತ್ತಮ ಆರೋಗ್ಯ ವೃದ್ಧಿ



ಚಾಮರಾಜನಗರ, ಕ್ರೀಡೆಯಿಂದ ಉತ್ತಮ ಆರೋಗ್ಯ ವೃದ್ದಿ ಆಗುತ್ತದೆ ಎಂದು ಬಿಜೆಪಿ ಮುಖಂಡ ಬುಲೆಟ್ ಚಂದ್ರು ಹೇಳಿದರು.

ತಾಲೂಕಿನ ಯಾನಗಳ್ಳಿಯಲ್ಲಿ ಕಿಚ್ಚ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ ಕ್ರಿಕೆಟ್ ಪಂದ್ಯಾವಳಿಗೆ ಬಿಜೆಪಿ ಜಿಲ್ಲಾ ಮುಖಂಡ ಬುಲೆಟ್ ಚಂದ್ರು ಚಾಲನೆ ನೀಡಿದ ಮಾತನಾಡಿದರು. ಕಿಚ್ಚ ಸುದೀಪ್ ಚಿತ್ರದ ನಾಯಕ ಮಾತ್ರವಲ್ಲ ಅವರು ನಿರ್ದೇಶಕರು ನಿರ್ಮಾಪಕರು ಒಳ್ಳೆ ಚಿತ್ರ ಕಥೆಗಾರರು ಹಾಗೂ ಗಾಯಕರು ಸಹ ಅವರು ಹಿರಿಯರ ಮೇಲೆ ಗೌರವ ಕಿರಿಯರ ಮೇಲೆ ಪ್ರೀತಿಯನ್ನು ಕೊಡುವ ರೀತಿಯನ್ನು ನಾವು ನೋಡಿ ಕಲಿಯಬೇಕು ಅಭಿಮಾನ್ ಸ್ಟುಡಿಯೋದಲ್ಲಿ ವಿಷ್ಣುವಿನ ಸಮಾಧಿಯನ್ನು ಕೋರ್ಟ್ ಆದೇಶದ ಮುಖಾಂತರ ಅದನ್ನು ತೆರವು ಗೊಳಿಸಿದ್ರು ತದನಂತರ ಕಿಚ್ಚ ಸುದೀಪ್ ತಮ್ಮ ಸ್ವಂತ ಹಣದಿಂದ ಕೆಂಗೇರಿಯಲ್ಲಿ ಅರ್ಥ ಎಕರೆ ಜಮೀನನ್ನು ಖರೀದಿ ಮಾಡಿ ದಿವಂಗತ ವಿಷ್ಣುವರ್ಧನ್ ಸ್ಮಾರಕ ನಿರ್ಮಿಸಿದಲ್ಲಿ ಮುಂದಾಗಿರುವುದು ತುಂಬಾ ಸಂತಸವಾಗಿದೆ ಎಂದರು

ವಾಲ್ಮೀಕಿ ಟ್ರಸ್ಟ್ ಉಪಾಧ್ಯಕ್ಷ ಮಂಜು , ಬಿಜೆಪಿ ಎಸ್ ಸಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಎಸ್.ಕಿರಣ್, ಅಯೋಜಕರಾದ ರಂಗಪ್ಪ ,ರವಿ, ಶಾಹುಲ್ , ಮಂಜುನಾಥ್, ಆಕಾಶ್, ನಂಜುಂಡನಾಯಕ, ಮಹೇಶ್, ನಾರಾಯಣ ಸ್ವಾಮಿ, ದೊರೆಸ್ವಾಮಿ ಹಾಗೂ ಗ್ರಾಮದ ಯಜಮಾನರು, ಕಿಚ್ಚಬಾಯ್ಸ್ ಭಾಗವಹಿಸಿದ್ದರು.

### ಶ್ರೀರಾಗಿಕಲ್ಲು ವೈದ್ಯಲಿಂಗೇಶ್ವರ ದೇವಸ್ಥಾನದಲ್ಲಿ

# ಅಷ್ಟಮಂಗಲಪೂಜೆಗೆ ಅವಕಾಶ ಕಲ್ಪಿಸದಿದ್ದರೆ ಹೋರಾಟ

### ಹರೀಶ್‌ಕುಮಾರ್ ಎಚ್ಚರಿಕೆ



ಚಾಮರಾಜನಗರ : ತಾಲೂಕಿನ ಬೊಕ್ಕೆಪುರ ಗ್ರಾಮದ ಸರ್ವೆ ನಂ.23ರಲ್ಲಿರುವ ಶ್ರೀರಾಗಿಕಲ್ಲು ವೈದ್ಯಲಿಂಗೇಶ್ವರ ದೇವಸ್ಥಾನದಲ್ಲಿ ಅಷ್ಟಮಂಗಲಪೂಜೆಗೆ ಅವಕಾಶ ಮಾಡಿಕೊಡಬೇಕು ಅಲ್ಲಿರುವ ಗೋಮಾಳ ಉಳಿಸಬೇಕು ಇಲ್ಲದಿದ್ದರೆ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಅನಿರ್ಧಿಷ್ಟ ಹೋರಾಟ ಮಾಡುವುದಾಗಿ ದೇವಸ್ಥಾನ ಸಮಿತಿಯ ಹರೀಶ್‌ಕುಮಾರ್ ಜಿಲ್ಲಾಡಳಿತವನ್ನು ಎಚ್ಚರಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬೊಕ್ಕೆಪುರ ಗೋಮಾಳವನ್ನು ಉಳಿಸಬೇಕು. ಶ್ರೀರಾಗಿಕಲ್ಲು ವೈದ್ಯಲಿಂಗೇಶ್ವರ ದೇವಸ್ಥಾನದಲ್ಲಿ ಅಷ್ಟಮಂಗಲ ಪೂಜೆಗೆ ಅವಕಾಶ ಮಾಡಿಕೊಡಬೇಕು ಎಂದು 2014ರಿಂದಲ್ಲೂ ಹೋರಾಟ ಮಾಡಿಕೊಂಡು ಬರಲಾಗಿದೆ. ಜಿಲ್ಲಾಡಳಿತ ಅಲ್ಲಿ ಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟಿದೆ. ಆವಾಗ ಸರ್ಕಾರಿ ಗೋಮಾಳ 635 ಎಕರೆ ಪ್ರದೇಶವಿತ್ತು. 2016ಕ್ಕೆ ಬಂದಾಗ 502 ಎಕರೆ ಆಯಿತು, ಈಗ 242 ಎಕರೆಗೆ ತಂದು ನಿಲ್ಲಿಸಿದರೆ. ಅ ಮಧ್ಯಭಾಗದಲ್ಲಿ ಒಂದು ರಾಗಿಕಲ್ಲು ಗುಡ್ಡೆ ಇದ್ದು ಅದರ ಮೇಲುಗಡೆ ಉದ್ಭವ ಶಿವಲಿಂಗ ಇದ್ದು ಅಲ್ಲಿ ಪೂಜೆ ಮಾಡಿದರೆ ಮಳೆ, ಬೆಳೆ ಆಗುತ್ತಿತ್ತು ಎಂಬ ಪದ್ಧತಿ ಇದೆ. ಇದು ಈ ಭಾಗದ ಸುತ್ತಮುತ್ತಲಿನ 10 ಗ್ರಾಮಗಳ ಗೋವುಗಳ ಮೇವು ಕುಡಿಯುವ ನೀರಿಗೆ ಆಶ್ರಯ ಸ್ಥಾನ ವಾಗಿತ್ತು ಎಂದರು. ಜಿಲ್ಲಾಡಳಿತ ಬೇಜಾವಾಬ್ದಾರಿಯಿಂದ ಗಣಿಗಾರಿಕೆಗೆ ಅವಕಾಶ ಕೊಟ್ಟ ಮೇಲೆ ಅದು ತುಂಬಾ ಕ್ಷೀಣಿಸಿದೆ. 2017 ಜೂನ್‌ನಲ್ಲಿ ಅಲ್ಲಿ ನಾವು ಭೀಮನ ಅಮಾವಾಸ್ಯೆ ಮಾಡಿದ್ದೇವು. ಸುಮಾರು 10 ಸಾವಿರ ಜನಸಂಖ್ಯೆ ಸೇರಿ ಜಾತ್ರೆ ಮಾಡುತ್ತಿದ್ದೇವು ಆವಾಗ ತಾನೆ ಗಣಿಗಾರಿಕೆ ಆರಂಭವಾಯಿತು. ಅದರ ವಿರುದ್ಧವಾಗಿ ಜಿಲ್ಲಾಧಿಕಾರಿಗೆ ದೂರು ನೀಡಿದಾಗ ಅಂದಿನ ಜಿಲ್ಲಾಧಿಕಾರಿ ರಾಮು ತಡೆಹಿಡಿದ್ದರು ಎಂದರು. 2025 ಡಿಸೆಂಬರ್ ನಲ್ಲಿ ನಮ್ಮ ಮತ್ತು ಗಣಿ ಉದ್ಯಮಿಗಳ ಮೇಲೆ ಇದ್ದ ಎಲ್ಲ ದಾವೆಗಳು ಖುಲಾಷಿಯಾಗಿದ್ದು, ದೇವಸ್ಥಾನದಲ್ಲಿ ಅಷ್ಟಮಂಗಲ ಪೂಜೆಗೆ ಅವಕಾಶ ಕಲ್ಪಿಸಿಕೊಡಬೇಕು. ಗೋಮಾಳವನ್ನು ಉಳಿಸಬೇಕು ಇಲ್ಲದಿದ್ದರೆ ಜಿಲ್ಲಾಡಳಿತ ಮುಂಭಾಗದಲ್ಲಿ ಅನಿರ್ದಿಷ್ಟಾವಧಿ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಗೋಷ್ಠಿಯಲ್ಲಿ ಮೋಹನ್‌ರಾಜ್, ಶಿವಮಲ್ಲು ಗಿರಿಮಲ್ಲು ಹಾಜರಿದ್ದರು.

### ಆಟೋ ಹಾಗೂ ಮಾಂದಲ್‌ಪಟ್ಟಿ ಬಾಡಿಗೆ ವಾಹನ ದರ ಪರಿಷ್ಕರಣೆ

# ಉಪ ಸಮಿತಿ ರಚನೆಗೆ ನಿರ್ಧಾರ





ಮಡಿಕೇರಿ ಏ.18(ಕರ್ನಾಟಕ ವಾರ್ತೆ):-ಜಿಲ್ಲೆಯಲ್ಲಿ ಆಟೋ ದರ ಹಾಗೂ ಮಾಂದಲ್ ಪಟ್ಟಿಗೆ ತೆರಳುವ ಬಾಡಿಗೆ ವಾಹನ ದರ ಪರಿಷ್ಕರಣೆ ಸಂಬಂಧ 'ಉಪ ಸಮಿತಿ' ರಚಿಸಲು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಕಳೆದ ಹನ್ನೆರಡು ವರ್ಷಗಳ ಹಿಂದೆ ಆಟೋ ದರ ಪರಿಷ್ಕರಣೆ ಮಾಡಲಾಗಿದ್ದು, ಈಗಿರುವ ದರವನ್ನು ಸ್ವಲ್ಪವಾದರೂ ಹೆಚ್ಚಿಸಬೇಕು ಎಂದು ಆಟೋ ಚಾಲಕರು/ಮಾಲಿಕರ ಸಂಘದ ಅಧ್ಯಕ್ಷರಾದ ಮೇದಪ್ಪ ಅವರು ಸಭೆಯಲ್ಲಿ ಕೋರಿದರು. ಆಟೋ ವಾಹನ ಬಿಡಿಭಾಗಗಳ ಬೆಲೆ ಹಾಗೂ ಇಂಧನ ದರ ಹೆಚ್ಚಳವಾಗಿರುವ ಹಿನ್ನೆಲೆ ಆಟೋ ಚಾಲಕರ ಜೀವನ ನಿರ್ವಹಣೆ ಕಷ್ಟಸಾಧ್ಯವಾಗಿದೆ. ಆದ್ದರಿಂದ ದರ ಹೆಚ್ಚಳ ಮಾಡಬೇಕು ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ಆಟೋ ದರ ಪರಿಷ್ಕರಣೆ ಸಂಬಂಧ ಉಪ ಸಮಿತಿ ವರದಿ ಆಧರಿಸಿ ತೀರ್ಮಾನಿಸಲಾಗುವುದು ಎಂದು ಹೇಳಿದರು.

ಮಾಂದಲ್ ಪಟ್ಟಿಯಲ್ಲಿ ಸಂಚರಿಸುವ ಜೀಪು ಮಾಲೀಕರು, ಪ್ರವಾಸಿಗರಿಂದ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದು, ಈ ಹಿನ್ನೆಲೆ ದರ ನಿಗದಿ ಮಾಡುವಂತಾಗಬೇಕು ಎಂದು ಸಾರ್ವಜನಿಕರಿಂದ ಮನವಿ ಕೇಳಿ ಬರುತ್ತಿದ್ದು, ಈ ಸಂಬಂಧ ದರ ನಿಗದಿ ಮಾಡುವ ಬಗ್ಗೆ ಉಪ ಸಮಿತಿಯಲ್ಲಿ ಚರ್ಚಿಸಿ ನಿರ್ಧರಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ತಿಳಿಸಿದರು.

ಸಾರ್ವಜನಿಕರು ಸಂಚರಿಸುವ ರಸ್ತೆಯಲ್ಲಿ ಖಾಸಗಿ ಬಸ್‌ಗಳು, ಮಿನಿ ಬಸ್ಸುಗಳು, ಟ್ಯಾಕ್ಸಿ ಹಾಗೂ ಆಟೋಗಳು ಎಲ್ಲೆಂದರಲ್ಲಿ ನಿಲುಗಡೆ ಮಾಡುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ಆದ್ದರಿಂದ ಕಾನೂನು ಬದ್ಧವಾಗಿ ರಸ್ತೆ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಅವರು ನಿರ್ದೇಶನ ನೀಡಿದರು.

ವಾಹನಗಳ ಪರವಾನಗಿ ಇದೆಯೇ, ಇಲ್ಲವೇ ಎಂಬುದನ್ನು ಆಗಾಗ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪರೀಕ್ಷಿಸಬೇಕು. ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಜಿಲ್ಲಾಧಿಕಾರಿ ಸೋಮಶೇಖರ್ ಅವರು ತಾಕೀತು ಮಾಡಿದರು.

ಆಟೋಗಳು ಜಿಲ್ಲೆಯಾದ್ಯಂತ ಸಂಚರಿಸಲು ಅವಕಾಶ ಮಾಡಬೇಕು ಎಂದು ಆಟೋ ಚಾಲಕರು ಮತ್ತು ಮಾಲೀಕರ ಸಂಘದವರು ಕೋರಿದರು.

ಇದಕ್ಕೆ ಟ್ಯಾಕ್ಸಿ ಮಾಲೀಕರ ಸಂಘದವರು ಆಕ್ಷೇಪ ವ್ಯಕ್ತಪಡಿಸಿ, ಈಗಿರುವ ವ್ಯವಸ್ಥೆಯನ್ನು ಯಥಾಸ್ಥಿತಿ ಮುಂದುವರಿಸಿಕೊಂಡು ಹೋಗಬೇಕು. ಆಟೋಗಳಿಗೆ ಜಿಲ್ಲೆಯಾದ್ಯಂತ ಸಂಚರಿಸಲು ಅವಕಾಶ ಮಾಡಬಾರದು ಎಂದು ಟ್ಯಾಕ್ಸಿ ಚಾಲಕರು ಹಾಗೂ ಮಾಲೀಕರ ಸಂಘದವರು ಮನವಿ ಮಾಡಿದರು. ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಉಪ ಸಮಿತಿಯಲ್ಲಿ ಈ ಸಂಬಂಧ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು. ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಎನ್.ಬಿಂದುಮಣಿ ಅವರು ಮಾತನಾಡಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಬಗ್ಗೆ ಹಲವು ವಿಷಯಗಳ ಕುರಿತು ಮಾಹಿತಿ ಪಡೆದು ಮಾತನಾಡಿ, ರಸ್ತೆ ಸುರಕ್ಷತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನ ನೀಡಿದರು. ಪ್ರಾದೇಶಿಕ ಸಾರಿಗೆ ಅಧಿಕಾರಿ ಸತೀಶ್ ಅವರು ಪ್ರಾದೇಶಿಕ ಸಾರಿಗೆ ಕಚೇರಿಗೆ ಸಲ್ಲಿಕೆಯಾಗಿರುವ ಮನವಿ ಮತ್ತಿತರ ವಿಷಯಗಳ ಕುರಿತು ಸಭೆಯ ಗಮನಕ್ಕೆ ತಂದರು. ಪುತ್ತೂರು ವಿಭಾಗದ ಸಂಚಾರ ನಿಯಂತ್ರಣಾಧಿಕಾರಿ ಶ್ರೀಹರಿಬಾಬು, ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕ ವ್ಯವಸ್ಥಾಪಕರಾದ ರಾಮಚಂದ್ ದರ್ಶನ್, ಖಾಸಗಿ ಬಸ್ ಮಾಲೀಕರ ಸಂಘದವರು, ಆಟೋ ಚಾಲಕರ ಸಂಘದವರು, ಜೀಪು/ ಟ್ಯಾಕ್ಸಿ ಸಂಘದ ಪ್ರತಿನಿಧಿಗಳು, ಪೊಲೀಸ್ ಇಲಾಖೆ ಅಧಿಕಾರಿಗಳು, ವಕೀಲರು ಇತರರು ಇದ್ದರು.

## ಸಂಚಾರ ನಿಯಮ ಪಾಲಿಸಿ

ಜಿಲ್ಲೆಯಲ್ಲಿ ಸಾರಿಗೆ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಯಾವುದೇ ಕಾರಣಕ್ಕೂ ನಿಯಮಗಳನ್ನು ಉಲ್ಲಂಘಿಸಬಾರದು. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸಹ ಎಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು. ಕೆಎಸ್‌ಆರ್‌ಟಿಸಿ ಪುತ್ತೂರು ಸಂಚಾರಿ ವಿಭಾಗೀಯ ನಿಯಂತ್ರಣಾಧಿಕಾರಿ ಜಯಶಾಂತಕುಮಾರ್ ಅವರು ಮಾತನಾಡಿ ಕೊಡಗು ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರಕ್ಕೆ ಸಾರ್ವಜನಿಕರಿಂದ ಹೆಚ್ಚಿನ ಬೇಡಿಕೆ ಬರುತ್ತಿರುವುದರಿಂದ ಕೆಎಸ್‌ಆರ್‌ಸಿ ಬಸ್‌ಗಳ ಹೆಚ್ಚಿನ ಸಂಚಾರಕ್ಕೆ ಅವಕಾಶ ಮಾಡಬೇಕು ಎಂದು ಕೋರಿದರು.

## ಉಚ್ಚ ನ್ಯಾಯಾಲಯಕ್ಕೆ ಪ್ರಕರಣ

ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷರಾದ ಹೊಸೂರು ರಮೇಶ್ ಜೋಯಪ್ಪ ಅವರು ಮಾತನಾಡಿ ಜಿಲ್ಲೆಯ 34 ಮಾರ್ಗದಲ್ಲಿ ಪರಿಷ್ಕೃತ ವೇಳಾ ಪಟ್ಟಿಯೊಂದಿಗೆ ಬಸ್ ಕಾರ್ಯಾಚರಣೆ ನಡೆಸಲು ಮಂಜೂರಾತಿ ನೀಡಿದ್ದು, ಈ ಸಂಬಂಧ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಲಾಗಿದೆ. ಶೀಘ್ರ ತೀರ್ಪು ಬರುವ ಸಾಧ್ಯತೆ ಇದೆ ಎಂದರು.

ಖಾಸಗಿ ಬಸ್ ಮಾಲೀಕರ ಸಂಘದ ನಿರ್ದೇಶಕ ಪುಟ್ಟಸ್ವಾಮಿ ಅವರು ಮಾತನಾಡಿ ಜಿಲ್ಲೆಯಲ್ಲಿ 209 ಖಾಸಗಿ ಬಸ್‌ಗಳಲ್ಲಿ 151 ಖಾಸಗಿ ಬಸ್‌ಗಳು ಸಂಚರಿಸುತ್ತಿವೆ. ಕೋವಿಡ್ ನಂತರ ಖಾಸಗಿ ಬಸ್ ಮಾಲೀಕರ ಆರ್ಥಿಕ ಸ್ಥಿತಿ ಹೇಳತೀರದಂತಾಗಿದೆ ಎಂದು ಸಭೆಯಲ್ಲಿ ಅವಲತ್ತುಕೊಂಡರು.

# ಕೃಷಿ ಕ್ಷೇತ್ರದ ಬಲವರ್ಧನೆಗೆ ಜೇನು ನೊಣಗಳ ಕೊಡುಗೆ ಅಪಾರ



ಕೆ ಆರ್ ಪೇಟೆ:ಜೇನು ನೊಣಗಳು ರೈತನ ಮಿತ್ರನಾಗಿದ್ದು, ಇವುಗಳು ನಡೆಸುವ ಪರಾಗಸ್ಪರ್ಶ ಕ್ರಿಯೆಯಿಂದಾಗಿ ಆಹಾರ ಧಾನ್ಯಗಳ ಉತ್ಪಾದನೆಯು ಹೆಚ್ಚಾಗಿ, ಸುಖ ಸಮೃದ್ಧಿ ನೆಲೆಸಿ ರೈತನ ಮೊಗದಲ್ಲಿ ಮಂದಹಾಸ ಮೂಡುತ್ತಿದೆ ಎಂದು ಪೊನ್ನಂಪೇಟೆಯ ಅರಣ್ಯ ವಿಶ್ವವಿದ್ಯಾನಿಲಯದ ಅರಣ್ಯ ಕೃಷಿ ವಿಭಾಗದ ಮುಖ್ಯಸ್ಥರಾದ ಡಾ. ಕೆಂಚರೆಡ್ಡಿ ಹೇಳಿದರು. ಅವರು ಕೆ ಆರ್ ಪೇಟೆ ಪಟ್ಟಣದಲ್ಲಿ ಕೆ ಆರ್ ಪೇಟೆ ಕೃಷ್ಣ ಪ್ರತಿಷ್ಠಾನವು ಪೊನ್ನಂಪೇಟೆಯ ಅರಣ್ಯ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಆಯೋಜಿಸಿದ್ದ ಒಂದು ದಿನದ ಜೇನು ಕೃಷಿ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು. ಜೇನು ನೊಣಗಳು ಪರಿಸರ ಸ್ನೇಹಿಯಾಗಿವೆಯಲ್ಲದೇ ರೈತರ ಮಿತ್ರನಂತೆ, ಆತ್ಮೀಯ ಬಂಧುವಿನಂತೆ ಕೆಲಸ ಮಾಡುತ್ತಿವೆ. ಜೇನು ನೊಣಗಳು ನಿರಂತರವಾಗಿ ನಡೆಸುವ ಪರಾಗಸ್ಪರ್ಶ ಕ್ರಿಯೆಯಿಂದಾಗಿ ಆಹಾರ ಧಾನ್ಯದ ಉತ್ಪಾದನೆ ಹೆಚ್ಚಾಗಿ ರೈತರ ಜೀವನದಲ್ಲಿ ಮಂದಹಾಸ ಮೂಡುತ್ತಿದೆ. ಜೇನು ನೋಣಗಳಿಲ್ಲದ ಪ್ರಕೃತಿಯನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಇಡೀ ಜಗತ್ತಿನಲ್ಲಿ ಜೇನು ಸಂತತಿ ನಾಶವಾದರೆ ಜೇನಿಲ್ಲದ ಪ್ರಕೃತಿಯು ನಾಲ್ಕು ವರ್ಷಗಳಲ್ಲಿ ಮನುಷ್ಯನು ಆಹಾರವಿಲ್ಲದೆ ಸಾಯಬೇಕಾಗುತ್ತದೆ ಎಂದು ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್ಸ್ಟೀನ್ ತಿಳಿಸಿದ್ದಾರೆ ಎಂದು ವಿವರಿಸಿದ ಡಾಕ್ಟರ್ ಕೆಂಚ ರೆಡ್ಡಿ ಪ್ರತಿಯೊಬ್ಬ ರೈತರು ಕೂಡ ತಮ್ಮ ತಮ್ಮ ಜಮೀನು ಇಲ್ಲವೆ ತೋಟದಲ್ಲಿ ಜೇನುಪೆಟ್ಟಿಗೆಗಳನ್ನಿಟ್ಟು ಪರಿಶುದ್ಧವಾದ ಜೇನನ್ನು ಉತ್ಪಾದನೆ ಮಾಡಿ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆ ಆರ್ ಪೇಟೆ ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಗೋಡೆ ಹೊಸಳ್ಳಿ ಜವರಾಯಿ ಗೌಡ ಮಾತನಾಡಿದರು. ತೋಟಗಾರಿಕೆ ಇಲಾಖೆಯ ಮಂಡ್ಯ ಜಿಲ್ಲೆಯ ಜಂಟಿ ನಿರ್ದೇಶಕರಾದ ಕೆ ಎನ್ ರೂಪಶ್ರೀ ಮಾತನಾಡಿದರು. ಕೆ ಆರ್ ಪೇಟೆ ಕೃಷ್ಣ ಪ್ರತಿಷ್ಠಾನದ ಗೌರವಾಧ್ಯಕ್ಷೆ ಪ್ರೊ. ಇಂದಿರಮ್ಮ ಕೃಷ್ಣ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಎಂ.ಡಿ.ಲೋಕೇಶ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ. ಜವರಾಯಿಗೌಡ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ರಾಯಸಮುದ್ರ ಶಿವರಾಮೇಗೌಡ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರಾದ ಎಂ.ಕೆ.ಹರಿಚರಣ ತಿಲಕ್, ಕೆ.ಆರ್.ನೀಲಕಂಠ, ವಿಚಾರವಾದಿಗಳಾದ ಕತ್ತರ ಘಟ್ಟ ವಾಸು, ಪ್ರಗತಿಪರ ಕೃಷಿಕರಾದ ಬೋರಾಪುರ ಮಂಜುನಾಥ್, ಲಕ್ಷ್ಮಿಪುರ ಕುಮಾರಸ್ವಾಮಿ, ಹೆಮ್ಮನಹಳ್ಳಿ ರಮೇಶ್, ಕಟ್ಟೆಕ್ಯಾತನಹಳ್ಳಿ ಚಂದ್ರೇಗೌಡ ಸೇರಿದಂತೆ ನೂರಾರು ಪ್ರಗತಿಪರ ಕೃಷಿಕರು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.

# ದಕ್ಷಿಣ ಭಾರತ ರಾಜ್ಯ ಸಮ್ಮೇಳನ



ಮೈಸೂರು: ಕ್ರೆಡಿಟ್ ಐ, ರೋಟರಿ ಕ್ಲಬ್ ಆಫ್ ಸೇವಾಗಳ ಸಂಯುಕ್ತಾಶ್ರಯದಲ್ಲಿ ನಗರದ ಗೋಕುಲಂ ಬಡಾವಣೆಯಲ್ಲಿನ ಅಂತರ ಯೂತ್ ಹಾಸ್ಟೆಲ್‌ನಲ್ಲಿ ಆಯೋಜಿಸಿದ್ದ ದಕ್ಷಿಣ ಭಾರತದ ರಾಜ್ಯಗಳ ಯುನೈಟೆಡ್ ರಿಲಿಜಿಯನ್ಸ್ ಇನಿಷಿಯೇಟಿವ್ ಶಾಖೆಗಳ ಮುಖ್ಯಸ್ಥರ ಸಮ್ಮೇಳನಕ್ಕೆ ಅದ್ದೂರಿ ಚಾಲನೆ ದೊರೆಯಿತು.

ಸಮ್ಮೇಳನದ ಸಾನಿಧ್ಯವಹಿಸಿದ್ದ ರಾಮಕೃಷ್ಣ ಆಶ್ರಮದ ರಾಮಕೃಷ್ಣ ವಿದ್ಯಾಶಾಲಾ ಮುಖ್ಯಸ್ಥ ಸ್ವಾಮಿ ಮಹಿಪಾಲನಂದಜೀ ಮಾತನಾಡಿ, ಸ್ವಾಮಿ ವಿವೇಕಾನಂದ ಅವರು ಚಿಕಾಗೋ ಭಾಷಣದಲ್ಲಿ ಅನೇಕ ವರ್ಷಗಳ ಹಿಂದೆಯೇ ಸರ್ವ ಧರ್ಮವನ್ನು ಗೌರವಿಸುವ, ಪ್ರೀತಿಸುವ ಬಗ್ಗೆ ಹೇಳಿದ್ದಾರೆ. ನಮ್ಮದು ಸರ್ವ ಧರ್ಮಗಳನ್ನು ಪ್ರೀತಿಸುವ ದೇಶವಾಗಿದೆ. ಹಲವಾರು ಧರ್ಮಗಳು ಹುಟ್ಟಿವೆ. ಭೌದ್ಧ, ಸಿಕ್, ಹಿಂದೂ ಒಂದೇ ದೇಶವಾಗಿ ಸಮನ್ವಯತೆ, ಶಾಂತಿಯಿಂದ ಬದುಕುತ್ತಿದ್ದೇವೆ. ಇಂತಹ ಬೆಳವಣಿಗೆ ಮುಂದುವರೆಯಬೇಕಿದೆ ಎಂದು ಹೇಳಿದರು.

ನಿವೃತ್ತ ಐಜಿಪಿ ಅರ್ಕೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಧರ್ಮಗಳ ನಡುವಿನ ಗೊಂದಲ, ವಿರೋಧ ಇವೆಲ್ಲವೂ ಸೃಷ್ಠಿಯಾಗಿರುವವೆ ಆಗಿದೆ. ಎಲ್ಲಾ ಧರ್ಮಗಳು ಒಳ್ಳೆಯದನ್ನೇ ಬಯಸುತ್ತವೆ. ಆಚರಣೆಗಳು ಸಹ ಒಳಿತೇ ಆಗಿವೆ. ಅದನ್ನು ಆಚರಿಸುವವರು ಗೊಂದಲ ಸೃಷ್ಠಿಸುತ್ತಿದ್ದಾರೆ. ಅತಿಯಾದ ಧಾರ್ಮಿಕತೆ ಹಾಗೂ ರಾಜಕೀಯಕ್ಕಾಗಿ ಸಮಾಜದಲ್ಲಿ ಅಶಾಂತಿ ನೆಲಸಿ ಪರಸ್ಪರ ವಿರೋಧ ವ್ಯಕ್ತವಾಗುತ್ತಿದೆ. ಇದು ಜಾತಿಗೂ ಸಹ ಅನ್ವಯ ಆಗುತ್ತಿದೆ. 12ನೇ ಶತಮಾನದಲ್ಲೇ ಬಸವಣ್ಣ ಸಮಾನತೆಯನ್ನು ಬೋಧನೆ ಮಾಡಿದ್ದಾರೆ. ಎಂದು ತಿಳಿಸಿದರು. ಪ್ರೊ.ಅಬ್ರಹಾಂ ಕರಿಕ್ಕಮ್, ಡಾ.ಸಿ.ಎನ್.ರಾಜು, ಡಾ.ಎಂ.ವರ್ಷ, ಕೇರಳ ಕೆ.ಜಿ.ಮತಾಯಿ ಕುಟ್ಟಿ, ಪ್ರೊ.ಎಂ.ಎಸ್.ಮನೋನ್ಮಣಿ, ಡಾ.ಎಸ್.ದಿವಾಕರ್, ಜಿ.ಸಿ.ವೀರರಾಜೇ ಅರಸ್, ಮುತ್ತಣ್ಣ, ಪ್ರೊ.ಎಂ. ಮಹದೇವಪ್ಪ, ಪ್ರಮೀಳಾ ಇನ್ನಿತರರು ಉಪಸ್ಥಿತರಿದ್ದರು.

# ಜನ ಸಾಮಾನ್ಯರೊಂದಿಗೆ ಬೆರೆಯಿರಿ



ಮೈಸೂರು: ವಿದ್ಯಾರ್ಥಿಗಳು ಕೇವಲ ಓದುವುದಕಷ್ಟೇ ಸೀಮಿತವಾಗಿರದೇ ಜನಸಾಮಾನ್ಯರೊಂದಿಗೆ ಬರೆತು ಸಮಾಜದ ಒಡನಾಟ ಬೆಳೆಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಚಿಂತನೆ ನಡೆಸಬೇಕಿದೆ ಎಂದು ಚಿಂತಕ ಮಲ್ಕುಂಡಿ ಮಹದೇವಸ್ವಾಮಿ ಹೇಳಿದರು.

ನಗರದ ಮಹಾರಾಜ ಕಾಲೇಜಿನ ಜೂನಿಯರ್ ಬಿಎ ಹಾಲ್‌ನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಆಯೋಜಿಸಿದ್ದ ಉಚಿತ ರಕ್ತದಾನ, ಕಣ್ಣಿನ ತಪಾಸಣೆ ಹಾಗೂ ಆರೋಗ್ಯ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ಯುವ ಸಮೂಹ ಕೇವಲ ಓದು ಹಾಗೂ ಮೊಬೈಲ್ ನಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದಾರೆ. ಆದರೆ, ಪಠ್ಯದಿಂದಾಚೆಗೂ ಬರವಣಿಗೆಯನ್ನು ಬೆಳೆಸಿಕೊಳ್ಳಬೇಕು. ಸಮಾಜದಲ್ಲಿ ಆಗು ಹೋಗುಗಳ ಬಗ್ಗೆಯೂ ಯುವ ಸಮೂಹಕ್ಕೆ ಅರವಿದ್ದಾಗ ಮಾತ್ರ ದೇಶ ಕಟ್ಟುವ ನಿಟ್ಟಿನಲ್ಲಿ ನಿಮ್ಮ ಶಕ್ತಿ ಹೊರಬರಲಿದೆ ಎಂದು ತಿಳಿಸಿದರು.

20ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರೆ, 150ಕ್ಕೂ ಹೆಚ್ಚು ಮಂದಿ ಆರೋಗ್ಯ ಶಿಬಿರದ ಪ್ರಯೋಜನ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಜೀವಾಧಾರ ರಕ್ತನಿಧಿ ಕೇಂದ್ರದ ಮುಖ್ಯಸ್ಥ ಗಿರೀಶ್, ಕಾಲೇಜಿನ ಪ್ರಾಂಶುಪಾಲ ಡಾ.ವಿ.ಷಣ್ಮುಗಂ, ಪ್ರಾಧ್ಯಾಪಕ ಕೃಷ್ಣಪ್ಪ ಇನ್ನಿತರರು ಉಪಸ್ಥಿತರಿದ್ದರು.

### ಸ್ವಾತಂತ್ರ್ಯ ನಂತರ ಬೆಳಕು ಕಂಡ ಜನರು

# ಆದಿವಾಸಿಗಳ ಹಾಡಿಗೆ ವಿದ್ಯುತ್ ಸಂಪರ್ಕ



ಹನೂರು : ಸ್ವಾತಂತ್ರ್ಯ ನಂತರವೂ ವಿದ್ಯುತ್ ಸಂಪರ್ಕವಿಲ್ಲದೇ ಬುಡ್ಡಿ ದೀಪದಲ್ಲಿ ಜೀವಿಸುತ್ತಿದ್ದ ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯತ್? ವ್ಯಾಪ್ತಿಯ ಮೆದಗನಾಣೆ ಹಾಡಿಗೆ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಮನೆ ಮತ್ತು ಬೀದಿ ದೀಪಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ 2023ರ ಸೆಪ್ಟಂಬರ್ ತಿಂಗಳಿನಲ್ಲಿ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿದ್ದ ವೇಳೆ ಜಿಲ್ಲೆಯ 31 ಹಾಡಿಗಳಿಗೆ ವಿದ್ಯುತ್ ಸಂಪರ್ಕ ನೀಡುವಂತೆ ಜಿಲ್ಲಾಡಳಿತವು ಮನವಿ ಮಾಡಿತ್ತು. ಅದರಂತೆ, ಅರಣ್ಯ ಇಲಾಖೆಯ ಅನುಮತಿಯನ್ನು ಪಡೆದು ಮೆದಗನಾಣೆ ಹಾಡಿಗೆ ಶುಕ್ರವಾರದಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಸ್ವಾತಂತ್ರ್ಯ ಪೂರ್ವಕಾಲದಿಂದಲೂ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿರಲಿಲ್ಲ. ನಿನ್ನೆ ವಿದ್ಯುತ್ ಸಂಪರ್ಕ ನೀಡಿದ ಬಳಿಕ ಗ್ರಾಮಸ್ಥರು ಪೂಜೆ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದರು.

ಮಲೆ ಮಹದೇಶ್ವರ ವನ್ಯಜೀವಿಧಾಮದೊಳಗಿರುವ ಗ್ರಾಮಗಳಲ್ಲಿ ಮೆದಗನಾಣೆ ಕೂಡ ಒಂದಾಗಿದೆ. ಕೊಳ್ಳೇಗಾಲ ವಿಭಾಗ ವ್ಯಾಪ್ತಿಯ 22 ಹಾಡಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಯೋಜನೆ ರೂಪಿಸಿ ಅನುದಾನ ನೀಡಲಾಗಿತ್ತು. ಕೆಲವು ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ನೀಡುವ ಕಾಮಗಾರಿ ಸಂಪೂರ್ಣವಾಗಿರುವುದರಿಂದ ವಿದ್ಯುತ್ ಸಂಪರ್ಕ ನೀಡಲು ಅರಣ್ಯ ಇಲಾಖೆ ಅನುಮತಿಗೆ ಕಾಯಲಾಗುತ್ತಿತ್ತು. ಅದರ ಅನುಮತಿ ಸಿಕ್ಕ ನಂತರ ಮೆದಗನಾಣೆ ಹಾಡಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ. ಈ ಕುರಿತು ಕೆಂಪಮ್ಮ ಅವರು ಮಾತನಾಡಿ, 'ಕುಡಿಯಲು ನೀರಿಲ್ಲ, ರಸ್ತೆ ಚೆನ್ನಾಗಿಲ್ಲ. ಇದಕ್ಕಾಗಿ ಆರು ದಿನದಿಂದ ಧರಣಿ ನಡೆಸಿದ್ದೆವು. ಹೀಗೆ ಬದುಕುವುದಕ್ಕಿಂತ ಸಾಯುವುದೇ ಮೇಲು. ಆನೆಗಳೂ ಬಂದು ಕಾಟ ಕೊಡುತ್ತವೆ. ಹುಲಿ, ಕಿರುಬಗಳೂ ಬರುತ್ತವೆ. ಎಲ್ಲರಿಗೂ ಹೇಳಿ ಸಾಕಾಯ್ತು. ಸಿಎಂ ಹೇಳಿದ್ರೆ ಏನಾದ್ರು ಕೊಡುತ್ತಾರೋ ಎಂದು ಪತ್ರ ಬರೆದೆ' ಎಂದು ಹೇಳಿದ್ದಾರೆ.


## ಪ್ರತಿಭಟನೆ ನಡೆಸಿದ್ದ ಜನರು

ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕೆಂದು ಕಳೆದ 8 ದಿನಗಳ ಕಾಲ ಹನೂರು ತಾಲೂಕಿನ ಮೆದಗನಾಣೆ ಗ್ರಾಮಸ್ಥರು ಧರಣಿ ನಡೆಸಿದ್ದರು. ಕಳೆದ ಮಂಗಳವಾರದಂದು ಮೆದಗನಾಣೆ ಗ್ರಾಮದ ಕೆಂಪಮ್ಮ ಎಂಬ ಮಹಿಳೆ, ದಯಾ ಮರಣಕ್ಕಾಗಿ ಸಿಎಂಗೆ ಪತ್ರ ಬರೆದು ಗಮನ ಸೆಳೆದಿದ್ದರು.

ಮೂಲ ಸೌಕರ್ಯವಿಲ್ಲದೆ ಕಾಡು ಪ್ರಾಣಿಗಳಂತೆ ಬದುಕುತ್ತಿದ್ದೇವೆ. ಸ್ವಾತಂತ್ರ್ಯ ಬಂದು 79 ವರ್ಷ ಕಳೆದರೂ ನಾವು ವಿದ್ಯುತ್ ಕಂಡೇ ಇಲ್ಲ, ರಸ್ತೆಗಳಂತೂ ಇಲ್ಲವೇ ಇಲ್ಲ. ಕಲ್ಲು ಬಂಡೆಗಳ ನಡುವೆ ನಮ್ಮ ಓಡಾಟವಾಗಿದೆ. ವಿದ್ಯುತ್ ಸಂಪರ್ಕ ನೀಡಲು ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದು, ತಮಗೆ ವಿದ್ಯುತ್ ಕೊಡಿ, ಇಲ್ಲವೇ ದಯಾ ಮರಣ ಕೊಡಿ ಎಂದು ಕೆಂಪಮ್ಮ ದಯಾಮರಣಕ್ಕೆ ಪತ್ರ ಬರೆದು ಒತ್ತಾಯಿಸಿದ್ದರು.

## ಸಂಕ್ಷಿಪ್ತ ಸುದ್ದಿ

### ಏ. 20 ರಂದು ಶ್ರೀ ವಿಶ್ವಗುರು ಬಸವೇಶ್ವರ ಜಯಂತಿ



**ಮಂಡ್ಯ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಶ್ರೀ ವಿಶ್ವಗುರು ಬಸವೇಶ್ವರ ಜಯಂತಿ ಕಾರ್ಯಕ್ರಮವನ್ನು ಏಪ್ರಿಲ್ 2 0ರಂದು ಬೆಳಿಗ್ಗೆ 11.00 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮಂಡ್ಯ ಜಿಲ್ಲೆಯ ಸರ್ವ ಮಠಾಧೀಶರು ದಿವ್ಯ ಸಾನಿಧ್ಯವನ್ನು ವಹಿಸಲಿದ್ದಾರೆ.

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ .ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ ಎಂ ನರೇಂದ್ರಸ್ವಾಮಿ, ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರಾದ ಡಾ.ಮೂರ್ತಿ ಅವರು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ಮಂಡ್ಯ ವಿಧಾನಸಭಾ ಶಾಸಕರಾದ ಪಿ.ರವಿಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ,ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ವಿಧಾನ ಸಭಾ ಶಾಸಕರುಗಳಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ ಮಂಜು, ಕೆ.ಎಂ ಉದಯ, ರಾಜ್ಯ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್ ಆತ್ಮಾನಂದ, ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಹೆಚ್.ಕೃಷ್ಣ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಪಿ ಪ್ರಕಾಶ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷರಾದ ಸಿ.ಡಿ ಗಂಗಾಧರ, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಿ. ನಾಗೇಂದ್ರ ಕುಮಾರ್ ರವರು ಭಾಗವಹಿಸಲಿದ್ದಾರೆ. ಪಿ.ಇ.ಎಸ್ ಪದವಿಪೂರ್ವ ಕಾಲೇಜು ಉಪನ್ಯಾಸಕರಾದ ಡಾ. ಅನಿತಾ ಎಂ.ಎಸ್.ರವರು ಕಾರ್ಯಕ್ರಮದ ಉಪನ್ಯಾಸವನ್ನು ಮಂಡಿಸಲಿದ್ದಾರೆ.

### ಏಪ್ರಿಲ್ 23 ಮತ್ತು 24 ರಂದು ಸಿ.ಇ.ಟಿ. ಪ್ರವೇಶ ಪರೀಕ್ಷೆ

# ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಆಸನ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಬೇಕು: ಬಿ. ಸಿ. ಶಿವಾನಂದಮೂರ್ತಿ




**ಮಂಡ್ಯ:** 2025–26ನೇ ಸಾಲಿನ ಸಿ. ಇ. ಟಿ. ಪ್ರವೇಶ ಪರೀಕ್ಷೆಯು ಏಪ್ರಿಲ್ 23 ಮತ್ತು 24 ರಂದು ನಡೆಯಲಿದ್ದು ಪ್ರವೇಶ ಪರೀಕ್ಷೆಯನ್ನು ವ್ಯವಸ್ಥಿತವಾಗಿ ಮಾಡಬೇಕು ಹಾಗೂ ಯಾವುದೇ ಲೋಪದೋಷವಾಗದಂತೆ ಕ್ರಮ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಬಿ.ಸಿ ಶಿವಾನಂದಮೂರ್ತಿ ರವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ ದಲ್ಲಿ ನಡೆದ 2025–26 ನೇ ಸಾಲಿನಲ್ಲಿ ಏಪ್ರಿಲ್ 23 ಮತ್ತು 24 ರಂದು ನಡೆಯುವ ಸಿ ಇ. ಟಿ ಪ್ರವೇಶ ಪರೀಕ್ಷೆಯ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಸಿ. ಇ. ಟಿ. ಪ್ರವೇಶ ಪರೀಕ್ಷೆಯು ಜಿಲ್ಲೆಯಲ್ಲಿ 02 ತಾಲ್ಲೂಕು ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ 03 ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ಮಂಡ್ಯ ತಾಲ್ಲೂಕಿನಲ್ಲಿ 09 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು ಜಿಲ್ಲೆಯಲ್ಲಿ 12 ಪರೀಕ್ಷಾ ಕೇಂದ್ರಗಳಲ್ಲಿ ಸಿ. ಇ. ಟಿ. ಪ್ರವೇಶ ಪರೀಕ್ಷೆ ನಡೆಯಲಿದೆ ಎಂದು ತಿಳಿಸಿದರು.

ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ 03 ಕೇಂದ್ರದಲ್ಲಿ ಒಟ್ಟು 1599 ವಿದ್ಯಾರ್ಥಿಗಳು ಹಾಗೂ ಮಂಡ್ಯ ಜಿಲ್ಲೆಯಲ್ಲಿ 09 ಕೇಂದ್ರದಲ್ಲಿ ಒಟ್ಟು 4660 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು ಜಿಲ್ಲಾದ್ಯಂತ 12 ಕೇಂದ್ರಗಳಿಲ್ಲಿ ಒಟ್ಟು 6259 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ತಿಳಿಸಿದರು.

ಸಿ.ಇ.ಟಿ ಪರೀಕ್ಷೆಯನ್ನು ಪಾರದರ್ಶಕತೆಯಿಂದ ನಡೆಸಲು ವೆಬ್ ಕಾಸ್ಟಿಂಗ್ ಮೇಲುಸ್ತುವಾರಿಯನ್ನು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯವರು ನೋಡಿಕೊಳ್ಳಬೇಕು.ಪರೀಕ್ಷೆಯು ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲೂ 200ಮೀ. ಸುತ್ತಳತೆಯಲ್ಲಿ ಐ.ಪಿ.ಸಿ ಸೆಕ್ಷನ್ 144ನೇ ಕಲಂ ಜಾರಿಗೊಳಿಸಲು ಮತ್ತು ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸುವಂತೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ತಿಳಿಸಿದರು.

ಪ್ರಶ್ನೆ ಪತ್ರಿಕೆಗಳನ್ನು ಜಿಲ್ಲಾ ಖಜಾನೆಯಿಂದ ಸಂಬಂಧಪಟ್ಟ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ಎ/ಬಿ ದರ್ಜೆಗಿಂತ ಕಡಿಮೆ ಇಲ್ಲದ (ತಹಶೀಲ್ದಾರರು, ಬಿ.ಇ.ಒಗಳು ಹಾಗೂ ಪ್ರಾಂಶುಪಾಲರುಗಳನ್ನೊಳಗೊಂಡ ತ್ರಿ–ಸದಸ್ಯ ಸಮಿತಿ) ಅಧಿಕಾರಿಗಳನ್ನೊಳಗೊಂಡಂತೆ 04 ತಂಡಗಳ ಪ್ರಶ್ನೆಪತ್ರಿಕೆ ಮಾರ್ಗಾಧಿಕಾರಿಗಳ ವಿಶೇಷ ತಂಡವನ್ನು ಜಿಲ್ಲಾಧಿಕಾರಿಗಳು ನೇಮಕ ಮಾಡಿ ಆದೇಶಿಸಿರುತ್ತಾರೆ ಎಂದು ತಿಳಿಸಿದರು.

ಕೆ.ಆರ್. ಪೇಟೆ ತಾಲ್ಲೂಕಿನ ಬೆಳಿಗ್ಗಿನ ಅವಧಿಯ ಪ್ರಶ್ನೆಪತ್ರಿಕೆಯೊಂದಿಗೆ ಮಧ್ಯಾಹ್ನದ ಪ್ರಶ್ನೆ ಪತ್ರಿಕೆಗಳನ್ನು ತ್ರಿಸದಸ್ಯ ಸಮಿತಿಯವರೊಂದಿಗೆ ಕಳುಹಿಸಿ ಮಧ್ಯಾಹ್ನದ ಪ್ರಶ್ನೆ ಪತ್ರಿಕೆಗಳನ್ನು ಕೆ.ಆರ್.ಪೇಟೆ ತಾಲ್ಲೂಕು ಖಜಾನೆಯಲ್ಲಿ ಇರುಸುವಂತೆ ತಾಲ್ಲೂಕು ಖಜಾನಾಧಿಕಾರಿಯವರಿಗೆ ತಿಳಿಸಬೇಕು ಮತ್ತು ಬೆಳಿಗ್ಗಿನ ಉತ್ತರ ಪತ್ರಿಕೆಗಳನ್ನು ಪರೀಕ್ಷೆ ಮುಗಿದ ನಂತರ ಆಯಾ ದಿನದಂದ ಜಿಲ್ಲಾ ಖಜಾನೆಗೆ ಠೇವಣಿಸಬೇಕು. ಮಧ್ಯಾಹ್ನದ ಪರೀಕ್ಷೆ ಮುಗಿದ ನಂತರ ಆಯಾ ದಿನದಂದೆ ಎರಡು ಅವಧಿಯ ಉತ್ತರ ಪತ್ರಿಕೆಗಳನ್ನು ಮಂಡ್ಯ ಜಿಲ್ಲಾ ಖಜಾನೆಗೆ ಠೇವಣಿಸುವಂತೆ ತಿಳಿಸಿದರು.

ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಸೂಕ್ತ ಪೊಲೀಸ್ ಬಂದೋಬಸ್ತ್ ಒದಗಿಸಬೇಕು ಹಾಗೂ ಪ್ರಶ್ನೆಪತ್ರಿಕೆಗಳನ್ನು ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಮತ್ತು ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆ ಬಂಡಲ್‌ಗಳನ್ನು ಖಜಾನೆಗೆ ಕೇಂದ್ರಗಳಿಗೆ ಸುರಕ್ಷಿತವಾಗಿ ತಲುಪಿಸುವವರೆಗೂ ಪ್ರಶ್ನೆಪತ್ರಿಕೆ ಮಾರ್ಗಾಧಿಕಾರಿಗಳ ತಂಡಕ್ಕೆ ಸೂಕ್ತ ಪೊಲೀಸ್ ಬಂದೋಬಸ್ತ್ ಒದಗಿಸುವಂತೆ ಸೂಚಿಸಿದರು.

ವಿದ್ಯಾರ್ಥಿಗಳಿಗೆ frisking ಮಾಡಲು ಇಬ್ಬರು ಪಿ.ಸಿ ಗಳು(ಮಹಿಳಾ ಸಿಬ್ಬಂದಿಯನ್ನೊಳಗೊಂಡಂತೆ) ಹೊಮ್ ಗಾರ್ಡ್ ಳನ್ನು ನಿಯೋಜಿಸಬೇಕು ಎಂದರು.

ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರಗಳಲ್ಲಿ ರಿಸ್ಟ್ ವಾಚ್, ಮೊಬೈಲ್ ಹಾಗೂ ಇತ್ಯಾದಿ ಇಲೆಕ್ಟ್ರಾನಿಕ್ ಸಾಧನಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಹಾಗೂ ಪ್ರತಿ ಪರೀಕ್ಷಾ ಕೇಂದ್ರಗಳಲ್ಲಿ ಕಡ್ಡಾಯವಾಗಿ ಗೋಡೆ ಗಡಿಯಾರವನ್ನು ಹಾಕಬೇಕು ಎಂದು ಸೂಚಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ವಿಜ್ಞಾನ ಬೋಧಿಸುವ ಉಪನ್ಯಾಸಕರುಗಳನ್ನು ನೇಮಕಮಾಡಿಕೊಳ್ಳುವಂತಿಲ್ಲ. ಹಾಗೂ ಸಿ.ಇ.ಟಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳ ಪೋಷಕರು ಸಿ.ಇ.ಟಿ ಪರೀಕ್ಷಾ ಕರ್ತವ್ಯದಲ್ಲಿ ಪಾಲ್ಗೊಳ್ಳಬಾರದಂತೆ ಕ್ರಮ ವಹಿಸಬೇಕು ಎಂದರು.

ಹಾಗೂ ಹೆಚ್ಚುವರಿ ಕೊಠಡಿ ಮೇಲ್ವಿಚಾರಕರನ್ನು ನೇಮಕ ಮಾಡಿಕೊಳ್ಳುಬೇಕು ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಆರೋಗ್ಯ ವೈದ್ಯಧಿಕಾರಿಗಳನ್ನು ನೇಮಿಸಬೇಕು ಹಾಗೂ ಪ್ರಥಮ ಚಿಕಿತ್ಸೆಗೆ ಬೇಕಾಗುವ ಔಷದಿಗಳನ್ನು ಒದಗಿಸಬೇಕು ಹಾಗೂ ವೆಬ್ ಕಾಸ್ಟಿಂಗ್ ಮಾಡುವ ಸಂಬಂಧ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ವ್ಯವಸ್ಥೆಯನ್ನು ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯ ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ಮೋಹನ್, ಜಿಲ್ಲಾಧಿಕಾರಿ ಕಚೇರಿಯ ತಹಸೀಲ್ದಾರ್ ರವಿಶಂಕರ್,ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಸಿ. ಚಲುವಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ ರವರು ಸೇರಿದಂತೆ ಇನ್ನಿತರ ಅಧಿಕಾರಿಕಾರಿಗಳು ಉಪಸ್ಥಿತರಿದ್ದರು.

### ಏ. 21 ರಂದು ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮ

**ಮಂಡ್ಯ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮವನ್ನು ಏಪ್ರಿಲ್ 21 ರಂದು ಬೆಳಿಗ್ಗೆ 11.00 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ .ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ ಎಂ ನರೇಂದ್ರಸ್ವಾಮಿ, ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರಾದ ಡಾ.ಮೂರ್ತಿ ಅವರು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ಮಂಡ್ಯ ವಿಧಾನಸಭಾ ಶಾಸಕರಾದ ಪಿ.ರವಿಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ,ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ವಿಧಾನ ಸಭಾ ಶಾಸಕರುಗಳಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ ಮಂಜು, ಕೆ.ಎಂ ಉದಯ, ರಾಜ್ಯ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್ ಆತ್ಮಾನಂದ, ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಹೆಚ್. ಕೃಷ್ಣ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಪಿ ಪ್ರಕಾಶ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷರಾದ ಸಿ.ಡಿ ಗಂಗಾಧರ, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಿ. ನಾಗೇಂದ್ರ ಕುಮಾರ್ ರವರು ಭಾಗವಹಿಸಲಿದ್ದಾರೆ.



## ಗ್ಯಾಸ್ ಲಭ್ಯತೆ ಮತ್ತು ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಿಲ್ಲ

**ಮೈಸೂರು:** ಎಲ್‌ಪಿಜಿ ಸಿಲಿಂಡರ್ ಲಭ್ಯತೆ ಕುರಿತು ಸಾರ್ವಜನಿಕರಲ್ಲಿ ಉಂಟಾಗಿರುವ ಆತಂಕ ಮತ್ತು ಮಾಹಿತಿ ಕೊರತೆಯಿಂದ ಬಹಳ ಸಂಖ್ಯೆ ಗ್ರಾಹಕರು ಗ್ಯಾಸ್ ಏಜೆನ್ಸಿ ಮತ್ತು ಗೋದಾಮುಗಳಿಗೆ ಜಮಾಯಿಸುತ್ತಿದ್ದು, ಇದರಿಂದ ಗ್ಯಾಸ್ ಏಜೆನ್ಸಿಗಳಲ್ಲಿ ಅಡಚಣೆ ಮತ್ತು ಗೊಂದಲ ಉಂಟಾಗಿರುವುದು ಕಂಡು ಬಂದಿರುತ್ತದೆ.



ಪ್ರಸ್ತುತ ಜಿಲ್ಲೆಯಲ್ಲಿ ಗೃಹ ಬಳಕೆಯ ಸಿಲಿಂಡರ್‌ಗಳ ಲಭ್ಯತೆ ಮತ್ತು ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಿರುವುದಿಲ್ಲ. ಗ್ರಾಹಕರು ಆತಂಕಕ್ಕೆ ಒಳಗಾಗದೇ ರಿಫೀಲ್ ಸಿಲಿಂಡರ್ ಬುಕಿಂಗ್ ಮಾಡಲು ಏಜೆನ್ಸಿಗಳಲ್ಲಿ ಜಮಾಯಿಸುವುದು ಮಾಡದೇ ಆನ್ ಲೈನ್ ನಲ್ಲಿ ಬುಕ್ ಮಾಡುವ ವ್ಯವಸ್ಥೆಯನ್ನು ಅನುಸರಿಸುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನ ಜಾನುವಾರುಗಳಿಗೆ ಮೇವು ನೀರು ಒದಗಿಸುವಲ್ಲಿ ಆಡಳಿತ ವರ್ಗ ವಿಫಲ ರೈತರ ಆರೋಪ

**ಹನೂರು :** ಬೇಸಿಗೆಯಲ್ಲಿ ಬರ ಆವರಿಸಿದ್ದರು ನಾಗರಿಕರಿಗೆ ನೀರು ಹಾಗೂ ಜಾನುವಾರುಗಳಿಗೆ ನೀರು ಹಾಗೂ ಮೇವನ್ನು ಒದಗಿಸುವುದರಲ್ಲಿ ವಿಫಲವಾಗಿರುವ ತಾಲ್ಲೂಕು ಆಡಳಿತದ ವಿರುದ್ಧ ಮಾರ್ಟಳ್ಳಿ ಗ್ರಾಮ ಪಂಚಾಯಿತಿ ಕಚೇರಿ ಮುಂದೆ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಶೈಲೇಂದ್ರ ನೇತೃತ್ವದಲ್ಲಿ ಇಂದು ಶುಕ್ರವಾರ ಪ್ರತಿಭಟನೆ ನಡೆಯಿತು.

ಮಾರ್ಟಳ್ಳಿ ಗ್ರಾಮ ಪಂ. ಕಚೇರಿ ಮುಂದೆ ಜಮಾಯಿಸಿದ ಕರ್ನಾಟಕ ರಾಜ್ಯ ರೈತ ಸಂಘದ ರೈತರು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದು ಖಾಲಿ ಬಿಂದಿಗೆಗಳನ್ನು ಹಿಡಿದು ಅಧಿಕಾರಿಗಳು ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿದರು.

ಕಳೆದ ಹಲವಾರು ವರ್ಷಗಳಿಂದ ಮಾರ್ಟಳ್ಳಿ ವ್ಯಾಪ್ತಿಯಲ್ಲಿ ಬರ ಆವರಿಸಿ ಕುಡಿಯುವ ನೀರಿಗೆ ಹಾಕಾರ ಉಂಟಾಗಿದೆ ಸರ್ಕಾರ ಬೇಸಿಗೆಯಲ್ಲಿ ಜನರಿಗೆ ಹಾಗೂ ಜಾನುವಾರುಗಳಿಗೆ ಮೇವು ಹಾಗೂ ನೀರಿನ ಸಮಸ್ಯೆ ಉಂಟಾಗದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರೂ ಜಿಲ್ಲಾಡಳಿತ ನೀರಿನ ಸಮಸ್ಯೆ ಹಾಗೂ ಜಾನುವಾರುಗಳಿಗೆ ನೀರು ಮತ್ತು ಮೇವಿನ ಸಮಸ್ಯೆ ಬಗೆಹರಿಸುವುದರಲ್ಲಿ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಾಲೂಕು ಪಂ.ಇ.ಓ ಉಮೇಶ್ ಅವರು ರೈತರ ಸಮಸ್ಯೆಗಳ ಬಗ್ಗೆ ಆಲಿಸಿದರು. ಈ ಭಾಗದಲ್ಲಿ ಕುಡಿಯುವ ನೀರಿಗೆ ಅಹಾಕಾರ ಉಂಟಾಗಿದ್ದು




ನೀರು ಪೂರೈಕೆ ಮಾಡುವಲ್ಲಿ ಗ್ರಾಮ ಪಂ ಪಿ.ಡಿ.ಓ ಚೆನ್ನೇಶ್ ವಿಫಲರಾಗಿದ್ದಾರೆ. ಇವರು ಸಾರ್ವಜನಿಕರು ಮಹಿಳೆಯರ ಜೊತೆ ಅಸಭ್ಯವಾಗಿ ಮಾತನಾಡುತ್ತಾರೆ ಮೊದಲು ಇವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ರೈತರು ಮಹಿಳೆಯರು ದೂರಿದರು.

ಹಲವುಗ್ರಾಮಗಳಿಗೆ ಟ್ಯಾಂಕರ್ ಗಳ ಮೂಲಕ ನೀರು ಪೂರೈಕೆ ಮಾಡುತ್ತಾರೆ ಅದು ನಾಮಕಾವಸ್ಥೆಗೆ ವಾರಕ್ಕೊಮ್ಮೆ ಟ್ಯಾಂಕರ್ ಮೂಲಕ ಬಿಡುತ್ತಾರೆ ಇದು ಇಲ್ಲಿನ ಜನರಿಗೆ ದಿನನಿತ್ಯದ ಬಳಕೆಗೆ ಸಾಕಾಗುವುದಿಲ್ಲ. ದೊಡ್ಡ ದೊಡ್ಡ ಲಾರಿ ಟ್ಯಾಂಕರ್ ಗಳ ಮೂಲಕ ಜನರಿಗೆ ಕುಡಿಯಲು ಶುದ್ಧ ನೀರನ್ನು ಪೂರೈಸಬೇಕು. ಹಾಗೂ ಜಾನುವಾರುಗಳಿಗೂ ಕುಡಿಯುವ ನೀರನ್ನು ಒದಗಿಸಬೇಕು ಎಂದು ಆಗ್ರಹಿಸಿ ಪಟ್ಟು ಹಿಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಇ.ಓ ಉಮೇಶ್ ಅವರು ಮೂರು ದಿನಗಳ ಕಾಲಾವಕಾಶವನ್ನು ಪಡೆದುಕೊಂಡು ನೀರು ಒದಗಿಸುವುದಾಗಿ ಭರವಸೆಯನ್ನು ನೀಡಿದ್ದಾರೆ. ಜೊತೆಗೆ ತಾಲೂಕು ಉಪ ತಹಶೀಲ್ದಾರ್ ಸುರೇಖಾ ಅವರು ಜಾನುವಾರುಗಳಿಗೆ ಮೇವು ಒದಗಿಸುವ ಸಂಬಂಧ ಮೇಲಾಧಿಕಾರಿಗಳಿಗೆ ತಿಳಿಸಿ ಆದಷ್ಟು ಬೇಗ ಅಗತ್ಯ ಕ್ರಮ ಕೈಗೊಳ್ಳುವಂತೆ ರೈತರ ಸಮಸ್ಯೆಗೆ ಸ್ಪಂದಿಸಲು ತಿಳಿಸಲಾಗುವುದು ಎಂದು ತಿಳಿಸಿದ್ದಾರೆ.

ಕಂದಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಸಾರಿಗೆ ಇಲಾಖೆ, ಅಬಕಾರಿ ಇಲಾಖೆ, ತಣ್ಣ ನೀರಾವರಿ, ಸಹಕಾರಿ, ರೇಷ್ಮೆ ಇಲಾಖೆ, ಪೊ?ಲಿಸ್ ಇಲಾಖೆಯವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ತಮ್ಮ ಇಲಾಖೆ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳಿಗೆ ಪರಿಹಾರಗಳು ಹಾಗೂ ಉಪಯೋಗಗಳ ಬಗ್ಗೆ ಮಾಹಿತಿಯನ್ನು ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿಗಳು ಸೇರಿದಂತೆ ರೈತ ಸಂಘದ ಎಂ.ಇ ಬಸವರಾಜು, ಮಾರ್ಟಳ್ಳಿ ಘಟಕ ರೈತ ಸಂಘದ ಅಧ್ಯಕ್ಷ ಅರ್ಪುದರಾಜ್, ವಸಂತ ಕುಮಾರ್, ಪುಟ್ಟಸ್ವಾಮಿ, ಡೇವಿಡ್, ಸಗಾಯರಾಜ್, ಲಾರೆನ್ಸ್, ರಾಜ, ಲೂರ್ದುಸ್ವಾಮಿ, ವಲ್ಲಭದಾಸ್, ಪೀಟರ್, ಸಂದನಮೇರಿ, ಜೆಸ್ಸಿಂತ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸೇರಿದಂತೆ ಇನ್ನಿತರರು ಇದ್ದರು.

## ಹಾಡಹಗಲೇ ಕಾಣಿಸಿಕೊಂಡ ಹೆಣ್ಣು ಹುಲಿ ಸೆರೆ: ಗ್ರಾಮಸ್ಥರಲ್ಲಿ ನಿರಾಳತೆ



**ಸರಗೂರು:** ತಾಲ್ಲೂಕಿನ ಹಾದನೂರು ಗ್ರಾಮ ಸಮೀಪ ಕಳೆದ ಕೆಲವು ದಿನಗಳಿಂದ ಆತಂಕ ಸೃಷ್ಟಿಸಿದ್ದ 11 ವರ್ಷದ ಹೆಣ್ಣು ಹುಲಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿ ಸೆರೆ ಹಿಡಿದಿದ್ದಾರೆ.

ಮೈಸೂರು ಜಿಲ್ಲೆ ಸರಗೂರು ತಾಲ್ಲೂಕಿನ ಹಾದನೂರು ಭಾಗದಲ್ಲಿ ಕಳೆದ ಕೆಲ ದಿನಗಳಿಂದ ಹುಲಿ ಪದೇಪದೇ ಕಾಣಿಸಿಕೊಳ್ಳುತ್ತಿದ್ದು, ಸ್ಥಳೀಯರಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿತ್ತು. ವಿಶೇಷವಾಗಿ ಸಾಕು ಪ್ರಾಣಿಗಳ ಮೇಲೆ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು ತೀವ್ರ ಆತಂಕಕ್ಕೆ ಒಳಗಾಗಿದ್ದರು.

ಈ ಹಿನ್ನೆಲೆ ಗ್ರಾಮಸ್ಥರು ತಕ್ಷಣ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಮನವಿಗೆ ಸ್ಪಂದಿಸಿದ ಅಧಿಕಾರಿಗಳು ಸೂಕ್ತ ಯೋಜನೆಯೊಂದಿಗೆ ಕಾರ್ಯಾಚರಣೆ ನಡೆಸಿ, ಕಳೆದ ರಾತ್ರಿ 11 ವರ್ಷದ ಹೆಣ್ಣು ಹುಲಿಯನ್ನು ಯಾವುದೇ ಅಪಾಯವಿಲ್ಲದೆ ಸುರಕ್ಷಿತವಾಗಿ ಸೆರೆ ಹಿಡಿದರು.

ಹುಲಿ ಸೆರೆ ಹಿಡಿದ ಬಳಿಕ ಗ್ರಾಮಸ್ಥರಲ್ಲಿ ನಿರಾಳತೆ ಮೂಡಿದ್ದು, ಅರಣ್ಯ ಇಲಾಖೆ ಅಧಿಕಾರಿಗಳ ತ್ವರಿತ ಕ್ರಮಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಎನ್.ಎಸ್.ಎಸ್ ಶಿಬಿರ ಅನುಭವ ಒದಗಿಸುತ್ತದೆ: ಮಂಜು

**ಕೆ.ಆರ್.ಪೇಟೆ.:** ಸೇವೆಗಾಗಿ ಬಾಳು ಎಂಬ ತತ್ವದಡಿಯಲ್ಲಿ ರೂಪಿಸಲಾಗಿರುವ ರಾಷ್ಟ್ರೀಯ ಯೋಜನಾ ಶಿಬಿರವು ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶದ ನೈಜ ಅನುಭವವನ್ನು ಒದಗಿಸುತ್ತದೆ ಎಂದು ಶಾಸಕ ಹೆಚ್.ಟಿ.ಮಂಜು ಕರೆ ನೀಡಿದರು.

ಅವರು ತಾಲ್ಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಚೌಡಸಮುದ್ರ ಗ್ರಾಮದಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ವತಿಯಿಂದ ಏರ್ಪಡಿಸಿದ್ದ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ತರಗತಿ ಕೋಣೆಯೊಳಗೆ ಕುಳಿತು ಪಾಠ ಕೇಳುವುದೇ ಶಿಕ್ಷಣವಲ್ಲ ಶಿಕ್ಷಣದ ಜೊತೆಗೆ ನಮ್ಮ ಜೀವನಕ್ಕೆ ಅಗತ್ಯವಾಗಿರುವ ಎಲ್ಲಾ ಅನುಭವಗಳನ್ನು ರಾಷ್ಟ್ರೀಯ ಯೋಜನಾ ಶಿಬಿರ ವಿದ್ಯಾರ್ಥಿಗಳಿಗೆ ಒದಗಿಸುತ್ತದೆ. ವ್ಯಾಸಂಗದ ಅವಧಿಯಲ್ಲಿಯೇ ಶ್ರಮದಾನ, ಸೇವೆಯನ್ನು ಮಾಡುವ ಮೂಲಕ ಸ್ಥಳೀಯ ಪರಿಸ್ಥಿತಿಗಳನ್ನು ಅರಿತು ಅದಕ್ಕೆ ಪೂರಕವಾಗಿ



ಚಟುವಟಿಕೆಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು ಈ ಶಿಬಿರದ ಉದ್ದೇಶವಾಗಿದೆ. ಚೌಡಸಮುದ್ರ ಗ್ರಾಮ ಹೈನುಗಾರಿಕೆಗೆ ಹೆಸರುವಾಸಿಯಾದ ಸೌಜನ್ಯಯುತ ಗ್ರಾಮವಾಗಿದ್ದು ಇಲ್ಲಿನ ಜನರು, ಹಾಗೂ ಕಸುಬುಗಳು, ಅವರ ಜೀವನಶೈಲಿ, ಅವರ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಸಮಸ್ಯೆಗಳನ್ನು ನೀವುಗಳೂ ಸಹ ಅರಿತು ಅವರೊಂದಿಗೆ ಉತ್ತಮ ಒಡನಾಟ ಇಟ್ಟುಕೊಂಡು ಈ ಶಿಬಿರವನ್ನು ಯಶಸ್ವಿಗೊಳಿಸಬೇಕಿದೆ.

ವಿದ್ಯಾರ್ಥಿಗಳು ಪದವಿ ಕಾಲೇಜಿನಲ್ಲಿ ಶಿಕ್ಷಣ ಪಡೆದ ನಂತರ ನಿಮಗೆ ಹೆಚ್ಚಿನ ಜವಾಬ್ದಾರಿಗಳು ಬರಲಿದ್ದು ನಿಮ್ಮನ್ನು ಇಷ್ಟು ವರ್ಷಗಳ ಕಾಲ ಸಾಕಿ, ಸಲುಹಿ, ಉತ್ತಮ ಶಿಕ್ಷಣ ಕೊಡಿಸಲು ಶ್ರಮಿಸಿದ ತಂದೆತಾಯಿಗಳ ಶ್ರಮಕ್ಕೆ ಪ್ರತಿಫಲ ನೀಡಬೇಕು. ತಂದೆತಾಯಿಗಳಿಗೆ ಉತ್ತಮ ಮಗ ಅಥವಾ ಮಗಳಾಗಿ ನಾಡು ಹೆಮ್ಮೆಪಡುವ ಪ್ರಜೆಯಾಗಿ ರೂಪುಗೊಳ್ಳಬೇಕು. ಹಿಂದೆ ಪದವಿ ಪಡೆದವರನ್ನು ಗ್ರಾಮಗಳ ಜನತೆ ಬಹಳ ಗೌರವದಿಂದ ಕಾಣುತ್ತಿದ್ದರು ಅದೇ ರೀತಿ ನೀವುಗಳು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಮೂಲಕ ನಾಡಿಗೆ ಕೀರ್ತಿ ತರಬೇಕು. ವಿದ್ಯಾರ್ಥಿಗಳಲ್ಲಿ ಸ್ವಂತಿಕೆ ಎನ್ನುವುದು ಇರಬೇಕು. ಸ್ವಂತಿಕೆ ಇದ್ದಾಗ ವಾಕ್ ಚಾತುರ್ಯ, ಧೈರ್ಯ, ಆತ್ಮಾಭಿಮಾನ ಬರುತ್ತದೆ. ಇದಕ್ಕೆ ಬಿಗ್‌ಬಾಸ್ ಖ್ಯಾತಿಯ ಗಿಲ್ಲಿನಟ ಉತ್ತಮ ಉದಾಹರಣೆ. ಗ್ರಾಮದ ಸಾರ್ವಜನಿಕರು ನಿಮ್ಮ ಊರಿಗೆ ಬಂದಿರುವ ವಿದ್ಯಾರ್ಥಿಗಳನ್ನು ನಿಮ್ಮ ಮಕ್ಕಳೆಂದು ತಿಳಿದು ಅವರಿಗೆ ಎಲ್ಲಾ ರೀತಿಯ ಪೊ?ರೀತ್ಸಾಹ, ಸಲಹೆ, ಮಾರ್ಗದರ್ಶನ ಸಹಕಾರ ನೀಡಬೇಕು ಎಂದರು.

ಇದೇ ಸಂದರ್ಭದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ವಿ.ವಿ.ಜಗದೀಶ್, ಪ್ರಾಧ್ಯಾಪಕ ಡಾ.ಜಯಕೀರ್ತಿ, ಬೋರೇಗೌಡ, ಬೀರವಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ, ಅಕ್ಕಿಹೆಬ್ಬಾಳು ಹೋಬಳಿ ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ, ಸೇರಿದಂತೆ ಗ್ರಾಮದ ಮುಖಂಡರುಗಳು ವಿದ್ಯಾರ್ಥಿಗಳು ಹಾಜರಿದ್ದರು.

## ಕ್ಷೇತ್ರ ಪುನರ್‌ವಿಂಗಡಣೆ ದಕ್ಷಿಣ ರಾಜ್ಯಗಳಿಗೆ ಅನ್ಯಾಯ



**ಮೈಸೂರು:** ಕ್ಷೇತ್ರ ಪುನರ್‌ವಿಂಗಡಣೆ ಸಂಬಂಧಿಸಿದ ಡಿಲಿಮಿಟೇಶನ್ ಕಾಯ್ದೆ ಜಾರಿಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ತರಲು ಕಾಂಗ್ರೆಸ್‌ಗೆ ಯಾವುದೇ ವಿರೋಧವಿಲ್ಲ ಎಂದರು. 1998ರಲ್ಲಿ ಮಹಿಳಾ ಮೀಸಲಾತಿ ಮಸೂದೆ ಪರಿಚಯಗೊಂಡಿದ್ದು, 2010ರಲ್ಲಿ ಡಾ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ರಾಜ್ಯಸಭೆಯಲ್ಲಿ ಅಂಗೀಕಾರವಾಗಿತ್ತು. ಆದರೆ ಇದೀಗ ಮಹಿಳಾ ಮೀಸಲಾತಿಯ ಜೊತೆಗೆ ಡಿಲಿಮಿಟೇಶನ್ ಕಾಯ್ದೆ ಜಾರಿಗೆ ತರಲು ಮುಂದಾಗಿರುವುದರಲ್ಲಿ ಬಿಜೆಪಿಯ ರಾಜಕೀಯ ಕುತಂತ್ರ ಅಡಗಿದೆ ಎಂದು ಆರೋಪಿಸಿದರು.

ಲೋಕಸಭೆಯ 543 ಸ್ಥಾನಗಳಲ್ಲಿ ಶೇ.50ರಷ್ಟು ಹೆಚ್ಚಳ ಮಾಡುವ ಉದ್ದೇಶದಿಂದ ಡಿಲಿಮಿಟೇಶನ್ ಕಾಯ್ದೆ ಜಾರಿಯಾದರೆ ದಕ್ಷಿಣ ಭಾರತದ ಆರು ರಾಜ್ಯಗಳಿಗೆ ನಷ್ಟವಾಗಲಿದೆ ಎಂದು ಅವರು ತಿಳಿಸಿದರು. ಕರ್ನಾಟಕದ 28 ಲೋಕಸಭಾ ಸ್ಥಾನಗಳು ಶೇ.50ರಷ್ಟು ಹೆಚ್ಚಾದರೆ 42 ಆಗಬೇಕಾಗಿದ್ದು, ಕಾಯ್ದೆಯಲ್ಲಿ 41 ಎಂದು ತೋರಿಸಲಾಗಿದೆ. ಕೇರಳದಲ್ಲಿ 21 ಸ್ಥಾನಗಳು 40 ಆಗಬೇಕಾದರೆ ಕೇವಲ 22 ಸ್ಥಾನಗಳೆಂದು ವಿಂಗಡಿಸಲಾಗಿದೆ. ತಮಿಳುನಾಡಿನಲ್ಲಿ 39 ಸ್ಥಾನಗಳು 60 ಆಗಬೇಕಾದರೆ 48 ಸ್ಥಾನಗಳೆಂದು ಸೂಚಿಸಲಾಗಿದೆ ಎಂದು ವಿವರಿಸಿದರು.

ಕರ್ನಾಟಕ ಸರ್ಕಾರ
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**ಗುಂಡ್ಲುಪೇಟೆ ತಾಲ್ಲೂಕು ಪಂಚಾಯತ್ ಕಾರ್ಯಾಲಯ**
ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ–571111.
ಇ–ಮೇಲ್: eotpgund@gmail.com, ದೂರವಾಣಿ: 08229 200322
**ಟೆಂಡರ್ ಸಂಖ್ಯೆ : ಗುಂತಾಪಂ/01/2026–27** **ದಿನಾಂಕ: 15.04.2026**

**E-PROCUREMENT TENDER NOTIFICATION**
**(Website: http://kppp.karnataka.gov.in)**

2026–27 ನೇ ಸಾಲಿನ ವರ್ಷದ 12 ತಿಂಗಳ ಅವಧಿಗೆ ತಾಲ್ಲೂಕು ಪಂಚಾಯಿತಿ ಕಛೇರಿಗೆ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಅರ್ಹತೆಯುಳ್ಳ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಹೊರ ಸಂಪನ್ಮೂಲ ಸ್ಥಳೀಯ ಏಜೆನ್ಸಿ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ **(KTPP) 1999** ನಿಯಮಗಳು **2000** ರ ಪ್ರಕಾರ **http://kppp.karnataka.gov.in** ಇ– ಟೆಂಡರ್ ಮೂಲಕ ಪಡೆಯಲು ಉದ್ದೇಶಿಸಲಾಗಿದೆ.

| | | |
|---|---|---|
| 1 | ಟೆಂಡರ್ ಪ್ರಕಟಣೆ ದಿನಾಂಕ" | ಟೆಂಡರ್ ಪ್ರಕಟಣೆ ಸಂಖ್ಯೆ:01:ತಾಪಂಗುಂ:ಲೆಶಾ: 2026–27 : 15.04.2026 |
| 2 | ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ | ದಿನಾಂಕ : 16.04.2026 |
| 3 | ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : | ದಿನಾಂಕ : 27.04.2026 ಮದ್ಯಾಹ್ನ 4.00 ಗಂಟೆಗೆ |
| 4 | ಇ ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ | ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಗುಂಡ್ಲುಪೇಟೆ. ದಿನಾಂಕ: 30.04.2026 ಬೆಳಿಗ್ಗೆ 11.00 ಗಂಟೆಗೆ |
| 5 | ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ | ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಗುಂಡ್ಲುಪೇಟೆ ದಿನಾಂಕ 29.04.2026 ಬೆಳಿಗ್ಗೆ 11.00 ಗಂಟೆಗೆ |
| 6. | ಟೆಂಡರ್ ಅಂದಾಜು ಮೊತ್ತ | ರೂ.14,77,000/– |
| 7. | ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ | ರೂ.33,000/– |
| 8 | ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಗುಂಡ್ಲುಪೇಟೆ ದೂರವಾಣಿ ಸಂಖ್ಯೆ : 08229–200322 9480858105 |

ಸಹಿ/–ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಗುಂಡ್ಲುಪೇಟೆ

# ದುಡ್ಡು ಮತ್ತು ಅವಕಾಶ



ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಮನದ ಮಾತು...

"ಅವರೇನು ದುಡ್ಡು ಇರುವವರು, ಏನು ಬೇಕಾದರೂ ಮಾಡಿಯಾರು!!" ಈ ಮಾತು ಪದೇ ಪದೇ ಕೇಳುತ್ತಲೇ ಇರುತ್ತೇವೆ. ನಮಗೆ ಬಾಲ್ಯದಿಂದಲೇ ಕಿವಿಯಲ್ಲಿ ಒಂದು ಮಂತ್ರ ಊದಲಾಗುತ್ತದೆ,.. " ನೋಡು ಓದಿ ಒಳ್ಳೆಯ ನೌಕರಿ ಹಿಡಿದರೆ, ಜೀವನ ಚಂದ!! ಇಲ್ಲಾ ಹೀಗೆ ಹಾಳಾಗಿ ಹೋಗುತ್ತಿ!!, ನಾಕು ದುಡ್ಡು ಮಾಡಿದರೆ ಬಂಧು, ಬಳಗ, ಹೆಂಡತಿ, ಮದುವೆ, ಇಲ್ಲದಿದ್ದರೆ ಯಾರೂ ನಿನ್ನ ಹತ್ತಿರ ಸುಳಿಯುವದಿಲ್ಲ!! "...

ಏನಿದರ ಅರ್ಥ, ಒಳ್ಳೆಯ ನೌಕರಿ ಎಂದರೆ ಉತ್ತಮ ಸಂಬಳ... ಅಲ್ಲವೇ.... ದುಡ್ಡು ಇರುವನು ದೊಡ್ಡವನು... ಹಾಗಾದರೆ

ಕರೋನ ಬಂದಾಗ ದುಡ್ಡಿರುವವರು ಬದುಕಿದರಾ ಅಥವಾ ಆರೋಗ್ಯವಂತರು ಬದುಕಿದರೋ.. ಹೌದಲ್ವೇ!

ನಿಮ್ಮ ಕಪಾಟು ತೆರೆಯಿರಿ, ಬೀರುವಿನ ತುಂಬ ಬಟ್ಟೆಗಳು. ಎಷ್ಟೊಂದು ಅಂದವಾದ, ಬಣ್ಣ ಬಣ್ಣದ ಬ್ರ್ಯಾಂಡೆಡ್ ಬಟ್ಟೆಗಳು. ನೀವು ಒಂದು ನಾಲ್ಕು ಒಟ್ಟಿಗೆ ಒಂದರ ಮೇಲೊಂದು ಹಾಕಿಕೊಳ್ಳಲು ಸಾಧ್ಯವೇ!

ಬೇಡ, ಒಂದು ಉತ್ತಮ ಹೋಟೆಲ್ ಗೆ ಹೋಗಿ, ರುಚಿರುಚಿಯಾದ ಖಾದ್ಯಗಳ ಮೆನು ನಿಮ್ಮ ಕೈಗೆ ಕೊಡುವರು. ಐದಾರು ಪದಾರ್ಥಗಳನ್ನು ಆರ್ಡರ್ ಮಾಡಿ ಎಲ್ಲವನ್ನೂ ಒಬ್ಬರೇ ತಿನ್ನಲು ಸಾಧ್ಯವೇ!

ಅದೂ ಬೇಡ, ನಿಮ್ಮ ಹತ್ತಿರ ಇರುವ, ಲ್ಯಾಪಟಾಪ್, ಮೊಬೈಲ್, ಟಿವಿ ಎಲ್ಲವನ್ನೂ ಆನ್ ಮಾಡಿ!! ಪ್ರತಿಯೊಂದರಲ್ಲಿ ಬೇರೆ, ಬೇರೆ, ಸಿನಿಮಾ, ಹಾಡು, ದೃಶ್ಯ ಓಡಿಸಿ... ಎಲ್ಲವನ್ನೂ ಏಕಕಾಲದಲ್ಲಿ ನೋಡಿ ಅರ್ಥೈಸಿಕೊಳ್ಳಲು ಸಾಧ್ಯವೇ!

ಇನ್ನೂ ಒಂದು ಪ್ರಯತ್ನ!! ನಿಮ್ಮ ದೊಡ್ಡ ಮನೆಯಲ್ಲಿ ನಿಮ್ಮ ಕೋಣೆಯಲ್ಲಿ ಮತ್ತು ಪಕ್ಕದ ಕೋಣೆಯಲ್ಲಿರುವ ಮಂಚ!!

ಎರಡೂ ಮೇಲೆ ನೀವು ಏಕಕಾಲದಲ್ಲಿ ಮಲಗಲು ಸಾಧ್ಯವೇ!

ಹೌದು ನಮ್ಮ ದೇಹ ಇದ್ದಷ್ಟು ಜಾಗವನ್ನು ಮಾತ್ರ ನಾವು ಆವರಿಸಿಕೊಳ್ಳಲು ಸಾಧ್ಯ!! ಅದಕ್ಕಿಂತ ಹೆಚ್ಚು ಜಾಗ ನಮ್ಮದಲ್ಲ!!

ಹಾಗಾದರೆ ಏನಿದರ ಅರ್ಥ...

ನಮ್ಮ ಬೇಡಿಕೆಗಳಿಗೆ, ಅವಶ್ಯಕತೆಗಳಿಗೆ ಮಿತಿ ಇದೆ!!

ಇಂದು ದುಡ್ಡು ನಮ್ಮ ಬಳಿ ಇದೆ, ಅದರ ಅರ್ಥ ಅದು ನಮ್ಮದು ಎಂದು ಅಲ್ಲ... ಅದನ್ನು ಬಳಸುವ ಅವಕಾಶ ಮಾತ್ರ ನಮ್ಮದು.



ನಾಳೆ ಅದು ಇನ್ನ್ಯಾರದೋ ಆಗುತ್ತದೆ.

ನಿಮ್ಮ ಬಳಿ ಎಷ್ಟೇ ದುಡ್ಡು ಇದ್ದರೂ, ನೀವು ಆಸ್ಪತ್ರೆ ಹಾಸಿಗೆಯ ಮೇಲೆ ಮಲಗಿದಾಗ ಆ ದುಡ್ಡನ್ನು ಖರ್ಚು ಮಾಡಬೇಕೋ ಬೇಡವೋ ಎಂಬ ನಿರ್ಧಾರವೇ ಕೆಲವೊಮ್ಮೆ ನಿಮ್ಮದೇ ಇರೋದಿಲ್ಲ.

ಆ ಸಮಯದಲ್ಲಿ ನಿಮ್ಮ ಹತ್ತಿರ ಇರುವವರು, ನಿಮ್ಮ ಕೈ ಹಿಡಿಯುವವರು, ನಿಮ್ಮ ನೋವನ್ನು ಹಂಚಿಕೊಳ್ಳುವವರು ಅವರೇ ನಿಮ್ಮ ನಿಜವಾದ ಸಂಪತ್ತು.

ಸಂಕಟದ ಸಮಯದಲ್ಲಿ ಸಂಗಾತಿಗಳು, ಪ್ರೀತಿಸುವ ಜೀವಗಳು, ಸೇವೆ ನೀಡುವ ಹೃದಯಗಳು ಇವೆಯೇ ನಿಜವಾದ ಸಂಗಾತಿಗಳು.

ಇನ್ನೊಂದು ಕಣ್ಣಿಗೆ ಕಾಣದ ಸತ್ಯ...

ಸಂತನ ಶವಯಾತ್ರೆಗೂ, ಶ್ರೀಮಂತನ ಶವಯಾತ್ರೆಗೂ ತುಂಬಾ ವ್ಯತ್ಯಾಸ ಇದೆ. ಶ್ರೀಮಂತನ ಶವಯಾತ್ರೆಯಲ್ಲಿ ಜನರು ಬಂದಿರಬಹುದು ಆದರೆ ಸಂತನ ಶವಯಾತ್ರೆಯಲ್ಲಿ ಜನರು ಅಳುತ್ತಾರೆ. ಒಬ್ಬನು ಹಣವನ್ನು ಸಂಗ್ರಹಿಸಿದ್ದಾನೆ... ಮತ್ತೊಬ್ಬನು ಹೃದಯಗಳನ್ನು ಗೆದ್ದಿದ್ದಾನೆ.

ಈ ದೇಶ ಋಷಿಮುನಿಗಳನು ಕಂಡ ದೇಶ...

ತ್ಯಾಗ, ಧರ್ಮ, ಮಾನವೀಯತೆಯ ಮೌಲ್ಯಗಳನ್ನು ಬೋಧಿಸಿದ ನೆಲ ಇದು. ಇದೇ ದೇಶದಲ್ಲಿ ಟಾಟಾರಂಥ ಅಮೂಲ್ಯ ವ್ಯಕ್ತಿತ್ವಗಳು ಹುಟ್ಟಿವೆ ಸಂಪತ್ತಿದ್ದರೂ, ಅದನ್ನು ಸಮಾಜಕ್ಕೆ ಹಿಂತಿರುಗಿಸಿದವರು.

ನೀವು ವಿಜ್ಞಾನಿಗಳನು, ಮೇಧಾವಿಗಳನು ಗಮನಿಸಿ...

ಅವರು ಬಾಹ್ಯ ಸಂಪತ್ತಿಗೆ ಕೊಡುವ ಬೆಲೆ ಶೂನ್ಯಕ್ಕೆ ಸಮಾನ.

ಅವರ ಸಂಪತ್ತು ಜ್ಞಾನ, ಆವಿಷ್ಕಾರ, ಸೇವೆ.

ಸಂಪತ್ತು ನಮಗೆ ಶಾಶ್ವತ ಸಂತೋಷವನ್ನು ತಂದುಕೊಡುವುದಿಲ್ಲ.

ಸಣ್ಣ ಸಣ್ಣ ಸಹಾಯಗಳು, ನಿಸ್ವಾರ್ಥ ಕೃತ್ಯಗಳು ಇವೇ ಮನಸ್ಸಿಗೆ ನೆಮ್ಮದಿ ಕೊಡುತ್ತವೆ. ಅಗತ್ಯಕ್ಕಿಂತ ದೇವರು ಹೆಚ್ಚಿಗೆ ನೀಡಿದ ಸಂಪತ್ತು ಅದು ನಮ್ಮ ಅನುಭವಕ್ಕೆ ಮಾತ್ರವಲ್ಲ, ಇನ್ನೊಬ್ಬರಿಗೆ ಸಹಾಯ ಮಾಡಲು ದೇವರು ಕೊಟ್ಟ ಅವಕಾಶ. ಅಂತಹ ಅವಕಾಶಕ್ಕೆ ದೇವರು ನಮ್ಮನ್ನು ಆರಿಸಿದ್ದಾನೆ ಎಂದು ನಾವು ಸಂತಸಪಟ್ಟು ಸಹಾಯ ಮಾಡಬೇಕು.

ವಿನಃ ಸಂಗ್ರಹಣೆ ಮಾಡುತ್ತಾ ಹೋಗಿ ನಾನೇ ಅನುಭವಿಸಬೇಕು ಎಂಬ ಮನೋಭಾವದಲ್ಲಿ ಇರಬಾರದು.

ಇರುವುದರಲ್ಲಿ ಹಂಚುವುದು... ಸುಖವನ್ನು ಕಾಣುವುದು... ನೆಮ್ಮದಿಯಿಂದ ಬದುಕುವುದು ಇದೇ ಜೀವನ. ಒಮ್ಮೆ ಬೌದ್ಧ ಭಿಕ್ಷು ಭಿಕ್ಷೆ ಬೇಡುವಾಗ ವ್ಯಾಪಾರಿ ಒಬ್ಬ ಅವನಿಗೆ ಚಿನ್ನದ ನಾಣ್ಯವನು ನೀಡಿದರಂತೆ... ತಕ್ಷಣ ಅದನು ಅವನು ಹಿಂದುರಿಗೆಸುತ್ತ ಇದು ನನ್ನ ಹಸಿವನ್ನು ನೀಗಿಸುವುದಿಲ್ಲ ಆದರೆ ನಾಳೆ ಆಸೆಯನ್ನು ಹೆಚ್ಚಿಸುತ್ತದೆ ಎಂದು ಮರಳಿ ಕೊಟ್ಟನಂತೆ,ಆಗ ಆ ವ್ಯಾಪಾರಿ ಈ ಚಿನ್ನದ ನಾಣ್ಯ ಮಾರಿ ಬಂದ ಹಣದಿಂದ ಇಂದು ಅಷ್ಟೇ ಅಲ್ಲ ನೀನು ಒಂದು ವಾರ ಹೊಟ್ಟೆ ತುಂಬಿ ಉಣ್ಣಬಹುದು ಎಂದು ಹೇಳಿದನಂತೆ ಆಗಬಹುದ ಭಿಕ್ಷು ಇಂದಿನ ಊಟ ಇಂದಿನ ವಿದ್ಯೆ ಅಷ್ಟನ್ನೇ ನಾನು ಯೋಚಿಸುವುದು ಈ ನಾಣ್ಯ ಒಯ್ದರೇ ನಾಳೆಯ ಆಸೆ, ಮೋಹ ಮತ್ತೆ ಸಂಪತ್ತಿನ ದಾಹ ಎಲ್ಲವನ್ನು ಹೆಚ್ಚಿಸುವುದು!! ಹಸಿವು ನೀಗಿಸಲು ಅನ್ನಬೇಕು ಚಿನ್ನವಲ್ಲ!!ಬದುಕಲು ಜ್ಞಾನ ಬೇಕು ಸುಖದ ಐಶಾರಾಮಿ ವಸ್ತುಗಳಲ್ಲ!! ಎಂದು ಹೇಳಿ ಹೊರಟು ಹೋದನು . ಆಗ ಆ ವ್ಯಾಪಾರಿಗೆ ಅನಿಸಿತು ಆ ಬೌದ್ಧ ಭಿಕ್ಷುವಿನಲ್ಲಿರುವಷ್ಟು ನೆಮ್ಮದಿ ನಿರಾಳತೆ ನನಗೆ ಇಲ್ಲ ಇದರ ಅರ್ಥ ಇಷ್ಟೇ! ಸಂಪತ್ತು ಸುಖ ಮತ್ತು ನೆಮ್ಮದಿಯನ್ನು ಕೊಡುವುದಿಲ್ಲ.

**ಕೊನೆಯ ಮಾತುಗಳು:** ದುಡ್ಡು ನಮ್ಮನ್ನು ದೊಡ್ಡವರನ್ನಾಗಿಸಬಹುದು, ಆದರೆ ಮನಸ್ಸು ಮಾತ್ರ ನಮಗೆ ಮಾನವನ್ನು ತಂದುಕೊಡುತ್ತದೆ. ಸಂಪತ್ತು ನಮ್ಮ ಬಳಿ ಉಳಿಯಬಹುದು, ಆದರೆ ಒಳ್ಳೆಯತನ ಮಾತ್ರ ಜನರ ಮನದಲ್ಲಿ ಉಳಿಯುತ್ತದೆ. ನಾವು ತೆಗೆದುಕೊಂಡು ಹೋಗುವುದೇನೂ ಇಲ್ಲ, ಬಿಟ್ಟು ಹೋಗುವುದು ನಮ್ಮ ನಡೆ, ನಮ್ಮ ನೆನಪು. ಜೀವನದ ಕೊನೆಯ ಕ್ಷಣದಲ್ಲಿ, ನಾವು ಗಳಿಸಿದ ಹಣ ನೆನಪಿಗೆ ಬರೋದಿಲ್ಲ ನಾವು ಕೊಟ್ಟ ಪ್ರೀತಿ, ಮಾಡಿದ ಸಹಾಯ ಮಾತ್ರ ನೆನಪಿಗೆ ಬರುತ್ತವೆ. ಹೀಗಾಗಿ ಸಂಪತ್ತನ್ನು ಅಲ್ಲ, ಸಂತೋಷವನ್ನು ಸಂಗ್ರಹಿಸಿ. ವಸ್ತುಗಳನ್ನು ಅಲ್ಲ, ಸಂಬಂಧಗಳನ್ನು ಬೆಳೆಸಿ. ಸ್ವಾರ್ಥವನ್ನು ಅಲ್ಲ, ಸಹಾಯವನ್ನು ಆಯ್ಕೆಮಾಡಿ. ಆಗ ಮಾತ್ರ ಜೀವನವು ಕೇವಲ ಬದುಕು ಆಗಿರದೆ, ಒಂದು ಅರ್ಥಪೂರ್ಣ ಪ್ರಯಾಣವಾಗುತ್ತದೆ. ಸಮಯದ ಸದ್ವಿನಿಯೋಗ ಆಗಲಿ.

# ಒಂಟಿತನದ ನೋವು...





ಸ್ನೇಹಾ ಆನಂದ್

ಸ್ನೇಹ ಲೋಕ

ಈ ಒಂದು ವಿಷಯದ ಬಗ್ಗೆ ಬರೆಯಲು ನನಗೆ ಸ್ವಲ್ಪ ಹಿಂಜರಿಕೆ ಇತ್ತು , ಆದರೆ ಅದರ ಬಗ್ಗೆ ಎಲ್ಲರೂ ಯೋಚಿಸಲೇ ಬೇಕು ಎನ್ನುವುದು ಅಷ್ಟೇ ಸತ್ಯ, ಹೀಗಾಗಿ ಬರೆಯುತ್ತಿದ್ದೇನೆ.

ಬದುಕು ಯಾವಾಗಲೂ ಪ್ರೀತಿಯಿಂದ ತುಂಬಿದೆ, ಹೀಗಾಗಿ ಏಕಾಂಗಿಯಾಗಿ ಬದುಕುವುದು ತುಂಬಾ ಕಷ್ಟ ಜೊತೆಗೆ ಅದು ಅತ್ಯಂತ ವೇದನೆ ಕೊಡುವ ವಿಷಯ! ಮಕ್ಕಳು ಪ್ರೀತಿ,ಕಾಳಜಿ ವಹಿಸಿದರೆ ಮಾತ್ರ ಸ್ವಲ್ಪ ಮಟ್ಟಿಗೆ ಸರಿ, ಆದರೂ ಜೀವನ ಸಂಗಾತಿಯ ಸ್ಥಾನ ಯಾರೂ ತುಂಬಲು ಸಾಧ್ಯವಿಲ್ಲ, ಆದರೆ ಯಾವುದೋ ಕಾರಣಕ್ಕೆ ಅನಿವಾರ್ಯವಾಗಿದ್ದರೆ ಮಾತ್ರ ಒಂಟಿಯಾಗಿ ಬದುಕ ಬೇಕು!

ಹೇಗೆಂದರೆ ಮಕ್ಕಳ ಜೀವನದಲ್ಲಿ ಇವರಿಗೆ ಸುಂದರ ಪಾತ್ರವಿದ್ದರೆ ಅಥವಾ,ತನ್ನದೇ ಆದ ಒಂದು ವ್ಯಕ್ತಿತ್ವ ರೂಪಿಸಿಕೊಂಡು ನನಗೆ ಇಷ್ಟೇ ಜೀವನ ಸಾಕು, ಸಂಗಾತಿಯ ಅವಶ್ಯಕತೆ ಇಲ್ಲ ಎನ್ನುವ ದೃಢ ನಿರ್ಧಾರ ತೆಗೆದುಕೊಂಡಿದ್ದರೆ ಮಾತ್ರ ಸರಿ !

ಒಂದು ವೇಳೆ ಮತ್ತೇ ಜೀವನ ಸಂಗಾತಿಯ ಅವಶ್ಯಕತೆ ಇದೆ ಎಂದುಕೊಂಡವರು ಹೇಳಲು ಸಂಕೋಚ ಮುಜುಗರ ಪಡುತ್ತಾರೆ, ಆಗ ಆತ್ಮೀಯರು, ಹಿತೈಷಿಗಳು, ಮನೆಯವರು ಅವರ ಮನದ ಇಂಗಿತವನ್ನು ಅರ್ಥ ಮಾಡಿಕೊಂಡು ಅವರ ಜೀವನದಲ್ಲಿ ಸಂಗಾತಿಯನ್ನು ಜೊತೆಗೂಡಿಸಬೇಕು, ಇದು ಇವರೆಲ್ಲರ ಒಂದು ಕರ್ತವ್ಯವೇ ಸರಿ!

ಪ್ರತಿಯೊಬ್ಬ ಜೀವಿಗೂ ಜೀವನ ಸಂಗಾತಿಯ ಅವಶ್ಯಕತೆ ಜಾಸ್ತಿ ಇರುವುದು ಮಧ್ಯಮ ವಯಸ್ಸಾದ ಮೇಲೆಯೇ! ಮಕ್ಕಳು ದೊಡ್ಡವರಾಗಿ ಅವರ ಜೀವನ ಅವರದಾದ ಮೇಲೆ ಆಸರೆ ಎಂದರೆ ಜೀವನ ಸಂಗಾತಿಯೇ!

ಹೀಗಾಗಿ ಯಾರೂ ಅವರ ಜೊತೆ ಇಲ್ಲದೆ, ಇದ್ದರೂ ಕೂಡ ಅವರನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದಾಗ, ಒಂಟಿಯಾಗಿ ಕಷ್ಟ ಅನುಭವಿಸುವವರ ಜೊತೆಗೆ ಇನ್ನೊಬ್ಬರು ಅಂಥವರೇ ಸಿಕ್ಕರೆ, ಸೇರಿದರೆ ಇಬ್ಬರಿಗೂ ಜೊತೆ ಸಿಕ್ಕಂತೆ ಅಲ್ಲವೇ!

ಯಾವ ನೋವನ್ನು ಯಾರು ಅನುಭವಿಸುತ್ತಿದ್ದಾರೆಯೋ ಅಂತಹ ನೋವನ್ನು ಅನುಭವಿಸುವವರಿಗೆ ಇವರ ಕಷ್ಟ

ವೇದನೆ ಅರ್ಥಮಾಡಿಕೊಳ್ಳುವುದು ಸುಲಭ!ಆದರೆ ಅವರು ನಂಬಿಕೆಗೆ ಅರ್ಹವಾದ ವ್ಯಕ್ತಿಯೇ, ಎಂದು ತುಂಬಾ ಎಚ್ಚರಿಕೆಯಿಂದ ಪರಾಮರ್ಶಿಸಿಯೇ ಹೆಜ್ಜೆ ತಪ್ಪದಂತೆ ದೃಢ ನಿಲುವು ತೆಳೆದು ಜೀವನದ ಬಗ್ಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು!

ಹೀಗೆಲ್ಲ ಗಂಡಸರಿಗೆ ಸರಳವಾಗಿ ಯೋಚಿಸುತ್ತದೆ ಸಮಾಜ, ಅದೇ ರೀತಿ ಹೆಣ್ಣಿಗೆ ಯಾಕಿಲ್ಲ? ಅವಳ ಕಷ್ಟಕ್ಕೆ ಇನ್ನೂ ಕಷ್ಟ ಕೊಡುವಂತೆ ಅನಾದರ ತೋರುತ್ತಾರೆ,

ಇದನ್ನು ಗಂಡು ಸರಳವಾಗಿ ತೆಗೆದುಕೊಳ್ಳಬಹುದು ಆದರೆ ಹೆಣ್ಣಿಗೆ ಇದು ಅಸಾಧ್ಯದ ಮಾತು! ಏಕೆಂದರೆ ಸಮಾಜದ ಕೆಂಗಣ್ಣು ಈಗಲೂ ಈ ಆಧುನಿಕ ಯುಗದಲ್ಲೂ ಅವಳನ್ನು ಬೇಕಾಬಿಟ್ಟಿ ಹೀಯಾಳಿಸುತ್ತದೆ, ಕೆಟ್ಟಗಣ್ಣಿನಿಂದ ನೋಡುತ್ತದೆ! ಹರೆಯದ ಹೆಣ್ಣನ್ನಂತೂ ಹಸಿದ ಕಣ್ಣುಗಳು ಯಾವಾಗಲೂ ಹಿಂಬಾಲಿಸುತ್ತವೆ!

ಇದಕ್ಕೆ ಇನ್ನೂ ಪರಿಹಾರವೇ ಸಿಕ್ಕಿಲ್ಲ ನಮ್ಮ ಸಮಾಜದಲ್ಲಿ !

ಹೀಗಾಗಿ ಮನದಲ್ಲಿ ನೂರೆಂಟು ಯೋಚನೆಗಳು ಬಂದರೂ ಹೆಣ್ಣು ವೇದನೆಯಿಂದ ಅದನ್ನು ಎದೆಯಲ್ಲಿ ಬಚ್ಚಿಟ್ಟು, ಏಕಾಂಗಿಯಾಗಿ ಜೀವಿಸುತ್ತಾಳೆ!

ಆದರೆ ಇದನ್ನು ಅವಳ ಜೀವನಕ್ಕೆ ಹತ್ತಿರದವರು ತಿಳಿದುಕೊಳ್ಳುವುದು ಒಳ್ಳೆಯದು !ಇದರಿಂದ ಒಂದು ಮನವು ನೆಮ್ಮದಿಯನ್ನು ಕಾಣುತ್ತದೆ, ಕಣ್ಣು ಕೃತಜ್ಞತೆ ಹೇಳುತ್ತದೆ ಎಂದರೆ ಇನ್ನೇನು ಬೇಕು, ಅದರಲ್ಲಿರುವ ಸಾರ್ಥಕತೆ ಬೇರೆ ಎಲ್ಲಿದೆ!

ಹೀಗೆ ಸಮಾಜ ಕಲ್ಯಾಣಕ್ಕೆ ಒಳ್ಳೆಯ ವಿಷಯವನ್ನು ನಾವು ಬರೆದರೆ ಅದರಿಂದ

ಯಾರೋ ಒಬ್ಬರ ಜೀವನ ಸುಧಾರಿಸಿದರೂ ಸಾಕು ನಮ್ಮ ಲೇಖನಿಗೆ ಸಂತೃಪ್ತಿ !

ದಯವಿಟ್ಟು ನಿಮ್ಮ ಹತ್ತಿರದವರಲ್ಲಿ ಹೀಗಿದ್ದವರು ಇದ್ದರೆ ಒಂದು ಸಲ ಕಾಳಜಿಯಿಂದ, ಪ್ರೀತಿಯಿಂದ ಮಾತನಾಡಿ ಅವರ ಮನಸ್ಥಿತಿ, ಪರಿಸ್ಥಿತಿ ತಿಳಿದುಕೊಳ್ಳಿ, ಯಾವುದೇ ಕಾರಣಕ್ಕೂ ಒತ್ತಡ ಹೇರಬೇಡಿ , ಪ್ರೀತಿ, ಕಾಳಜಿಯಿಂದ ತಿಳಿಸಿ ಹೇಳಿ, ಆಗ ಅವರ ನೋವು, ಯೋಚನೆಗಳು ನಿಮಗೆ ಸರಿಯಾಗಿ ತಿಳಿಯುತ್ತದೆ, ಆಗ ಒಳ್ಳೆಯ ಸಲಹೆಯನ್ನು ಅವರಿಗೆ ಕೊಟ್ಟು ನಿರ್ಧಾರವನ್ನು ಅವರಿಗೆ ಬಿಟ್ಟು ಬಿಡಿ, ಅದಕ್ಕೆ ತಕ್ಕಂತೆ ಒಳ್ಳೆಯ ಪರಿಹಾರ ಹುಡುಕಿ!

ಒಟ್ಟಿನಲ್ಲಿ ನಿಮಗೆ ಸಂಬಂಧ ಪಟ್ಟವರು ನಿಮ್ಮವರೇ ತಾನೇ! ಅವರು ಜೀವನದ ಬಗ್ಗೆ ಯೋಚಿಸುವುದು ನಿಮ್ಮದೇ ಕೆಲಸ, ಅಂದ ಮೇಲೆ ಅಂಥವರ ಒಂಟಿತನಕ್ಕೆ ಒಂದು ಸಮಾಧಾನ ಕೊಡಲು ನಿಮಗೆ ಸಾಧ್ಯವಾದರೆ ಸಂತೋಷ, ಇಲ್ಲ ಅದು ಸಾಧ್ಯವೇ ಇಲ್ಲ ಎನಿಸಿದರೆ ಅವರ ಮನಸ್ಸಿಗೆ ತಕ್ಕ ವ್ಯವಸ್ಥೆ ಮಾಡಿಕೊಳ್ಳಲು ಸಹಾಯ, ಸೂಚನೆ ಕೊಡಬಹುದು, ಒಟ್ಟಿನಲ್ಲಿ ಅವರ ನಿರ್ಧಾರವನ್ನು ಗೌರವದಿಂದ ಕಾಣುವುದು ಮುಖ್ಯ!

( ನಾನು ಅತಿ ಸೂಕ್ಷ್ಮವಾಗಿ ಬರೆದಿದ್ದೇನೆ, ಕಾರಣ ಇಷ್ಟೇ ಯಾರ ಮನಸ್ಸು ನನ್ನಿಂದ ನೋಯಬಾರದು ಎನ್ನುವ ಕಾಳಜಿ ಅಷ್ಟೇ)



# "ಸಾಮಾನ್ಯನಿಂದ ಅಸಾಮಾನ್ಯನೆಡೆಗೆ"

ಮಾನವ ಜನ್ಮ ಎಂಬುದು ಪ್ರಕೃತಿ ನೀಡಿದ ಅತ್ಯಮೂಲ್ಯ ಉಡುಗೊರೆ. ಈ ಭೂಮಿಯ ಮೇಲೆ ಜನಿಸುವ ಪ್ರತಿಯೊಬ್ಬರೂ ಆರಂಭದಲ್ಲಿ ಸಾಮಾನ್ಯರಾಗಿಯೇ ಇರುತ್ತಾರೆ. ಆದರೆ, ಕಾಲಕ್ರಮೇಣ ಅವರು ಪಡುವ ಅಪಾರ ಶ್ರಮ, ಅಳವಡಿಸಿಕೊಳ್ಳುವ ಉನ್ನತ ಮೌಲ್ಯಗಳು ಮತ್ತು ಪ್ರದರ್ಶಿಸುವ ಅದಮ್ಯ ಧೈರ್ಯ ಅವರನ್ನೊಬ್ಬ ಅಸಾಮಾನ್ಯ ವ್ಯಕ್ತಿಯನ್ನಾಗಿ ರೂಪಿಸುತ್ತವೆ. "ಜಗತ್ತು ನಿನ್ನನ್ನು ಗುರುತಿಸಬೇಕೆಂದರೆ ನೀನು ವಿಶಿಷ್ಟವಾಗಿ ಏನಾದರೂ ಸಾಧಿಸು" ಎಂಬ ನುಡಿಮುತ್ತು ಕೇವಲ ಪ್ರೇರಣೆಯಲ್ಲ; ಅದು ಬದುಕಿನ ಸಾರ್ಥಕತೆಯ ಮೂಲಮಂತ್ರ. ಗುಂಪಿನಲ್ಲಿ ಒಬ್ಬನಾಗಿ ಕಳೆದುಹೋಗುವ ಬದಲು, ಆ ಗುಂಪಿಗೆ ದಾರಿದೀಪವಾಗುವ ಪಯಣವೇ ಸಾಮಾನ್ಯತೆಯಿಂದ ಅಸಾಮಾನ್ಯತೆಯೆಡೆಗಿನ ಪಯಣ.

ನಮ್ಮೊಳಗೆ ಸುಪ್ತವಾಗಿರುವ ಅಗಾಧ ಶಕ್ತಿಯನ್ನು ಗುರುತಿಸುವುದೇ ಅಸಾಮಾನ್ಯ ಸಾಧನೆಯ ಪ್ರಥಮ ಹೆಜ್ಜೆ. ಬಹುತೇಕರು ತಮ್ಮನ್ನು ತಾವು ಕೇವಲ ಮಿತಿಗಳ ಚೌಕಟ್ಟಿನಲ್ಲಿ ಬಂಧಿಸಿಕೊಳ್ಳುತ್ತಾರೆ. ಆದರೆ, ಅಸಾಮಾನ್ಯನಾಗುವವನು ಈ ಚೌಕಟ್ಟನ್ನು ಸೀಳಿ ಹೊರಬರುವ ಛಲ ಹೊಂದಿರುತ್ತಾನೆ. ನಾವು ಮಾಡುವ ಪ್ರತಿಯೊಂದು ಸಣ್ಣ ಕೆಲಸದಲ್ಲೂ ಒಂದು ವಿಶಿಷ್ಟತೆ ಇರಬೇಕು. ಆ ವಿಶೇಷತೆಯೇ ನಮ್ಮ ವ್ಯಕ್ತಿತ್ವಕ್ಕೆ ಹೊಸ ಆಯಾಮವನ್ನು ನೀಡಿ, ಇಡೀ ಜಗತ್ತು ನಮ್ಮತ್ತ ತಿರುಗಿ ನೋಡುವಂತೆ ಮಾಡುತ್ತದೆ.


ಸ್ವಾಮಿ ವಿವೇಕಾನಂದರ ಜೀವನದ ಒಂದು ರೋಚಕ ಘಟನೆ, ಸಾಮಾನ್ಯ ಮನಸ್ಸನ್ನು ಅಸಾಮಾನ್ಯ ಶಕ್ತಿಯನ್ನಾಗಿ ಹೇಗೆ ಪರಿವರ್ತಿಸಬಹುದು ಎಂಬುದಕ್ಕೆ ಅತ್ಯುತ್ತಮ ನಿದರ್ಶನ. ಒಮ್ಮೆ ಅವರು ಅಮೆರಿಕದ ಪ್ರವಾಸದಲ್ಲಿದ್ದಾಗ, ಕೆಲವು ಯುವಕರು ನದಿಯಲ್ಲಿ ತೇಲುತ್ತಿದ್ದ ಮೊಟ್ಟೆಯ ಕವಚಗಳ ಮೇಲೆ ಗುರಿ ಇಟ್ಟು ಹೊಡೆಯಲು ಹರಸಾಹಸ ಪಡುತ್ತಿದ್ದುದನ್ನು ಕಂಡರು. ಅವರು ಎಷ್ಟೇ ಪ್ರಯತ್ನಿಸಿದರೂ ಗುರಿ ಮಾತ್ರ ಲಭಿಸುತ್ತಿರಲಿಲ್ಲ. ಇದನ್ನು ಗಮನಿಸಿದ ವಿವೇಕಾನಂದರು, ಮಂದಹಾಸ ಬೀರುತ್ತಾ ಅವರ ಬಳಿ ತೆರಳಿ, ಪಿಸ್ತೂಲನ್ನು ಕೈಗೆತ್ತಿಕೊಂಡರು. ಅಚ್ಚರಿಯೆಂದರೆ, ಸತತವಾಗಿ ಹನ್ನೆರಡು ಬಾರಿ ಅವರು ಆ ಪುಟ್ಟ ಕವಚಗಳಿಗೆ ನಿಖರವಾಗಿ ಗುರಿ ಹೊಡೆದರು!



ಬೆರಗಾದ ಯುವಕರು, "ಇದು ಹೇಗೆ ಸಾಧ್ಯ? ನೀವು ಮೊದಲೇ ಶಸ್ತ್ರವಿದ್ಯೆ ಕಲಿತಿದ್ದೀರಾ?" ಎಂದು ಪ್ರಶ್ನಿಸಿದರು. ಆಗ ವಿವೇಕಾನಂದರು ಶಾಂತವಾಗಿ ಉತ್ತರಿಸಿದರು: "ನಾನು ಎಂದೂ ಪಿಸ್ತೂಲು ಹಿಡಿದವನಲ್ಲ. ಆದರೆ ನಾನು ಮಾಡುವ ಪ್ರತಿಯೊಂದು ಕಾರ್ಯದಲ್ಲೂ ನನ್ನ ಸಂಪೂರ್ಣ ಮನಸ್ಸನ್ನು ಏಕಾಗ್ರಗೊಳಿಸುತ್ತೇನೆ. ನೀವು ಗುರಿ ಇಡುವಾಗ ಕೇವಲ ಗುರಿಯನ್ನು ಮಾತ್ರ ನೋಡಬೇಕು, ಬೇರೇನನ್ನೂ ಅಲ್ಲ. ಈ ಏಕಾಗ್ರತೆಯೇ ಒಬ್ಬ ಸಾಮಾನ್ಯನನ್ನು ಅಸಾಮಾನ್ಯನನ್ನಾಗಿ ರೂಪಿಸುವ ಅತಿದೊಡ್ಡ ಶಕ್ತಿ."

ಜಗತ್ತು ಯಾವತ್ತೂ ಅನುಕರಣೆ ಮಾಡುವವರಿಗಿಂತ ಹೊಸ ಹಾದಿಯನ್ನು ಸೃಷ್ಟಿಸುವವರನ್ನು ಗೌರವಿಸುತ್ತದೆ. ಸಾಧಾರಣ ಕೆಲಸಗಳನ್ನು ಅಸಾಧಾರಣ ನಿಷ್ಠೆಯಿಂದ ಮಾಡುವುದೇ ನಿಜವಾದ ವಿಶೇಷತೆ. ಕಲೆ, ಸಾಹಿತ್ಯ, ಕ್ರೀಡೆ ಅಥವಾ ವಿಜ್ಞಾನ ಯಾವುದೇ ಕ್ಷೇತ್ರವಿರಲಿ, ಅಲ್ಲಿ ಧ್ರುವತಾರೆಯಂತೆ ಮಿಂಚಿದವರೆಲ್ಲರೂ ಸಿದ್ಧಮಾದರಿಯ ಹಾದಿಯನ್ನು ಬಿಟ್ಟು ತಮ್ಮದೇ ಆದ ಸ್ವಂತಿಕೆಯ ಹಾದಿಯನ್ನು ನಿರ್ಮಿಸಿಕೊಂಡವರು. ಸೃಜನಶೀಲತೆ ಮತ್ತು ನಾವೀನ್ಯತೆ ಇಲ್ಲದಿದ್ದರೆ ಬದುಕು ಕೇವಲ ನೀರಸವಾಗುತ್ತದೆ.

ಸಾಮಾನ್ಯ ವ್ಯಕ್ತಿಯೊಬ್ಬ ಅಸಾಮಾನ್ಯನಾಗಿ ಬದಲಾಗುವುದು ಆಕಸ್ಮಿಕವಾಗಿ ಸಂಭವಿಸುವ ಪವಾಡವಲ್ಲ. ಅದರ ಹಿಂದೆ ವರ್ಷಗಳ ಸತತ ಪರಿಶ್ರಮ, ಅಚಲವಾದ ದೃಢ ಸಂಕಲ್ಪ ಮತ್ತು ಅಪಾರವಾದ ತಾಳ್ಮೆ ಇರುತ್ತದೆ. ಟೀಕೆಗಳಿಗೆ ಅಂಜದೆ, ಅಪಹಾಸ್ಯಕ್ಕೆ ಎದೆಗುಂದದೆ ತನ್ನ ಗುರಿಯತ್ತ ಸಾಗುವವನು ಮಾತ್ರ ಯಶಸ್ಸಿನ ಶಿಖರವನ್ನು ಏರಬಲ್ಲ. ವ್ಯಕ್ತಿತ್ವದ ವಿಕಸನವು ಕಲ್ಲಿನಿಂದ ಶಿಲ್ಪವು ಅರಳುವ ಪ್ರಕ್ರಿಯೆಯಂತೆ; ಅಲ್ಲಿ ಉಳಿ-ಪೆಟ್ಟುಗಳು ಅನಿವಾರ್ಯ. ಈ ನೋವನ್ನು ಸಹಿಸಿಕೊಂಡವನೇ ಅಂತಿಮವಾಗಿ ಜಗತ್ತು ಆರಾಧಿಸುವ ಶ್ರೇಷ್ಠ ಚೇತನವಾಗುತ್ತಾನೆ.



ಡಾ.ಸುಧಾಕರ.ಜಿ.
ಲಕ್ಕವಳ್ಳಿ.
8747969381

ನಮ್ಮ ಅಸಾಮಾನ್ಯತೆ ಕೇವಲ ವೈಯಕ್ತಿಕ ಲಾಭಕ್ಕೆ ಸೀಮಿತವಾಗಬಾರದು. ನಾವು ಮಾಡುವ ಪ್ರತಿಯೊಂದು ಸಾಧನೆಯೂ ಸಮಾಜಕ್ಕೆ ಉಪಯುಕ್ತವಾದಾಗ ಮಾತ್ರ ಅದಕ್ಕೊಂದು ಪೂರ್ಣತ್ವ ಲಭಿಸುತ್ತದೆ. ಕೇವಲ ತಮಗಾಗಿ ಬದುಕುವವರು ಸಾಮಾನ್ಯರು, ಸಮಷ್ಟಿಯ ಹಿತಕ್ಕಾಗಿ ಬದುಕುವವರು ಅಸಾಮಾನ್ಯರು. ನಮ್ಮ ಜ್ಞಾನ, ಕೌಶಲ್ಯ ಮತ್ತು ವಿಶಿಷ್ಟತೆಗಳು ನಾಡಿನ ಏಳಿಗೆಗೆ ಬೆಳಕಾಗಬೇಕು.

ಜೀವನವೆಂಬ ಮಹಾ ವೇದಿಕೆಯಲ್ಲಿ ಪ್ರತಿಯೊಬ್ಬರಿಗೂ ವಿಶಿಷ್ಟವಾದ ಪಾತ್ರವಿದೆ. ಆ ಪಾತ್ರವನ್ನು ಎಷ್ಟು ಪ್ರಭಾವಶಾಲಿಯಾಗಿ ನಿರ್ವಹಿಸುತ್ತೇವೆ ಎಂಬುದು ನಮ್ಮ ಕೈಯಲ್ಲಿದೆ. ಆಲಸ್ಯವನ್ನು ಕಿತ್ತೊಗೆದು, ಆತ್ಮವಿಶ್ವಾಸದ ಕವಚ ತೊಟ್ಟು, ವೈಶಿಷ್ಟ್ಯಪೂರ್ಣ ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳೋಣ. ಆಗ ಮಾತ್ರ ನಮ್ಮ ಜೀವನವು ಸಾಮಾನ್ಯತೆಯ ಕತ್ತಲೆಯಿಂದ ಅಸಾಮಾನ್ಯತೆಯ ಬೆಳಕಿನೆಡೆಗೆ ಸಾಗುತ್ತದೆ.

# ಅಕ್ಷಯ ಫಲನೀಡುವ ಅಕ್ಷತೃತೀಯ





ವೈಶಾಖಮಾಸದ ಶುಕ್ಲಪಕ್ಷದ ತೃತೀಯ ದಿನವನ್ನು ಅಕ್ಷಯತೃತೀಯ ಎಂದು ಕರೆಯಲಾಗುತ್ತದೆ.ಸಂಸ್ಕೃತದಲ್ಲಿ ಅಕ್ಷಯ ಪದದ ಅರ್ಥ ಅಂತ್ಯವಿಲ್ಲ ಮತ್ತು ಅದೃಷ್ಟವನ್ನು ತರುತ್ತದೆ ಎಂಬ ನಂಬಿಕೆಯಿದೆ.ಅಕ್ಷಯ ಪದವು ಅಭ್ಯುದಯ, ಭರವಸೆ,ಸಂತೋಷ,ಯಶಸ್ಸು,ಎಂಬ ಅರ್ಥದಲ್ಲಿ ಎಂದೂ ಕಡಿಮೆಯಾಗುವದಿಲ್ಲ ಎಂದರ್ಥವನ್ನು ನೀಡುತ್ತದೆ. ಅಕ್ಷಯತೃತೀಯವನ್ನು ಆಕ್ತಿ ಅಥವಾ ಅಖಾತೀಜ ಎಂದೂ ಕರೆಯುತ್ತಾರೆ.ಹಿಂದೂ ಪುರಾಣದ ಪ್ರಕಾರ ತ್ರೇತಾಯುಗವು ಅಕ್ಷಯತೃತೀಯದಂದು ಪ್ರಾರಂಭವಾಯಿತು.ವಿಷ್ಣುವಿನ ಆರನೇಯ ಅವತಾರವಾದ ಪರಶುರಾಮನ ಜನ್ಮದಿನವೆಂದು ಹಿಂದೂಗಳು ನಂಬುತ್ತಾರೆ.ಪರಶುರಾಮನ ಗೌರವಾರ್ಥವಾಗಿ ಆಚರಿಸುವವರು ಈ ಹಬ್ಬವನ್ನು ಪರಶುರಾಮಜಯಂತಿ ಎಂದು ಉಲ್ಲೇಖಿಸುತ್ತಾರೆ.ಕೆಲವರು ವಿಷ್ಣುವಿನ ಎಂಟನೇಯ ಅವತಾರ ಕೃಷ್ಣನ ಮೇಲೆ ತಮ್ಮ ಗೌರವ ಕೇಂದ್ರೀಕರಿಸುತ್ತಾರೆ.ಸನಾತನ ಧರ್ಮದಲ್ಲಿ ವೈಶಾಖ ಮಾಸಕ್ಕೆ ಹೆಚ್ಚಿನ ಮಹತ್ವವಿದೆ.ಈ ಸಮಯವನ್ನು ಮಂಗಳಕರ ಅದೃಷ್ಟವೆಂದು ಪರಿಗಣಿಸಲಾಗುತ್ತದೆ.ಈ ಸಮಯದಲ್ಲಿ ಸ್ನಾನ,ದಾನ,ಪಠಣ,ತಪಸ್ಸು,ಯಾಗ ಆಚರಣೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ ಎಂಬ ನಂಬಿಕೆ ನಮ್ಮಲ್ಲಿದೆ.ಆ ದಿನದಂದು ಮಾಡಿದ ದಾನದ ಫಲವು ಅಕ್ಷಯಫಲವೆಂಬ ನಂಬಿಕೆ ಇದೆ.ಆ ದಿನದಂದು ದಾನ ಮಾಡುವ ವ್ಯಕ್ತಿಗೆ ವೈಕುಂಠಧಾಮದಲ್ಲಿ ಸ್ಥಾನ ಸಿಗುತ್ತದೆ.ಗಂಗೆಯಲ್ಲಿ ಸ್ನಾನ ಮಾಡಿ ಬಾರ್ಲಿಯನ್ನು ದಾನ ಮಾಡಿದರೆ ಮನುಷ್ಯನ ಎಲ್ಲ ಪಾಪಗಳು ನಾಶವಾಗುತ್ತವೆ ಎಂಬ ಪ್ರತೀತಿಯಿದೆ.



**ಹಿಂದೂ ಪುರಾಣದ ಪ್ರಕಾರ:** ಹಿಂದೂ ಪುರಾಣದ ಪ್ರಕಾರ ಯುದಿಷ್ಟರನು ಶ್ರೀ ಕೃಷ್ಣನ ಬಳಿ ಅಕ್ಷಯತೃತೀಯ ಮಹತ್ವ ತಿಳಿಯಬೇಕೆಂದು ಕೇಳಿದಾಗ ಶ್ರೀಕೃಷ್ಣನು ಯುಧಿಷ್ಟರನಿಗೆ ಯಾವುದೇ ಶುಭವನ್ನು ಮಾಡಲು ಲಭ್ಯವಿರುವ ಎಲ್ಲಕ್ಕಿಂತ ಅತ್ಯಂತ ಮಂಗಳಕರವಾದ ತಿಥಿ ಅಕ್ಷಯತೃತೀಯಾ ಎಂದು ಹೇಳುತ್ತಾನೆ. ಋಷಿ ವ್ಯಾಸರು ಹಿಂದೂ ಮಹಾಕಾವ್ಯ ಮಹಾಭಾರತವನ್ನು ಅಕ್ಷಯತೃತೀಯ ದಿನದಂದು ಗಣೇಶದೇವರಿಗೆ ಪಠಿಸಲು ಪ್ರಾರಂಭಿಸಿದರು.ಇನ್ನೊಂದು ದಂತ ಕಥೆಯ ಪ್ರಕಾರ ಗಂಗಾನದಿಯು ಈ ದಿನದಂದು ಭೂಮಿಗೆ ಇಳಿದ ದಿನವೆಂದು ಹೇಳಲಾಗುತ್ತಿದೆ.ಸುಧಾಮನು ತನ್ನ ಬಾಲ್ಯದ ಗೆಳೆಯ ಕೃಷ್ಣನನ್ನು ದ್ವಾರಕೆಯಲ್ಲಿ ಬೇಟಿ ಮಾಡಿದಾಗ ಅನಿಯಮಿತ ಸಂಪತ್ತನ್ನು ವರವಾಗಿ ಪಡೆದಾಗ ಈ ಶುಭದಿನದಂದು ಕುಬೇರನು ಸಂಪತ್ತಿನ ದೇವರನ್ನು ನಂಬಿಸಿದನೆಂದು ನಂಬಲಾಗಿದೆ.

**ಪೂಜಾವಿಧಾನ:** ಬೇಗ ಎದ್ದು ಸ್ನಾನ ಮಾಡಿ ಹಳದೀಬಣ್ಣದ ಬಟ್ಟೆ ಧರಿಸಿದರೆ ಶ್ರೇಷ್ಟವೆಂದು,ಪೂಜೆ ಮಾಡುವವರು ಗಂಗಾಜಲದಿಂದ ಪೂಜಾಸ್ಥಳ ಶುದ್ಧೀಕರಿಸಿ ಪೂಜೆಯಲ್ಲಿರುವ ವಿಗ್ರಹಗಳಿಗೆ ಹೂವು,ತುಳಸಿಯನ್ನು ಅರ್ಪಿಸಬೇಕು. ಧೂಪ,ದ್ರವ್ಯ ಬೆಳಗಿ ವಿಷ್ಣು ಮಂತ್ರ,ಆರತಿಯೊಂದಿಗೆ ಪೂಜೆ ಮುಗಿಸಬೇಕು.ಬಡವರಿಗೆ ಆಹಾರ,ಬಟ್ಟೆ ದಾನ ಮಾಡಬೇಕು.ಅದು ಎಲ್ಲರಿಗೂ ಶುಭಫಲ ನೀಡುತ್ತದೆ.ಆ ದಿನ ಚಿನ್ನ ಖರೀಸುವದರಿಂದ ಸಂತೋಷ,ಸಮೃದ್ಧಿ ಪಡೆದುಕೊಳ್ಳುತ್ತಾನೆ ಎಂಬ ನಂಬಿಕೆಯಿದೆ.

ಧಾರ್ಮಿಕ ನಂಬಿಕೆಗಳ ಪ್ರಕಾರ ಅಕ್ಷಯತೃತೀಯ ದಿನದಂದು ಶ್ರೀರಾಮ ಚರಿತ ಮಾನಸ ಪಠಿಸಬೇಕು.ಅದರ ಜೊತೆ ವಿಷ್ಣುವಿನ ಹತ್ತನೇಯ ಅವತಾರ ಕಥೆಯನ್ನು ಓದಬೇಕು,ಅಥವಾ ಕೇಳಬೇಕು.ಇವುಗಳನ್ನು ಪಠಿಸುವದರಿಂದ ಋಷಿಮುನಿಗಳ,ಮಹಾಮುನಿಗಳ ದರ್ಶನ ಫಲ ಲಭಿಸುತ್ತದೆ.ಅಂದು ತುಳಸೀ ಜೀರಿಗೆ ನೀರನ್ನು ಬೆರಸಿದ ಹಾಲನ್ನು ಅರ್ಪಿಸಬೇಕು.ತುಳಸೀ ಪತ್ರೆ ಇಲ್ಲದೇ ವಿಷ್ಣುವಿನ ಆರಾಧನೆ ಅಪೂರ್ಣವೆಂದು ಪರಿಗಣಿಸಲಾಗಿದೆ.ಅಕ್ಷಯತೃತೀಯವನ್ನು ಸಂಭ್ರಮದಿಂದ ಆಚರಿಸಿ ಸಂತಸದಿಂದ ಬಾಳೋಣ.



ಗಿರಿಜಾ.ಎಸ್.
ದೇಶಪಾಂಡೆ.
ಬೆಂಗಳೂರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,